"1991ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "1991ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. *

6. ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕ, 1991

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು)

ಮಾನ್ಯ ಅಧ್ಯಕ್ಷರೆ :

ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕ, 1991ನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"1991ನೇ ಸಾಲಿನ ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ)

ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವುದು.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ :

"1992ನೇ ಸಾಲಿನ ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ)

ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ (ಮುಂದುವರಿದ ಚರ್ಚೆ)

ಉಪಾಧ್ಯಕ್ಷಿಣಿಯವರು : ಈಗ ವಿತ್ತೀಯ ಕಾರ್ಯಕಲಾಪಗಳು, ಮಾನ್ಯ ಶ್ರೀ ಡಿ.ಬಿ. ಚಂದ್ರೇಗೌಡರು...............

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ನಿನ್ನೆ ನಾನು ಮುಂಗಡ ಪತ್ರದ ಬಗ್ಗೆ ಚರ್ಚೆ ಮಾಡುತ್ತಾ ಈ ಸರಕಾರದ ಸಾಧನೆಯನ್ನು ಕಳೆದ ಬಾರಿ ಹೇಳಿದ್ದೆ. ಅಥವಾ ಶಾಸನ ಸಭೆಯ ಮುಂದೆ ಸರಕಾರದವರು ಹೇಳಿಕೊಂಡಂಥ ಯಾವುದೇ ಭರವಸೆಗೆ ಇದು ಪೂರಕವಾಗಿಲ್ಲ ಎಂಬ ಮಾತನ್ನು ಕೂಡ ಹೇಳಿದ್ದೆ. ವಿಶೇಷವಾಗಿ ಬರಗಾಲವನ್ನು ಪ್ರಸ್ತಾಪ ಮಾಡುತ್ತಾ ಸರಕಾರದವರು ಕುಡಿಯುವ ನೀರಿನ ವಿಚಾರವನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಹಿಂದಿನ ಸಾರಿ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಾಗಿ ೩೫ ಕೋಟಿ

ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಇದರ ಜೊತೆಗೆ ೨೫ ಕೋಟಿ ರೂಪಾಯಿಗಳನ್ನು ಅಡಿಶನಲ್ ರಿಸೋರ್ಸ್‌ನಿಂದ ಕೊಡುತ್ತೇವೆಂದು ಹೇಳಿ, ಈಗ ಶಾಸನ ಸಭೆಯ ಮುಂದೆ ಒಟ್ಟಾರೆ ಖರ್ಚಾಗಿರತಕ್ಕಂಥಾದ್ದು 21 ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ. ಆ ಕಾರಣವೇ ಫರ್‌ಫಾರ್ಮೆನ್ಸ್ ಬಜೆಟನ್ನು ಶಾಸನಸಭೆಯ ಮುಂದಿಡದೆ ಭರವಸೆಗಳು ಮತ್ತು ಶಾಸನಗಳಿಗೆ ಇರತಕ್ಕಂಥ ವ್ಯತ್ಯಾಸವನ್ನು ನಾವು ಈ ಸಭೆಯ ಮುಂದೆ ಅಥವಾ ಜನರಿಗೆ ತಿಳಿಸುವುದು ಕಷ್ಟವಾಗುತ್ತದೆ ಎಂಬ ಮಾತನ್ನು ಕೂಡ ಹೇಳಿದ್ದೇವೆ. ನಮಗೆ ಒಂದು ತಂತಿ ಕೂಡ ಬಂದಿದ್ದು ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದರಲ್ಲಿ ಮತ್ತೊಂದು ವಿಶೇಷ ಇದೆ. ಅದನ್ನೂ ತಮಗೆ ಓದಿ ಹೇಳುತ್ತೇನೆ.

"WATER SUPPLY STOPPED: CATTLES AND PUBLIC ARE SUFFERING"

ಇದಕ್ಕೆ ಉಳಿದ ಕಾರಣಗಳನ್ನು ಈಗಾಗಲೇ ನಾವು ಚರ್ಚೆ ಮಾಡಿದ್ದೇವೆ. ಇದು ಎಳಗಲವಾಡಿ ಗ್ರಾಮದಿಂದ ಬಂದಂಥ ತಂತಿ. ಇದಕ್ಕೆ ಇರುವ ವ್ಯವಸ್ಥೆಯೊಳಗೆ ಮತ್ತೊಂದು ದೋಷ ನಮಗೆ ಹೊಸದಾಗಿ ಸಿಕ್ಕಿದೆ. "MANDAL SECRETARY IS THE MAIN CAUSE : WANTED IMMEDIATE HELP."

ಹೀಗೆ ಒಂದು ಕಡೆ ಅಲೋಕೇಟ್ ಮಾಡಿರತಕ್ಕಂಥ ಹಣವನ್ನು ಸಾರ್ವಜನಿಕರಿಗೆ ಮೋಸ ಮಾಡಿ ಖರ್ಚು ಮಾಡದೇ ಇರತಕ್ಕಂಥದ್ದು.

ಇನ್ನೊಂದು ಕಡೆಯಿಂದ ಇಂಥ ಅಧಿಕಾರಿಗಳಿಂದ ತೊಂದರೆಗಳಿಂದ. ಈಗ ವಿದ್ಯುಚ್ಛಕ್ತಿ ವಿಭಾಗವನ್ನು ಸ್ವಲ್ಪ ಪರಿಶೀಲನೆ ಮಾಡೋಣ. ಖಾಸಗೀಕರಣದ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಆಡಿದ್ದಾರೆ. ಅದಕ್ಕೆ ಮುಂಚೆ ಕಳೆದ ಸಾರಿ ಆಯವ್ಯಯದಲ್ಲಿ ಮಾನ್ಯ ಆಗಿನ ಮಂತ್ರಿಗಳು ಜುಲೈ 12ನೇ ತಾರೀಖು (ಮಾನ್ಯ ರಾಜಶೇಖರಮೂರ್ತಿಯವರು) ಈ ಶಾಸನ ಸಭೆಗೆ ಕೊಟ್ಟಂಥ ಭರವಸೆಯಲ್ಲಿ 65 ಕೋಟಿ ಬಿಡುಗಡೆ ಮಾಡಿದ್ದೇವೆ. ಅದರ ಜೊತೆಗೆ ಹೆಚ್ಚುವರಿ ಹಣ 315 ಕೋಟಿ ರೂಪಾಯಿಗಳನ್ನು ಎಲೆಕ್ಟ್ರಿಸಿಟಿ ಬೋರ್ಡ್‌ಗೆ, 65 ಸಾವಿರ ಪಂಪ್‌ಸೆಟ್ಟುಗಳನ್ನು ಎನ್‌ರ್ಜೈಸ್ ಮಾಡಿದ್ದೇವೆ. ಒಂದು ಪಂಪುಸೆಟ್ಟಿಗೆ ಹತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಅದರಿಂದ 25 ಕೋಟಿ ರೂಪಾಯಿ ಫೈನಾನ್ಸ್ ಇನ್‌ಸ್ಟಿಟ್ಯೂಟ್‌ನಿಂದ ಅದು ಎಕ್ಸ್‌ಟ್ರಾ ಎರಡನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಶಾಸನ ಸಭೆಯಲ್ಲಿ ಹೇಳಿದ್ದರು. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ನಾವು ಹಾಕಿಕೊಂಡಂಥ ಗುರಿ. 40 ಸಾವಿರ ಪಂಪುಸೆಟ್ಟುಗಳು, ಈಗಾಗಲೇ 58 ಪಂಪುಸೆಟ್ಟುಗಳನ್ನು ಎನ್‌ರ್ಜೈಸ್ ಮಾಡಿದ್ದೇವೆ ಎಂದು ಇಲ್ಲಿ ಶಾಸನಸಭೆಗೆ ಹೇಳಿದ್ದಾರೆ. ಇಲ್ಲಿ ನಾವು ಯಾವುದನ್ನು ಸರಿ ಎಂದು ಹೇಳಬೇಕು? ನನ್ನ ಅನುಭವದಲ್ಲಿ ಇದನ್ನು ತಿಳಿಯುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಅವರೇ ಅರ್ಥಮಂತ್ರಿಗಳೂ ಆಗಿರುವುದರಿಂದ ಅವರು ಇಲ್ಲಿ ಇಲ್ಲ. ಅದರ ಅರ್ಥವನ್ನು ಹೇಳುತ್ತಾರೆ. ಎಂದು ಹೇಳಿ ನಾನು ಅಂದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳ ಖಾಲಿ ಕುರ್ಚಿಗೆ ಹೇಳಿ.

(ಗೊಂದಲ)

ಶ್ರೀ ಹೆಚ್.ವಿ. ಏಕಾಂತಯ್ಯ : ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವಾಗ ಸೌಜನ್ಯಕ್ಕಾದರೂ ಅವರು ಇರಬೇಡವೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವಾಗಲೇ ಈ ರೀತಿ ಆದರೆ ಹೇಗೆ? ನಿಜವಾಗಿಯೂ ನಮಗೆ ಒಂದು ರೀತಿಯ ನೋವಾಗುತ್ತಿದೆ. ನಾವು ಪದೇ ಪದೇ ಹೇಳುತ್ತೇವೆ ಎಂದು ಅಲ್ಲ. ಮಾನಸಿಕವಾಗಿಯೂ ನಮಗೆ ನೋವಾಗುತ್ತಿದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಇದು ಅವರಿಗೆ ಸಂಬಂಧಪಟ್ಟ ವಿಷಯ. ಅವರು ಇರಬೇಡವೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ವಿರೋಧ ಪಕ್ಷದ ನಾಯಕರು ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳನ್ನು ಕುರಿತು ಮಾತನಾಡುವಾಗ ಅವರು ಯಾರಿಗೆ ಹೇಳಬೇಕು? ಮಾನ್ಯ ಮುಖ್ಯ ಮಂತ್ರಿಗಳ ಖಾಲಿ ಕುರ್ಚಿಗೆ ಹೇಳಬೇಕು.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಈ ರೀತಿ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : (ಮಾನ್ಯ ಕಂದಾಯ ಸಚಿವರು) : ನಾಯಕರು ಹೇಳುವುದನ್ನೆಲ್ಲಾ ನಾನು ಬರೆದುಕೊಂಡಿದ್ದೇನೆ. ಮತ್ತೆ ನಾನು ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಏಕಾಂತಯ್ಯನವರು ತಾವು ತಮ್ಮ ಜಾಗಕ್ಕೆ ಬಂದು ಮಾತನಾಡಬೇಕು. ಇನ್ನು ಐದು ನಿಮಿಷದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ : ಇನ್ನು ಐದು ನಿಮಿಷದಲ್ಲಿ ನೋಡೋಣ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಡಿಸಾಲ್ವ್ ಮಾಡಬೇಕು ಎಂದು ಹೇಳಿ ಮಾತನಾಡಲಿಕ್ಕೆ ಹೋಗಿರಬಹುದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮಗೆ ಅದೇ ಕನಸು. ಅದನ್ನು ನೋಡಿ ನೋಡಿ ಸಾಕಾಗಿರಬೇಕು.

(ಗೊಂದಲ)

ಶ್ರೀ ವಾಟಾಲ್ ನಾಗರಾಜ್ : ನಮಗೆ ಕನಸೇನೂ ಇಲ್ಲ. ತಮಗೆ ಭಯ ಬಂದಿದೆ ಎಂದು ಹೇಳಿ ಇದನ್ನು ಕೇಳುತ್ತಿರುವುದು.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ : ದೇಶಪಾಂಡೆಯವರೇ, ನಿಮಗೆ ಒಂದು ವರ್ಷ ಕುಳಿತು ಸಾಕಾಯಿತೇ? ಸ್ವಲ್ಪ ದಿವಸ ಕುಳಿತುಕೊಳ್ಳಿ. ತೊಂದರೆಯೇನೂ ಇಲ್ಲ. ನಿಮ್ಮ ಜಗಳ ಏನಾಯಿತು, ಕೇಂದ್ರದಲ್ಲಿ ಸರ್ಕಾರ ಇಲ್ಲದ ಹಾಗೆ ಆಯಿತು. ನಮ್ಮ ಜಗಳದಿಂದ ನಾವು ಇಲ್ಲಿಯೇ ಇದ್ದೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕಾಂಗ್ರೆಸ್ ಸದಸ್ಯರುಗಳು ಬಹಳ ಬೆಚ್ಚು ಬಿದ್ದಿದ್ದೀರಿ. ಇದಕ್ಕೆ ಕಾರಣ ಏನು ಎಂದು ಗೊತ್ತಿಲ್ಲ. ಪ್ರತಿ ದಿನ ಇದ್ದ ಹಾಗೆ ತಾವ್ಯಾರು ಇಲ್ಲ.

(ಗೊಂದಲ)

ಉಪಾಧ್ಯಕ್ಷರು : ಶ್ರೀಯುತ ಚಂದ್ರೇಗೌಡರೇ, ತಾವು ಮುಂದುವರಿಸಿ.

(ಗೊಂದಲ)

ಶ್ರೀಮತಿ ದಮಯಂತಿ ಬೋರೇಗೌಡ : ನಿಮ್ಮದು ತಿರುಕನ ಕನಸು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ವಿದ್ಯುತ್ತನ್ನು ಖಾಸಗೀಕರಣ ಮಾಡಿ ಉತ್ಪಾದನೆಯನ್ನು ಹೆಚ್ಚು ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಬಹಳ ದೊಡ್ಡ ಆಸೆಯನ್ನು ಈ ರಾಜ್ಯದ ಜನರಿಗೆ ಕೊಟ್ಟರು. ಕನಿಷ್ಠ ಸೆಂಟ್ರಲ್ ಎಲೆಕ್ಟ್ರಿಸಿಟಿ ಆಕ್ಟಿನ ಪರಿಮಿತಿಯೊಳಗೆ ಇರತಕ್ಕಂಥ ಯಾವುದೇ ಒಂದು ಖಾಸಗಿ ವಿದ್ಯುತ್ ಘಟಕ ಇದುವರೆಗೂ ಕಾರ್ಯಾರಂಭ ಮಾಡಿಲ್ಲ.

ಈ ಒಂದು ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಾಗ ಅದಕ್ಕೆ ಬೇಕಾಗಿರತಕ್ಕ ಬೇಸಿಕ್ ಇನ್‌ವೆಸ್ಟ್‌ಮೆಂಟ್ಸ್ ಶೇಕಡ 60 ರಷ್ಟು ಮಾಡಬೇಕೆಂದು ಹೇಳಿ ಖಾಸಗಿ ವಿದ್ಯುಚ್ಛಕ್ತಿ ಉತ್ಪಾದಕರಿಗೆ ಒಂದು ರೀತಿಯ ಇನ್‌ವೆಸ್ಟ್‌ಮೆಂಟ್‌ನ ಬಗ್ಗೆ ಹೇಳಿದ್ದರೋ ಅಷ್ಟರಮಟ್ಟಿಗೆ ಇನ್‌ವೆಸ್ಟ್ ಮಾಡತಕ್ಕ ಒಬ್ಬರೇ ಒಬ್ಬ ಖಾಸಗಿ ಉದ್ಯಮಿ ಹೊರಬಂದದ್ದು ನನಗೆ ಇದುವರೆಗೂ ಕಾಣಲಿಲ್ಲ. ಮತ್ತೆ ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ಹೇಳುವುದಾದರೆ ಕೋಲ್‌ಗ್ಯಾಸ್ ಆಸ್ಟ್ರೇಲಿಯದವರು ಯಾರೋ ಬಂದಿದ್ದಾರೆ ಶೇಕಡ 10ರಷ್ಟು ರಸ್ಟ್ ಇದೆ. ಇಂಪೋರ್ಟ್ ಮಾಡಿಕೊಳ್ಳುತ್ತೇನೆ. ಖಾಸಗಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದರು. ಇದು ಈ ವರ್ಷಕ್ಕೆ ಸಾಧನೆ ಆಗತಕ್ಕ ಕೆಲಸವಲ್ಲ. ಇದು ಮುಂದೆ ಆಸ್ಟ್ರೇಲಿಯಾ ದೇಶದವರೊಂದಿಗೆ ಸಂಪರ್ಕ ಇಟ್ಟುಕೊಂಡು ಕೇಂದ್ರ ಸರ್ಕಾರದ ಅನುಮತಿ ಪಡೆದುಕೊಂಡು ಆ ಇನ್‌ವೆಸ್ಟ್‌ಮೆಂಟ್ ಅನ್ನು ಯಾರು ಮಾಡಬೇಕೆನ್ನತಕ್ಕ ನಿರ್ಣಯ ಮಾಡತಕ್ಕದ್ದು ಇದೆಲ್ಲ ಇದೆ. ಎಲ್ಲದಕ್ಕಿಂತ ಮೇಲಾಗಿ ಪ್ರತಿಯೊಂದು ಖಾಸಗಿ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಅದು ಕೋಲ್‌ಗ್ಯಾಸ್ ಇರಬಹುದು ಅಥವಾ ಆಯಿಲ್ ಬೇಸಸ್ ಇರಬಹುದು, ಇಲ್ಲವೇ ಇರಿಗೇಷನ್ ಬೇಸಸ್ ಇರಬಹುದು ಅಥವಾ ನ್ಯೂಕ್ಲಿಯರ್ ಅಟಾಮಿಕ್ ಥರ್ಮಲ್ ಪ್ರಾಜೆಕ್ಟ್ ಇರಬಹುದು. ಇದು ಯಾವುದನ್ನು ಮಾಡುವುದಾದರೂ ಮೊದಲನೆಯದು ನಮಗೆ ಕೇಂದ್ರಸರ್ಕಾರದ ಅನುಮತಿ ಬೇಕಾಗುತ್ತದೆ. ಇವೆಲ್ಲವನ್ನು ಮಾಡಿ ತಯಾರು ಮಾಡಿ ತೆಗೆದುಕೊಂಡು ಬಂದರೂ ಉತ್ಪಾದನೆ ಮಾಡುವಂತಹ ವಿದ್ಯುಚ್ಛಕ್ತಿಯನ್ನು ವಿತರಣೆಯ ಅಧಿಕಾರ ತಯಾರು ಮಾಡತಕ್ಕಂತಹವರಿಗೆ ಸಿಕ್ಕುವುದಿಲ್ಲ. ಅದನ್ನು ವಿತರಣೆ ಹೇಗೆ ಮಾಡಬೇಕು? ವಿತರಣೆಯನ್ನು ಕೆ.ಇ.ಬಿ.ಯವರು ಮಾಡಬೇಕಾಗುತ್ತದೆ. ಮೈಸೂರು ಪವರ್ ಕಾರ್ಪೊರೇಷನ್‌ನ್ನಿನವರು ಮಾಡಬೇಕಾಗುತ್ತದೆ. ಅದಕ್ಕಾಗಿ ಇದನ್ನು ಗ್ರಿಡ್‌ಗೆ ಹಾಕಬೇಕು. ಹೀಗೆ ಗ್ರಿಡ್‌ಗೆ ಹಾಕಿದಂತಹ ವಿದ್ಯುಚ್ಛಕ್ತಿ ಅವರಿಗೆ ಉತ್ಪಾದನೆ ಮಾಡಿದವರಿಗೆ ಸರಿಯಾದಂತಹ ಹಣವನ್ನು ಕೊಡಲಿಕ್ಕೆ ವ್ಯವಸ್ಥೆ ಕೂಡ ಇಲ್ಲ ಎನ್ನತಕ್ಕದ್ದು ಖಾಸಗಿ ಉತ್ಪಾದಕರ ಒಂದು ಶಂಕೆಯಾಗಿದೆ. ಇವೆಲ್ಲಾ ಪರಿಹಾರ ಮಾಡುವುದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಯೋಚನೆ ಮಾಡದೆ ಖಾಸಗಿಕರಣ ಮಾಡಬೇಕೆಂದು ಸುಮ್ಮನೆ ಹೇಳಿದರೆ ಹೇಗೆ? How does we do it? ಇವತ್ತು ವಿದ್ಯುಚ್ಛಕ್ತಿ ಪರಿಸ್ಥಿತಿ ಬಹುಶಃ ಈಗಿರತಕ್ಕ ಗ್ರಾಮೀಣ ಪ್ರದೇಶಗಳ ಸ್ಥಿತಿ ಅದರಲ್ಲೂ ವಿಶೇಷವಾಗಿ ನಾನು ಮೊದಲೆ ಪ್ರಸ್ತಾಪ ಮಾಡಿದ ಹಾಗೆ ಒಣ ಬೇಸಾಯದ

ಭೂಮಿಯನ್ನೆ ನಂಬಿಕೊಂಡಿರತಕ್ಕ ರೈತರಿಗೆ ಸರಿಯಾಗಿ ವಿದ್ಯುಚ್ಛಕ್ತಿ ಒದಗಿಸತಕ್ಕ ಒಂದು ಕಾರ್ಯಕ್ರಮವನ್ನು ಅವರು ಮಾಡುವುದಾದರೆ ಸ್ವಲ್ಪಮಟ್ಟಿಗೆ ರೈತ ಈ ಸಾರಿ ಬದುಕಬಹುದು. ಆ ವಿತರಣೆ ಕೆಲಸವೂ ಆಗುತ್ತಿಲ್ಲ. ವಿದ್ಯುಚ್ಛಕ್ತಿ ಅಭಿವೃದ್ಧಿ ಅಥವಾ ಸಾಧನೆಯನ್ನು ನೋಡಿದರೆ ಕಳೆದ ಸಾರಿ ಹೇಳಿದಂತಹ ಯಾವ ಆಸೆಯನ್ನು ಜನರಿಗೆ ಹುಟ್ಟಿಸಿದ್ದರೂ ನಾವು ಈಗ ಆ ನಿರಾಸೆಯನ್ನು ನೋಡುತ್ತಿದ್ದೇವೆ. ಇನ್ನು ಸಾರ್ವಜನಿಕ ಉದ್ದಿಮೆಗಳ ನಷ್ಟ. ಇದಕ್ಕೆ ಪರಿಹಾರ ಏನೆಂದರೆ ಖಾಸಗೀಕರಣ. ಸಮಾಜವಾದಿ ಸಿದ್ಧಾಂತದ ಆದರ್ಶಗಳನ್ನು ಬದುಕಿನ ಉದ್ದಕ್ಕೂ ಹಮ್ಮಿಕ್ಕೊಂಡು ಬಂದು ಮಾನ್ಯ ಬಂಗಾರಪ್ಪನವರು ಪರಿಹಾರ ಏನು ಮಾಡಬೇಕು ಎನ್ನತಕ್ಕದ್ದರ ಬಗ್ಗೆ ಆಲೋಚನೆ ಇಲ್ಲದೆ ಡಿಸ್‌ಇನ್‌ವೆಸ್ಟ್ ಮಾಡಬೇಕೆನ್ನತಕ್ಕ ಒಂದು ಪ್ರಪೋಸಲ್ ಅನ್ನು ಈ ಸಾರಿ ಈ ಬಜೆಟ್‌ನಲ್ಲಿ ಹಾಕಿದ್ದಾರೆ. ನಾನು ಈ ರೀತಿ ಖಾಸಗೀಕರಣಕ್ಕೆ ಅವರು ಕೈಹಾಕುವಾಗ ಈಗಿರತಕ್ಕ ಸಾರ್ವಜನಿಕ ಉದ್ದಿಮೆಗಳಲ್ಲಿರತಕ್ಕ ಉದ್ಯೋಗ ಏನಿದೆ; ಆ ಉದ್ಯೋಗಕ್ಕೆ ಧಕ್ಕೆ ಬರದ ರೀತಿಯಲ್ಲಿ ಅವರು ನಡೆಸಿಕೊಂಡು ಹೋಗತಕ್ಕ ಆಲೋಚನೆ ಏನು ಮಾಡಿದ್ದಾರೆ. ಎನ್ನುವುದನ್ನು ಹೇಳುವುದಿಲ್ಲ. ಅಥವಾ ಲಾಭ ಬರತಕ್ಕಂತಹ ಉದ್ಯಮಗಳ ಜೊತೆಗೆ ನಷ್ಟ ಆಗಿರತಕ್ಕ ಉದ್ಯಮಗಳನ್ನು ಸರಿದೂಗಿಸಿಕೊಂಡು ಹೋಗತಕ್ಕ ಆಲೋಚನೆಯನ್ನು ಕೂಡಾ ಮಾಡುವುದಿಲ್ಲ. ಖಾಸಗಿಯಲ್ಲಿ ಹಾಗೆ ಇದ್ದರೆ, ಕೈಗಾರಿಕೆಗಳಲ್ಲಿ ಕರ್ನಾಟಕ ಸ್ಟೇಟ್ ಫೈನಾನ್ಸ್ ಕಾರ್ಪೋರೇಷನ್‌ನಿಂದ ಆಗಲಿ, ಬ್ಯಾಂಕುಗಳಿಂದಾಗಲಿ, ಸಾಲ ಮಾಡಿರತಕ್ಕಂಥ ಉದ್ದಿಮೆಗಳೆಲ್ಲಾ ಸರಿಯಾಗಿ ನಡೆಯುತ್ತಿವೆಯೇ? ಸಾರ್ವಜನಿಕ ಉದ್ದಿಮೆಗಳು ಚೆನ್ನಾಗಿ ನಡೆಯುತ್ತಿಲ್ಲ ಎಂದಾಗ ಖಾಸಗಿ ಉದ್ದಿಮೆಗಳು ಎಷ್ಟು ಚೆನ್ನಾಗಿ ನಡೆಯುತ್ತಿವೆ? ಎಷ್ಟು ಜನ ಕೆಎಸ್‌ಎಫ್‌ಸಿಯಿಂದ ಹಣ ತೆಗೆದುಕೊಂಡು ಇನ್ನೂ ಕೈಗಾರಿಕೆಗಳು ಪ್ರಾರಂಭವಾಗದೆ ಇರತಕ್ಕಂಥವು, ಪ್ರಾರಂಭವಾಗಿ ಮುಚ್ಚಿರತಕ್ಕಂತಹವು ಮತ್ತು ಪ್ರೊಜೆಕ್ಟೆಡ್ ಇನ್‌ವೆಸ್ಟ್‌ಮೆಂಟ್ 100 ರೂಪಾಯಿ ಬೆಲೆ ಬಾಳತಕ್ಕಂಥ ಒಂದು ಉದ್ಯಮ ಪ್ರಾರಂಭಮಾಡುವುದಕ್ಕೆ 150 ರೂಪಾಯಿ ಎಂದು ಉದ್ದಿಮೆಗಳು ಲೆಕ್ಕ ಹಾಕುತ್ತಾರೆ. ಕೆಎಸ್‌ಎಫ್‌ಸಿಯಿಂದ ಮತ್ತು ಬೇರೆ ಬೇರೆ ಆರ್ಥಿಕ ಸಮುದಾಯಗಳಿಂದ ಏನು ಸಾಲ ಪಡೆಯಲಾಗಿದೆ ಪ್ರಾರಂಭ ಮಾಡುತ್ತೇವೆಂದು ಅವರದು ಇದರಲ್ಲಿ ಶೇಕಡ 5ರಷ್ಟು ಇನ್‌ವೆಸ್ಟ್‌ಮೆಂಟ್ ಇರುವುದಿಲ್ಲ, ಎಲ್ಲಾ ಫ್ಲೋಟೆಡ್ ಅಂಥ ಇಂಡಸ್ಟ್ರೀಸ್ ಬೇಕಾದಷ್ಟು ಮುಚ್ಚಿವೆ. ಇದಕ್ಕೆ ಕಾರಣವನ್ನು ಹುಡುಕುವಾಗ ಖಾಸಗಿಯಲ್ಲಿ ಎಷ್ಟು ಮುಚ್ಚಿವೆ? ಸಾರ್ವಜನಿಕ ಉದ್ದಿಮೆಗಳಲ್ಲಿ ಲುಕ್ಸಾನು ಆಗುತ್ತಿದೆ ಎಂದು ಹೇಳಿದರೆ ಇಲ್ಲಿ ಎಲ್ಲೂ ಚೆನ್ನಾಗಿ ನಡೆಯುತ್ತವೆ ಎಂದು ಅರ್ಥವೆ? ಆದ್ದರಿಂದ, ಈ ಖಾಸಗೀ ಉದ್ದಿಮೆಗಳು ಎಷ್ಟು ಮುಚ್ಚಿವೆ, ಇದಕ್ಕೆ ಕಾರಣ ಏನು?

ಶ್ರೀ ವಾಟಾಳ್ ನಾಗರಾಜ್ : 15 ಸಾವಿರ ಜನ ಕಾರ್ಮಿಕರು ಬೀದಿಯಲ್ಲಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಉದ್ದಿಮೆಗಳು ಸರಿಯಾಗಿ ನಡೆಯುತ್ತಿವೆಯೇ ಅಥವಾ ಇಲ್ಲವೇ ಎಂದು ನೋಡತಕ್ಕವರು ಯಾರು? ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ ಮ್ಯಾನ್ಡ್ ಬೈ ಐಎಎಸ್ ಆಫೀಸರ್ಸ್. ಇವರುಗಳನ್ನು ಬಿಟ್ಟು ಬೇರೆ ಯಾವುದಾದರೂ ಒಂದು ಹೊಸ ಏಜೆನ್ಸಿ ಮೂಲಕ ಈ ಐಎಎಸ್‌ಅಧಿಕಾರಿಗಳನ್ನು ಹೊರತುಪಡಿಸಿ, ಮಾಡಬೇಕು. ಈಗ ಏನಾಗಿದೆ, ಇದು ಬಹಳ ದಿವಸದಿಂದ ಇದೆ. ಈ ಇಂಡಸ್ಟ್ರೀಸ್ ಏತಕ್ಕೆ ಲುಕ್ಸಾನು ಆಗುತ್ತದೆ ಅಂದರೆ, ತಾಂತ್ರಿಕ ತಜ್ಞರು ಬಹುತೇಕ ಸಾರ್ವಜನಿಕ ಉದ್ದಿಮೆಗಳನ್ನು ಅದರ ಯಜಮಾನಿಕೆಯನ್ನು ನಿರ್ವಹಣೆ ಮಾಡಲಿಕ್ಕೆ ಅವಕಾಶ ಸಿಕ್ಕಲಿಲ್ಲ. ಎಲ್ಲಾ ಉದ್ದಿಮೆಗಳಿಗೂ ಐಎಎಸ್ ಅಧಿಕಾರಿಗಳನ್ನು ಹಾಕಿಬಿಡುತ್ತೇವೆ. ಆ ಅಧಿಕಾರಿಗಳನ್ನು ಅಲ್ಲಿಗೆ ಹಾಕಿದ ಮೇಲೆ ಅವು ಸರಿಯಾಗಿ ನಡೆಯುತ್ತಿದೆಯೋ, ಅಥವಾ ಇಲ್ಲವೇ ಎಂದು ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನಿಂದ ತನಿಖೆ ಮಾಡಿಸುತ್ತಾರೆ. ಅಲ್ಲಿ ಕೂಡಾ ಪುನಃ ಅವರೇ ತನಿಖೆ ಮಾಡುತ್ತಾರೆ. ಇದನ್ನು

ಬಿಟ್ಟು ಇಂಡಿಪೆಂಡೆಂಟ್ ಆಗಿ ತನಿಖೆ ಮಾಡಿಸತಕ್ಕಂಥ ಆಲೋಚನೆಯನ್ನು ಸರ್ಕಾರ ಮಾಡುತ್ತದೆಯೇ ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ತಿಳಿದುಕೊಳ್ಳುವುದಕ್ಕೆ ಬಯಸುತ್ತೇನೆ. ಇನ್ನು ಡಿಸ್ ಇನ್‌ವೆಸ್ಟ್‌ಮೆಂಟ್ ಬಗ್ಗೆ ನಾನು ದೀರ್ಘವಾಗಿ ಹೇಳುವುದಿಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿ, ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿ ರಿಪೋರ್ಟ್‌ಗಳು ಇವೆ, ಇವುಗಳನ್ನು ಏನಾದರೂ ಓದಲಿಕ್ಕೆ ಪ್ರಯತ್ನ ಮಾಡಿದ್ದೀರಾ? ನಾವು ಇನ್‌ವೆಸ್ಟ್‌ಮೆಂಟ್ ಎಂದು ಹೇಳುವಾಗ, ಹ್ಯೂಜ್ ಇನ್‌ವೆಸ್ಟ್‌ಮೆಂಟ್ ಮಾಡಿ ಎಂಪ್ಲಾಯ್‌ಮೆಂಟ್ ನಿರ್ಮಾಣ ಮಾಡುತ್ತೇವೆಂದು ಹೇಳಿದಾಗ, ಇದು ಬಹಳ ಮುಖ್ಯವಾಗುತ್ತದೆ. ಹಿಂದಿನ ಪ್ರಧಾನಮಂತ್ರಿಗಳಾದ ರಾಜೀವ್ ಗಾಂಧಿಯವರು ಒಂದು ಸಾರಿ ಒಂದು ಮಾತನ್ನು ಹೇಳಿದ್ದರು. ಆಂಧ್ರಪ್ರದೇಶಕ್ಕೆ ನಾಲ್ಕು ಸಾವಿರ ಕೋಟಿರೂಪಾಯಿ ಕೊಟ್ಟಿದ್ದೇವೆ. ಇದರಿಂದಾಗಿ 90 ಸಾವಿರ ಉದ್ಯೋಗ ನಿರ್ಮಾಣವಾಗುತ್ತದೆಂದು. ನಾನು ಅದನ್ನು ಲೆಕ್ಕ ಹಾಕಿದಾಗ ಒಂದೊಂದು ಉದ್ಯೋಗ ನಿರ್ಮಾಣ ಮಾಡುವುದಕ್ಕೆ ನಾಲ್ಕೂವರೆ ಲಕ್ಷ ರೂಪಾಯಿ ಖರ್ಚಾಗುತ್ತದೆ. 'ಇಷ್ಟು ಹಣವನ್ನು ಖರ್ಚುಮಾಡಿ ನಾವು ಒಂದು ಉದ್ಯೋಗವನ್ನು ನಿರ್ಮಾಣ ಮಾಡುತ್ತೇವೆ. I quote Idouis Fisher from "BIOGRAPHY OF GANDHI" "In America - Production and consequent employment.." ಗಾಂಧಿ ಅದಕ್ಕೆ ತದ್ವಿರುದ್ಧವಾದ ಒಂದು ಮಾತನ್ನು ಹೇಳುತ್ತಾರೆ.

"In India, full employment and consequent production"

ಈ ಬದಲಾವಣೆ ನಮಗೆ ಬೇಕಾಗಿರತಕ್ಕಂಥಾದ್ದು ಫಲ್ ಎಂಪ್ಲಾಯ್‌ಮೆಂಟ್ ಈ ದೇಶದಲ್ಲ ಅಪಾರವಾಗಿರತಕ್ಕಂಥ ಜನಶಕ್ತಿಯನ್ನು ಬಳಕೆ ಮಾಡಲಿಕ್ಕೆ ಯಾವ ರೀತಿ ನಾವು ಇನ್‌ವೆಸ್ಟ್‌ಮೆಂಟ್ ಮಾಡಬೇಕು ಎನ್ನತಕ್ಕ ಒಂದು ಆರ್ಥಿಕ ನೀತಿ, ಕೈಗಾರಿಕೆ ನೀತಿಯನ್ನು ನಿರೂಪಣೆ ಮಾಡತಕ್ಕ ಒಂದು ಸಮಯದಲ್ಲಿ ನಾವು ಇದ್ದೇವೆ.

Shoe Maker, "Small is beautiful" ಎನ್ನತಕ್ಕ ಮಾತನ್ನು ಹೇಳುತ್ತಾರೆ. ಮಾನ್ಯ ಹಿರಿಯ ಸದಸ್ಯರುಗಳು ಇಲ್ಲಿ ಇದ್ದಾರೆ. "Small is beautiful" ಎಂದು "ಷೂ ಮೇಕರ್ಸ್" ಹೇಳಿದರೂ ಅವರು ಏನು ಹೇಳುತ್ತಾರೆಂದರೆ, "production, distribution and consumption by the local people, with the local resources, ಎನ್ನತಕ್ಕದ್ದರಲ್ಲಿ ಷೂ ಮೇಕರ್‌ನ ಮಾತು ಭಾರತಕ್ಕಂತೂ ಅತ್ಯಂತ ಹತ್ತಿರವಾದ ಮಾತು. ಉತ್ಪಾದನೆ, ವಿತರಣೆ ಮತ್ತು ಅದನ್ನು ಉಪಯೋಗಮಾಡತಕ್ಕ ಈ 3 ಹಂತದಲ್ಲಿ ಸ್ಥಳೀಯ ಜನರು ಮತ್ತು ಸ್ಥಳೀಯವಾಗಿರತಕ್ಕ ರಿಸೋರ್ಸ್‌ನ್ನು ಬಳಸಬೇಕು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಈ ಮಾತುಗಳು ಮಾತುಗಳಾಗಿಯೇ ಉಳಿದಿವೆ. ಗಾಂಧಿಯವರು ಭಾರತದಲ್ಲಿರತಕ್ಕ ಇತಿಮಿತಿಗಳಿಗನುಗುಣವಾಗಿ ಸಣ್ಣ ಕೈಗಾರಿಕೆಗಳು ಆಯಾಯ ತಾಲೂಕು ಮತ್ತು ಗ್ರಾಮಗಳಿಗೆ ಸೀಮಿತ ಎನ್ನತಕ್ಕ ತಮ್ಮ ವಾದವನ್ನು ಆ ಕಾಲದಲ್ಲೇ ಇಟ್ಟಿದ್ದಾರೆ. ಆದರೆ ಇವತ್ತು ಗಾಂಧೀಜಿ ಯಾವ ನೆನಪಿನಲ್ಲೂ ಉಳಿದಿಲ್ಲ. ಇದನ್ನು ಯಾರೂ ಕೂಡಾ ಸೀರಿಯಸ್ ಆಗಿ ಆಲೋಚನೆ ಮಾಡತಕ್ಕ ಆಲೋಚನೆಯನ್ನು ಜಾರಿಗೊಳಿಸುವ ಪ್ರಯತ್ನವನ್ನು ಬರಬರುತ್ತಾ ಕಡಿಮೆಯಾಗುತ್ತಿದೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಮಾನ್ಯ ರಾಜಶೇಕರ ಮೂರ್ತಿಯವರು ಬಂದಮೇಲೆ ಅವರಿಂದಲಾದರೂ ನನಗೆ ಉತ್ತರ ಸಿಕ್ಕುತ್ತದೇನೋ ಎಂದು ಅಂದುಕೊಂಡಿದ್ದೇನೆ. ಏಕೆಂದರೆ, ಅವರು ಕೊಟ್ಟಂಥ ಮಾತಿನಂತೆ ಈ ಸರ್ಕಾರ ನಡೆದುಕೊಂಡಿದೆಯೇ? ನೀವು ಕೊಟ್ಟಂಥ ಮಾತು ಜಾರಿಯಾಗಿದೆಯೇ? ರಾಜ್ಯದ ಆರ್ಥಿಕ ಮಂತ್ರಿಗಳಾಗಿ ನೀವೇ ಈ ಸದನಕ್ಕೆ ಮಾತನ್ನು ಕೊಟ್ಟಿದ್ದೀರಿ...

ಶ್ರೀ ವಾಟಾಳ್ ನಾಗರಾಜ್ : ಈಗ ಅವರು ಮೂಕ ಪ್ರೇಕ್ಷಕರಾಗಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಬೇರೆ ಏನನ್ನೂ ಕೇಳುವುದಿಲ್ಲ. ತಾವು ಫೈನಾನ್ಸ್ ಕಮಿಷನನ್ನು ಅನೌನ್ಸ್ ಮಾಡಿದಿರಿ. ಇದನ್ನು ಮಾನ್ಯ ಸತೀಶ್‌ಚಂದ್ರರವವ ನೇತೃತ್ವದಲ್ಲಿ ಮಾಡಿದಿರಿ...

ಶ್ರೀ ಹೆಚ್. ಏಕಾಂತಯ್ಯ : ಚರ್ಚೆಯಲ್ಲಿ ಭಾಗವಹಿಸುವ ಮುಖಾಂತರ ಅವರು ಉತ್ತರ ಕೊಡುತ್ತಾರೆ.

(ಶ್ರೀ ಬಿ.ಎಂ. ಇದಿನಬ್ಬರವರು, ಅಧ್ಯಕ್ಷ ಪೀಠಕ್ಕೆ ಬಂದರು.)

ಶ್ರೀ ಡಿ.ಬಿ.ಚಂದ್ರೇಗೌಡ : Financial Wizards,

ಇದ್ದಾರೆ. ಇಲ್ಲಿ ನಾನು ಇವರನ್ನು ಚಾಲೆಂಜ್ ಮಾಡುವುದಕ್ಕೆ ಹೊರಟಿಲ್ಲ. ನಾನು ವಿಷಯವನ್ನು ತಿಳಿದುಕೊಳ್ಳಬೇಕಾಗಿದೆ. ಮುಂದೆ ನೀವು ಇರುತ್ತೀರೋ, ನಾವು ಇರುತ್ತೇವೋ ಗೊತ್ತಿಲ್ಲ. ಈ ಸದನದಲ್ಲಿ ನೀವು ಇದ್ದಾಗ ನಿಮ್ಮ ಆಲೋಚನೆಗಳನ್ನು, ಅಭಿಪ್ರಾಯಗಳನ್ನು Let us register here. ಅದು ಇಂಪ್ಲಿಮೆಂಟ್‌ಆಗುತ್ತದೋ, ಇಲ್ಲವೋ, ನೋಡೋಣ. ಕಳೆದ ಸಾರಿ 315 ಕೋಟಿ ರೂ.ಗಳನ್ನು ನೀವು ಕೊಡುತ್ತೇನೆಂದು ಜುಲೈ 12ನೇ ತಾರೀಖು ಈ ಶಾಸನ ಸಭೆಗೆ ಏನು ಹೇಳಿದ್ದಿರಿ ಅದನ್ನು ಬಿಡಿಬಿಡಿಯಾಗಿ ಬಡಿಸಿ ಹೇಳುತ್ತೇನೆ. ಈಗಾಗಲೇ ಕೆಲವು ವಿಷಯಗಳನ್ನು ನಾನು ಹೇಳಿದ್ದೇನೆ. ತಾವು ಫೈನಾನ್ಸ್ ಕಮಿಷನ್‌ನ್ನು ಅನೌನ್ಸ್ ಮಾಡಿದಿರಿ. ಇದನ್ನು ಮಾಡಿದ್ದು ಸತೀಶ್‌ಚಂದ್ರರವರ ನೇತೃತ್ವದಲ್ಲಿ "constituted for effecting economy in expenditure." ಎಂದು ಹೇಳಿದ್ದೀರಿ.

ಅದಕ್ಕೆ ಏಪ್ರಿಲ್ 5ನೇ ತಾರೀಖು ಕೊನೆಯ ದಿನ ಇಲ್ಲಿಗೆ 9 ತಿಂಗಳಾಯಿತು. ಅದಕ್ಕೆ ಗರ್ಭಧಾರಣೆ ಆಗಿದೆಯೇ? ಯಾವಾಗ ಡೆಲಿವರಿ ಆಗುತ್ತದೆ? ವರದಿಯನ್ನೇನಾದರೂ ಕೊಟ್ಟಿದ್ದಾರೆಯೆ? ಸತೀಶ್‌ಚಂದ್ರ ಕಮಿಷನ್ ಏನಾಗಿದೆ? ನಾವು ಒಂದು ಕಡೆ ಎಕಾನಮಿ ಮಾತನ್ನು ಹೇಳಿ ಅದಕ್ಕೆ ಬಹಳ ದೊಡ್ಡ ದೊಡ್ಡವರ ಹೆಸರನ್ನು ಹಾಕಿ ಸಮಿತಿಯನ್ನು ಮಾಡಿದೆವು. ಆದರೆ ಇದುವರೆಗೂ ಆ ಸಮಿತಿಯ ವರದಿ ಬರಲಿಲ್ಲ. ಏಪ್ರಿಲ್ 5ನೇ ತಾರೀಖಿಗೆ ಅದರ ಅವಧಿ ಮುಗಿಯುತ್ತದೆ. ಅಷ್ಟರೊಳಗೆ ಹೆರಿಗೆ ಆಗತಕ್ಕ ಸಂಭವ ಇದೆಯೆ ಎಂದು ನಾನು ಮಾನ್ಯ ರಾಜಶೇಕರ ಮೂರ್ತಿಯವರನ್ನು ಕೇಳುತ್ತಿದ್ದೇನೆ. ಏಕೆಂದರೆ ಈ ಸದನದಲ್ಲಿ ನನ್ನ ಪ್ರಶ್ನೆಗೆ ಇನ್ನಾರೂ ಉತ್ತರವನ್ನು ಹೇಳುವವರಿಲ್ಲ. ದಕ್ಷಿಣ ಭಾರತದ ಅರ್ಥಮಂತ್ರಿಗಳ ಸಭೆಯನ್ನು ಕರೆಯುತ್ತೇನೆ; ಮಾರಾಟ ತೆರಿಗೆಯ ಬಗ್ಗೆ ಅಂತರ್‌ರಾಜ್ಯ ಮಟ್ಟದಲ್ಲಿ ಚರ್ಚೆ ಮಾಡುತ್ತೇವೆ, ಸಮತೋಲನವನ್ನು ಮಾಡುತ್ತೇವೆ ಎನ್ನತಕ್ಕ ಮಾತನ್ನು ತಾವು ಹೇಳಿದಿರಿ. ಆದರೆ ಆ ಸಭೆ ಆಗಲಿಲ್ಲ. ಒಂದು ಉದಾಹರಣೆಯನ್ನು ಈಗಾಗಲೇ ತಮಗೆ ನಾನು ಹೇಳಿದ್ದೇನೆ. ಇನ್ನೂ ಅನೇಕ ವಿಚಾರಗಳನ್ನು ಹೇಳಬೇಕಾಗಿದೆ. ಪೆಪ್ಪರ್‌ಗೆ ಸಮತೋಲನ, ಕಾಫಿಗೆ ಕರ್ನಾಟಕದಲ್ಲಿ 13 ಪರ್ಸೆಂಟ್ ತೆರಿಗೆ, ಕೇರಳದಲ್ಲಿ 7 ಪರ್ಸೆಂಟ್ ತೆರಿಗೆ ತಮಿಳ್ನಾಡಿನಲ್ಲಿ ಮತ್ತೊಂದು ಪರ್ಸೆಂಟೇಜ್ ತೆರಿಗೆ ಇದೆ. ನಾನು ಕೇಳಿದಾಗ ತಾವು ಹೇಳಿದಿರಿ, ದಕ್ಷಿಣ ಭಾರತದ ಎಲ್ಲ ಆರ್ಥಿಕ ಮಂತ್ರಿಗಳನ್ನೂ ಕರೆದು ಸಭೆ ಮಾಡಿ ನಿರ್ಣಯವನ್ನು ತೆಗೆದುಕೊಂಡು ಸಮತೋಲನವನ್ನು ಕಾದುಕೊಂಡು ಬರುತ್ತೇನೆಂದು. ಆ ಸಭೆ ಏನಾದರೂ ಆಯಿತೆ? ಏನಾದರೂ ಸಭೆ ಆಯಿತೆ ಸ್ವಾಮಿ? ಇದುವರೆಗೆ ನಡೆಯಲಿಲ್ಲ. ಮಾರಾಟ ತೆರಿಗೆಗೆ ಒಂದು ಅಡ್ವೈಸರಿ ಕಮಿಟಿ ಅದನ್ನು ಪುನರ್ ನೇಮಕ ಮಾಡುತ್ತೇವೆ. ಮುಂದಿನ ಅಧಿವೇಶನದ ಒಳಗಾಗಿ ಈ ಪುನರ್ ನೇಮಕವನ್ನು ಈ ಸದನಕ್ಕೆ ಕೊಡುತ್ತೇವೆಂದು ತಾವು ಹೇಳಿದಿರಿ. ಅದು ಏನಾಯಿತು? ಸೇಲ್ಸ್‌ಟ್ಯಾಕ್ಸ್ ಅಪಲೇಟ್ ಟ್ರಿಬ್ಯುನಲಗಳನ್ನು ಪುನರ್ ರಚನೆ ಮಾಡುತ್ತೇವೆಂದು ಸಭೆಯಲ್ಲಿ ಕೊಟ್ಟ ಮಾತು ಏನಾದರೂ ಪುನರ್ ರಚನೆ ಆಯಿತೆ? ಮಾರಾಟ ತೆರಿಗೆಗಾಗಿ ಪ್ರತ್ಯೇಕ

ನ್ಯಾಯ ಮಂಡಲಿಗಳನ್ನು ರಚಿಸುವುದಾಗಿ ತಿಳಿಸಿದಿರಿ. ಆ ಸಮಿತಿ ಬರಲಿಲ್ಲ. ಇಂಟರ್‌ಡಿಪಾರ್ಟ್‌ಮೆಂಟಲ್ ಕಮಿಟಿಯ ಬಹಳ ಇಂಟರೆಸ್ಟಿಂಗ್ ಕಮಿಟಿ, ಕೋ ಆರ್ಡಿನೇಷನ್ ಕಮಿಟಿ, ಎಂಥ ಉದಾತ್ತ ತತ್ವಗಳಿವು. ಎಷ್ಟು ಆಸಕ್ತಿ, ಯಾರು ಯಾರು ವಿಶೇಷವಾಗಿ ಈ ಕಮಿಟಿ consisting of Commisssioner of Home, Finance Commissioner, Excise Commissioner, Industries & Commerce Commissioner, Commissioner of Commercial Taxes, Commissioner and Managing Director, Mysore Sales International Ltd., with special reference to Excise.

ಅವರು ಏನು ರೆಕಮೆಂಡೇಷನ್ ಕೊಡುತ್ತಾರೋ ಅದರ ಮೇಲೆ ಕಡಿಮೆ ಮಾಡಬೇಕೋ ಜಾಸ್ತಿ ಮಾಡಬೇಕೋ ಎನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಅವರು ಏನು ತೀರ್ಮಾನ ಕೊಟ್ಟರೋ ನನಗೆ ಗೊತ್ತಿಲ್ಲ. ಆದರೆ ತಾವು ಏನು ಹೇಳಿದಿರಿ, ಅಬಕಾರಿಯಲ್ಲಿ ಕಡಿಮೆ ಮಾಡಲು ಆಲೋಚನೆ ಮಾಡುತ್ತಿದ್ದೇವೆ, ಅದರಲ್ಲಿ ಒಂದು ನಿಬಂಧನೆ ಬಂದಿದೆ. ಸುಪ್ರೀಮ್ ಕೋರ್ಟಿನಲ್ಲಿರತಕ್ಕಂಥ ಕೇಸನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಎಂದು ಈ ವಿಚಾರದಲ್ಲಿ ನಿಮಗೆ ಬಹಳ ಆತುರ. ಸುಪ್ರೀಮ್ ಕೋರ್ಟಿನಲ್ಲಿರುವ ಕೇಸ್ ಅವರು ವಾಪಸ್ ತೆಗೆದುಕೊಳ್ಳಲಿಲ್ಲ. ಈಗ ಕಡಿಮೆ ಏನು ಆಯಿತು. ಸೇಲ್ಸ್‌ಟ್ಯಾಕ್ಸ್‌ನವರು ಹೇಳಿದರು ಕಡಿಮೆ ಮಾಡಿದ್ದೇವೆಂದು. ನೀವೇ ಹೇಳಿದಿರಿ ಕಡಿಮೆ ಮಾಡುತ್ತೇವೆಂದು, ಅದೊಂದೆ ನೆನಪು ಉಳಿಯಿತು. ಈ ಸರ್ಕಾರಕ್ಕೆ ಉಳಿದ ಯಾವ ನೆನಪುಗಳು ಇಲ್ಲ, ಇದು ಮಾತ್ರ ಉಳಿಯಿತು. ಯಾವುದು ಈ ಸರ್ಕಾರಕ್ಕೆ ಅನುಕೂಲವೋ ಆ ಅನೂಕೂಲಸಿಂಧು ನಿರ್ಣಯವನ್ನು ಮಾಡತಕ್ಕಂಥದ್ದು ಈ ಸರ್ಕಾರದ ನೀತಿ. ಆದ್ದರಿಂದ ಈ ಸಮಿತಿ ಬಗ್ಗೆ I want a categorical reply from the Chief Minister, who is the Finance Minister to the effefct that the solemn assurances that were given, what happened to reports of the Committee; that was announced by the Finance Minister.

ಮಾನ್ಯ ಅಧ್ಯಕ್ಷರೇ, ಅವರು ಇರುವುದರಿಂದ (ಮಾನ್ಯ ರಾಜಶೇಕರ ಮೂರ್ತಿಯವರು) ನನಗೆ ಕೋಟಿ ರೂಪಾಯಿಗಳು. ಬೇಷ್ ಎಂದು ಬೆನ್ನು ತಟ್ಟಿಕೊಂಡು ಬಿಟ್ಟಿದ್ದಾರೆ. ಅವರ ಬೆನ್ನು ಅವರೇ ತಟ್ಟಿಕೊಂಡುಬಿಟ್ಟಿದ್ದರು. ಆಗ ನಾವು ಎಲ್ಲ ಸೇರಿ ಬೆನ್ನು ತಟ್ಟಿದ್ದೆವು, ಈಗ ಅವರವರ ಬೆನ್ನು ಅವರೇ ತಟ್ಟಿಕೊಳ್ಳಬೇಕಾಗಿದೆ. ಆದರೆ ನನ್ನ ದೋಲು ನಾನೇ ಹೊಡೆದುಕೊಳ್ಳಬೇಕಾಗಿದೆ. ನನ್ನ ಪರವಾಗಿ ಯಾರು ಹೊಡೆಯುವವರಿಲ್ಲ. ಆದ್ದರಿಂದ ತಾವು ಏನು ಹೇಳಿದಿರಿ, ಬಡವರಿಗೆ 315 ಕೋಟಿ ರೂಪಾಯಿಗಳು, ಅದರ ಅಲೋಕೇಷನ್ಸ್ ಸುಮ್ಮನೆ ಒಂದು ಅಂದಾಜು, ಒಂದು ಪಟ್ಟಿ. ಡಿಸ್ಟ್ರಿಬ್ಯೂಷನ್ ಆಫ್ ಅಡಿಷನಲ್ ರಿಸೋರ್ಸಸ್ ತಮ್ಮ ಏಪ್ರಿಲ್ 11ನೇ ತಾರೀಖಿನ ಭಾಷಣದ ಪ್ರತಿ ನನ್ನ ಹತ್ತಿರ ಇದೆ.

ಅದರಲ್ಲಿ ಇರತಕ್ಕದ್ದನ್ನೇ ಕೊಟ್ಟಿದ್ದೇನೆ, ಬೇರೆ ಏನಿಲ್ಲ. ಎಲೆಕ್ಟ್ರಿಸಿಟಿ ಬೋರ್ಡಿಗೆ 25 ಕೋಟಿ. ಇದು ಏತಕ್ಕೆಂದರೆ 65 ಸಾವಿರ ಪಂಪ್‌ಸೆಟ್‌ಗಳನ್ನು ಎನರ್ಜೈಸ್ ಮಾಡುವುದಕ್ಕೆ ಹಣ ಕಡಿಮೆಯಾಗಬಾರದು. ಆದ್ದರಿಂದ 25 ಕೋಟಿ ಎಕ್ಸ್‌ಟ್ರಾ ಕೊಡುತ್ತೇವೆ + ಫೈನಾನ್ಸ್‌ಷಿಯಲ್ ಇನ್‌ಸ್ಟಿಟ್ಯೂಷನ್‌ನಿಂದ ಸಾಲ ತೆಗೆದುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿದ್ದೀರಿ. ಈ 65 ಸಾವಿರ ರೂಪಾಯಿಗಳಿಂದ ಎನರ್ಜೈಸ್ ಮಾಡುತ್ತೇವೆನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ ನಮ್ಮ ಗುರಿ ಇದ್ದುದು 45 ಸಾವಿರ, ಈಗ ನಾವು 55 ಸಾವಿರ ಮಾಡಿದ್ದೇವೆ. ಬರುವ ವರ್ಷಕ್ಕೆ 60 ಸಾವಿರ ಮುಗಿಸುತ್ತೇವೆಂದು ಹೇಳಿದ್ದಾರೆ. 65 ಸಾವಿರ ಪಂಪ್‌ಸೆಟ್‌ಗಳನ್ನು ಎನರ್ಜೈಸ್ ಮಾಡುತ್ತೇವೆಂದು, ಅಡಿಷನಲ್ ರಿಸೋರ್ಸಸ್ ಕೊಡುತ್ತೇವೆಂದು ತಾವು ಹೇಳಿದ್ದೀರಿ. ಈಗ ನಾವು ಹೇಳಿದ್ದೇ 40 ಆದರೆ 60ಕ್ಕೆ

ಬಂದು ಮುಟ್ಟಿದ್ದೇವೆಂದು ಬೆನ್ನು ತಟ್ಟಿಕೊಳ್ಳುತ್ತಿದ್ದೀರಿ. ಏನಾಯಿತು ಆ 65 ಸಾವಿರಕ್ಕೆ ಕೊಟ್ಟ ಮಾತು? ಅರ್ಬನ್ ವಾಟರ್ ಸಪ್ಲೈಗೆ 130 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ನಂತರ ಅಡೀಷನಲ್ ರಿಸೋರ್ಸ್‌ನಲ್ಲಿ 315 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದಿದ್ದೀರಿ ಅಡಿಷನಲ್ ಗ್ರಾಂಟ್‌ನಲ್ಲಿ 35 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದಿರಿ. ಈಗ ರೆಗ್ಯುಲರ್ ಗ್ರಾಂಟ್‌ನಲ್ಲಿ ದುಡ್ಡಿಲ್ಲ ಅಡಿಷನಲ್ ರಿಸೋರ್ಸಸ್ 315 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲ, ಅದು ಏನಾಯಿತು? ಇದರ ಬಗ್ಗೆ ಶಾಸನಸಭೆಗೆ ಯಾರೂ ವಿವರಣೆ ಕೊಡಬೇಕು? ತಾವು ಕೊಡುತ್ತೀರೋ (ರಾಜಶೇಖರ ಮೂರ್ತಿ ಅವರನ್ನು ಕುರಿತು) ಅಥವಾ ಈಗಿರತಕ್ಕ ಹಣಕಾಸಿನ ಮಂತ್ರಿ ಮತ್ತು ಮುಖ್ಯ ಮಂತ್ರಿಗಳು ಕೊಡುತ್ತಾರೋ ಗೊತ್ತಿಲ್ಲ. ಅಡಿಷನಲ್ ಗ್ರಾಂಟ್ 25 ಕೋಟಿ, ರೆಗ್ಯುಲರ್ ಗ್ರಾಂಟ್ 35 ಕೋಟಿ ಅಂದರೆ ಒಟ್ಟು 60 ಕೋಟಿ ಆಯಿತು. ಖರ್ಚು ಮಾಡಿದ್ದು 21 ಕೋಟಿ ಎಂದು ಮುಖ್ಯ ಮಂತ್ರಿಗಳು ಹೇಳುತ್ತಾರೆ. ಉಳಿದ 39 ಕೋಟಿ ರೂಪಾಯಿಗಳನ್ನು ಈ ಶಾಸನ ಸಭೆಯ ಮೂಲಕ ನಾಡಿನ ಜನತೆಗೆ ಕೊಡುತ್ತೇವೆಂದು ಮಾತು ಕೊಟ್ರಲ್ಲ ಆ ಹಣ ಏನಾಯಿತು? ರೈತರಿಗೆ ಯಾರು ಜವಾಬು ಹೇಳಬೇಕು? ನಿಮ್ಮಿಂದ ಸಾಧ್ಯವಾಗದಿದ್ದರೆ ಈ ಸದನದ ಮೂಲಕ ಕರ್ನಾಟಕ ನಾಡಿನ ಜನ ಪ್ರಶ್ನೆ ಮಾಡುತ್ತಿದ್ದಾರೆ. ದಯವಿಟ್ಟು ಇದಕ್ಕೆ ಉತ್ತರ ಹೇಳಿ, ರೂರಲ್ ಬೋರ್‌ವೆಲ್‌ಗಳಿಗೆ ಎಕ್ಸ್‌ಟ್ರಾ ಅಡೀಷನಲ್ ಗ್ರಾಂಟ್ 25 ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದ್ದೀರಿ. ನಾವು ಇವೊತ್ತು ಒಂದೊಂದು ಕ್ಷೇತ್ರಕ್ಕೆ ಒಂದೊಂದು ಊರಿಗೆ ಬೋರ್‌ವೆಲ್ ಕೊಡಿ ಎಂದು ಭಿಕ್ಷಾ ಪಾತ್ರೆ ಹಿಡಿದುಕೊಂಡು ನಿಲ್ಲುತ್ತಿದ್ದೇವೆ. ಏತ ನೀರಾವರಿ ಬಗ್ಗೆ ಹೇಳುವುದಾದರೆ ನಾವು ಮಲೆನಾಡಿನಿಂದ ಬರತಕ್ಕ ಜನ ನದಿಯ ಮೂಲದಲ್ಲಿರತಕ್ಕ ಜನರಿಗೆ ನದಿಯ ನೀರಿನ ಉಪಯೋಗವಾಗುತ್ತಿಲ್ಲ ಅದಕ್ಕೋಸ್ಕರ ಏತ ನೀರಾವರಿ ಮಾಡಿ ಎಂದು ಕೇಳಿದ್ದೇವೆ. ಇದಕ್ಕೆ ನೀವು 75 ಕೋಟಿ ರೂಪಾಯಿಗಳನ್ನು ಇದಕ್ಕೆ ಇಟ್ಟಿರುವುದು. ಇದು ರೆಗ್ಯುಲರ್ ಬಜೆಟ್‌ನಲ್ಲಾದರೆ ಅಡಿಷನಲ್ ಆಗಿ 25 ಕೋಟಿ ರೂಪಾಯಿಗಳು ಎಕ್ಸ್‌ಟ್ರಾ ಬಜೆಟ್ಟಿನಲ್ಲಿ ಅಂದರೆ ಒಟ್ಟು 100 ಕೋಟಿ ರೂಪಾಯಿಗಳು ಏತನಿರಾವರಿಗಾಗಿ ಇಟ್ಟಿರುವುದು ಆದರೆ ಯಾವುದಾದರೂ ಒಂದು ಏತ ನೀರಾವರಿ ಯೋಜನೆ ಪೂರ್ಣವಾಗಿದೆಯೆ? ನೂರು ಕೋಟಿ ರೂಪಾಯಿಗಳನ್ನು ಕೊಟ್ರಲ್ಲ, ಇದರಿಂದ ಯಾರಿಗೆ ಮೋಸ ಮಾಡುತ್ತಿದ್ದೀರಿ? ಈ ನಾಡಿನ ಜನರಿಗೆ ಈ ರೀತಿ ಶಾಸನಸಭೆಯಲ್ಲಿ ಭರವಸೆ ಕೊಟ್ಟು ಅದನ್ನು ನೆರವೇರಿಸದಿದ್ದರೆ ಈ ಶಾಸನಸಭೆಯಲ್ಲಿ ವಿಶ್ವಾಸ ಉಳಿಯುತ್ತದೆಯೆ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಒಂದೂ ಯೋಜನೆ ಪೂರ್ತಿಯಾಗಿಲ್ಲ ವೆಂದಿರಿ. ನೀವು ಕಳೆದ 5-6 ವರ್ಷಗಳಲ್ಲಿ ಪೂರ್ತಿಯಾಗುವ ಹಂತಕ್ಕೆ ತಂದಿದ್ದರೆ ನಾವು 5-6 ತಿಂಗಳಲ್ಲಿ ಮೂರ್ತಿ ಮಾಡಿ ಹಾಕುತ್ತಿದ್ದೆವು.

ಶ್ರೀ ಡಿ.ಬಿ. ಚಂದ್ರೇಗೌಡ: ಈಗ ಸ್ವಿಚ್ ಹಾಕಿ. ಏತ ನೀರಾವರಿಗೆ ಖರ್ಚು ಮಾಡುವುದಕ್ಕೆ ನೂರು ಕೋಟಿ ರೂಪಾಯಿಗಳನ್ನು ಇಟ್ಟು ಅದನ್ನು ಖರ್ಚು ಮಾಡಿದ್ದೀರಾ? ಖರ್ಚು ಮಾಡಿದ್ದರೆ ಅದರ ಲೆಕ್ಕ ಕೊಡಿ. ಪರ್‌ಫಾರ್ಮೆನ್ಸ್ ಬಜೆಟ್ ಕೊಡಿ. ಅದು ಇಲ್ಲದಿರುವುದರಿಂದ ಚರ್ಚೆ ಮಾಡುವುದು ಕಷ್ಟವಾಗುತ್ತದೆ. ನನ್ನ ಭಾಷಣದ ಪ್ರಾರಂಭಿಕ ಹಂತದಲ್ಲೇ ಹೇಳಿದ್ದೇನೆ. ಹೆಗಡೆಯವರ ಕಾಲದಲ್ಲಿ ಪರ್‌ಫಾರ್ಮೆನ್ಸ್ ಬಜೆಟ್ ಕೊಟ್ಟಿದ್ದರು. ಇದು ಬಾರದಿದ್ದರೆ ಜನರಿಗೆ ಸರ್ಕಾರ ಮಾಡತಕ್ಕ ಮೋಸ ತಿಳಿಯುವುದಿಲ್ಲ. ಇಲ್ಲದಿದ್ದರೆ ಇವನ್ನು ಉದ್ದೇಶಪೂರ್ವಕ ಮೋಸ ಎಂದು ನಾನು ಹೇಳದೇ ವಿಧಿ ಇಲ್ಲ. ಲೋಕೋಪಯೋಗಿ ರಸ್ತೆಗಳಿಗೆ ಅಡಿಷನಲ್ ಗ್ರಾಂಟ್ 25 ಕೋಟಿ ಕೊಟ್ಟಿದ್ದಾರೆ. ಈ ಸಾರಿಯ ಆಯವ್ಯಯ ಭಾಷಣದಲ್ಲಿ ಹೇಳಿದ್ದಾರೆ, ನ್ಯಾಷನಲ್ ಹೇವೇಗೆ ದುಡ್ಡು ಜಾಸ್ತಿ ಕೊಟ್ಟಿದ್ದೇವೆ ಎಂದು. ಹೋದ ವರ್ಷ ಕೊಟ್ಟ ದುಡ್ಡು

ಏನಾಯಿತು? ನಾನು ರೆಗ್ಯುಲರ್ ಗ್ರಾಂಟ್ ಕೇಳುವುದಿಲ್ಲ. 25 ಕೋಟಿ ರೂಪಾಯಿ ಅಡಿಷನಲ್ ಗ್ರಾಂಟ್ ಕೊಟ್ರಲ್ಲ ಅದು ಏನಾಯಿತು? ಇದಕ್ಕೆ ಸರ್ಕಾರ ಏನು ಉತ್ತರ ಹೇಳುತ್ತದೆ? ಕೊಂಕಣ ರೈಲ್ವೆಗೆ 25 ಕೋಟಿ ರೂಪಾಯಿಗಳನ್ನು ಅಡಿಷನಲ್ ಗ್ರಾಂಟ್ ಕೊಟ್ರಲ್ಲ ಅದರ ಲೆಕ್ಕ ಬರಲಿಲ್ಲ. ಬಾರ್ಡರ್ ಏರಿಯಾ ಡೆವಲಪ್‌ಮೆಂಟಿನ 10 ಕೋಟಿ ರೂಪಾಯಿ ಕೊಟ್ಟಿದ್ದೀರಿ ಹೈದರಾಬಾದ್ ಡೆವೆಲಪ್‌ಮೆಂಟ್ ಅಥಾರಿಟಿ ಮಾಡಿದ್ದೇವೆಂದು ಬಹಳ ಬೆನ್ನು ತಟ್ಟಿಕೊಂಡರು. ಸಂತೋಷ. ನಾನು ಆಗ ಇದರ ಕೀರ್ತಿ ಹೆಗಡೆಯವರಿಗೆ ಹೋಗಬೇಕೆಂದು ಹೇಳಿದೆ. ಆಗ ಭಾರೀ ಗಲಾಟೆ ಮಾಡಿದರು ಈ ಸಂದರ್ಭದಲ್ಲಿ ನಾನು ಒಂದು ಕರೆಸ್ಪಾಂಡೆನ್ಸ್‌ನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಇದು ನಾನು ಮಾಡಿದ್ದಲ್ಲ. ಸರ್ಕಾರಕ್ಕೆ ಹೆಗಡೆಯವರು ಈ ಹೆಸರು ಹೇಳಿದ ಕೂಡಲೇ ಒಂದು ರೀತಿಯ ಕಾಯಿಲೆ ಅಲರ್ಜಿ. ಹೆಗಡೆಯವರು 40 ಕೋಟಿ ರೂಪಾಯಿಗಳನ್ನು ಪ್ಲಾನಿಂಗ್ ಕಮಿಟಿಗೆ ಅಡಿಷನಲ್ ಗ್ರಾಂಟ್ ಆಗಿ ಹೈದರಾಬಾದ್ ಡೆವಲಪ್‌ಮೆಂಟ್ ಏರಿಯಾಕ್ಕೆ ಕೊಡಲಾಗಿದೆ ಎಂದು ಹೇಳಿದಾಗ, ಈಗಿನ ಮುಖ್ಯ ಮಂತ್ರಿಗಳು ಅವರಿಗೆ ಒಂದು ಪತ್ರ ಬರೆಯುತ್ತಾರೆ. ಏಕೆಂದರೆ ಶಂಕೆ ಅವರಿಗೆ. ಶ್ರೀಮಾನ್ ಬಂಗಾರಪ್ಪನವರು ರಾಮಕೃಷ್ಣ ಹೆಗಡೆ ಅವರನ್ನು ಕಾಂಟಾಕ್ಟ್ ಮಾಡಿ "ತಾವು ಹೇಳಿದ್ದೀರಿ 40 ಕೋಟಿ ರೂಪಾಯಿಗಳನ್ನು ಹೆಚ್ಚು ಕೊಟ್ಟಿದ್ದೇವೆ ಎಂದು. ಆದರೆ ಈ ಹಣ ಬಿಡುಗಡೆ ಆದುದಕ್ಕೆ ಯಾವ ದಾಖಲೆಗಳಿಲ್ಲ, ದಯಮಾಡಿ ಅದರ ಬಗ್ಗೆ ವಿವರವಾಗಿ ತಿಳಿಸಿ" ಎಂದು ಪತ್ರ ಬರೆಯುತ್ತಾರೆ. ರಾಮಕೃಷ್ಣಹೆಗಡೆ ಯೋಜನಾ ಆಯೋಗವನ್ನು ಬಿಟ್ಟಮೇಲೆ ಮೊನ್ನೆ ಬಂಗಾರಪ್ಪನವರು ಬರೆದಿದ್ದಾರೆ. ಟೆಲಿಫೋನ್ ಮಾಡಿ ಕೇಳುತ್ತಾರೆ. ನಮ್ಮ ರಾಜ್ಯಕ್ಕೆ ಯಾವಯಾವ ಭಾಗದಲ್ಲಿ ಎಷ್ಟು ಹಣ ಬರಬೇಕು ಎಂದರೆ ಅದರ ಬಗ್ಗೆ ಅಷ್ಟು ಆಸಕ್ತಿ. ಬರೀ ಟೆಲಿಫೋನ್ ಮಾಡುತ್ತಾರೆ. "With reference to your telephonic talk you had with me this afternoon, I am enclosing herewith a letter addressed to the Deputy Chairman of the Planning Commission Sri Mohan Dharia."

ಟೆಲಿಫೋನ್ ಹೋದ ತಕ್ಷಣವೇ ಮೋಹನ್‌ಧಾರಿಯಾ ಅವರಿಗೆ ಪತ್ರ ಬರೆಯುತ್ತಾರೆ .It is dated 19th Jan. 1991.

"At the time of finalising the Annual Plan of Karnataka for 90-91 when Sri Veerendra Patil was the Chief Minister, an outlay of Rs 40. Crores was allotted for the development of Hyderabad-Karnataka Area. This backward area was neglected for decades and only after integration the Karnataka Government has taken a decision to set up a separate development board for this area. The Chief Minister of Karnataka Sri S. Bangarappa has told me to-day that the records do not show that such a decision was taken by the Planning Commission. I am sure, if you could call for the proceedings of the Planning Commission it will be seen that the allotment was specially made. However, I would like to confirm that such a decision was taken at the time of finalising the annual plan of Karnataka for the year 1990-91.

ಶ್ರೀ ಮೋಹನ್ ಧಾರಿಯಾ ಅವರು ಆ ಪತ್ರಕ್ಕೆ ಉತ್ತರ ಬರೆಯುತ್ತಾರೆ. "Kindly refer to your letter of January 1991 regarding the outlay of Rs. 40 crores for the development of Hyderabad-Karnataka Area in the Annual Plan for 1990-91. I have verified the summary record of the discussion on the

Annual Plan 1990-91 for Karnataka. The records indicate that it was decided to provide an additional outlay of Rs 40 crores in the Annual Plan 1990-91 for Karnataka exclusively for the development of Hyderabad–Karnataka Area. As against an outlay of Rs 1080 crores earlier arrived at, annual plan 1990-91 for Karnataka was fixed up at Rs 1,120 crores in order to accommodate an out lay of Rs 40 crores agreed to exclusively for the development of Hyderabad Karnataka Area.

ಆಗ ನಾನು ಹೇಳಿದರೆ, ಹೆಗಡೆಯವರು ಎಂದರೆ ಅಲರ್ಜಿ ಅವರಿಗೆ. ಹೆಗಡೆಯವರ ವಿಚಾರ ಎತ್ತಿದಕೂಡಲೇ ಅಲರ್ಜಿ. ಕನಿಷ್ಠ ರಾಜ್ಯದ ಆಸಕ್ತಿಯಿಂದ ಮಾಡಿದ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸುವ ಆಸಕ್ತಿ ಇಲ್ಲದಿದ್ದರೆ ಗಂಭೀರವಾಗಿ ಕುಳಿತುಕೊಂಡರೆ ಸಾಕು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ವೀರೇಂದ್ರ ಪಾಟೀಲರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮುಖ್ಯಮಂತ್ರಿಗಳಿಗೆ ಶಂಕೆ ಯಾರು ಮಾಡಿದರು ಎಂದು ರಾಮಕೃಷ್ಣ ಹೆಗಡೆಯವರು ಮಾಡಿದರೆ ಅವರಿಗೆ ಕ್ರೆಡಿಟ್ ಬಂದುಬಿಟ್ಟರೆ ಎಂದು ಶಂಕೆಯಾಗಿದೆ. ಅದಕ್ಕೆ ಪತ್ರ ಓದಿದೆ.

ಶ್ರೀ ಎಂ.ವೈ. ಗೋರ್ಪಡೆ: ಹೈದರಾಬಾದ್-ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ಅಡಿಷನಲ್ ರಿಸೋರ್ಸಸ್ ಕರ್ನಾಟಕಕ್ಕೆ ಬರಲಿಲ್ಲ. ನಮ್ಮ ರಿಸೋರ್ಸಸ್ ಉಪಯೋಗಿಸುತ್ತಿದ್ದೇವೆ. ಆ ಪಾಯಿಂಟನ್ನು ನೀವು ಪ್ರೆಸ್ ಮಾಡಬೇಕಾಗಿತ್ತು. ನಾವೆಲ್ಲರೂ ಪ್ರೆಸ್ ಮಾಡಬೇಕಾಗಿತ್ತು, ಪ್ಲಾನ್ ಏನಿದೆ ಅದಕ್ಕೆ ಅಡಿಷನಲ್ಲಾಗಿ ಬಂದಿದ್ದರೆ ಸಾವಿರಾರು ಧನ್ಯವಾದಗಳನ್ನು ನಾವು ಕೊಡಬಹುದಾಗಿತ್ತು.

Sri D.B.CHANDRE GOWDA: I am quoting the letter of the Dy. Chairman of the Planning Commission, New Delhi

Sri M.Y.GHORPADE: The point is at the we have not received additional funds from the central allocations.

ಫಾರ್ಮಲ್ಲಾಗಿ ನಾವು ಅಲೋಕೇಷನನ್ನು ಒಪ್ಪಿರಬಹುದು, ನಮ್ಮ ದುಡ್ಡನ್ನು ನಾವು ಯಾವ ರೀತಿ ಖರ್ಚು ಮಾಡಬೇಕೆಂದು ಹೇಳಿ. ಆದರೆ ಅವರ ಕಡೆಯಿಂದ ಪ್ಲಾನ್ ಅಸಿಸ್ಟೆನ್ಸ್ ನಮಗೆ ಏನು ಬರಬೇಕೋ ಅದಕ್ಕೆ ಅಡಿಷನಾಲಿಟಿ ಇಲ್ಲ ಎಂದರೆ ಅಡಿಷನಲ್ಲಾಗಿ ಅವರ ಕಡೆಯಿಂದ ಜಾಸ್ತಿ ಹಣ ನಮಗೆ ಬಂದಿಲ್ಲ.

Sri D.B. CHANDRE GOWDA: Please ask your Finance Minister and the Chief Minister whether this government has even put forward its case before the Finance Commission. Please ask this Government.

Sri M.Y. GHORPADE: We all know though we put forward this case we have not yet received any response. We have not received additional funds from central assistance for Hyderabad-Karnataka development. They might have given formal approval to the State to draw 40 or 50 crore rupees, but there is no additional assistance on that score as far as Hyderabad-Karnataka area is concerned.

ಶ್ರೀ ಎಂ, ರಾಜಶೇಖರಮೂರ್ತಿ: ನಾನು ಪೊಸಿಷನ್ ಕ್ಲಾರಿಫೈ ಮಾಡುತ್ತೇನೆ. ಪ್ಲಾನ್ ಅಪ್ರೂವ್ ಆಗಿದ್ದು 1080 ಕೋಟಿಗೆ 40 ಕೋಟಿ ಅಡಿಷನಲ್ಲಾಗಿ ಹೈದರಾಬಾದ್ ಕರ್ನಾಟಕ ಅಭಿವೃದ್ದಿಗೆ ಕೊಡುತ್ತೇನೆ ಎಂದು ಹೇಳಿದರು. ಒಟ್ಟು 1120 ಕೋಟಿಗೆ ಪ್ಲಾನ್ ಅಪ್ರೂವ್ ಆಗಿದ್ದು. ಅದು ಆದಮೇಲೆ ನಾವು 35 ಕೋಟಿಯನ್ನು ಸೇರಿಸಿದ್ದೇವೆ ಅದಕ್ಕೆ. ಏನು ಈ 40 ಕೋಟಿ ಅಡಿಷನಲ್ ಅಮೌಂಟ್ ಕೊಡುತ್ತೇವೆ ಎಂದು ಹೇಳಿದರು. ಅದಕ್ಕೆ ಕೇಂದ್ರ ಸರ್ಕಾರದಿಂದ ಮ್ಯಾಚಿಂಗ್ ಗ್ರಾಂಟ್ ಕೊಡಬೇಕಲ್ಲಾ. ಪ್ಲಾನ್ ಅಮೌಂಟ್ ಕೊಡುಗೆ ಅದು ನಮಗೆ ಬಂದಿಲ್ಲ. ಸ್ಟೇಟ್ ಗೌರ್ನಮೆಂಟ್‌ನವರು ಅದಕ್ಕೆ ಬರೆದಿದ್ದಾರೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ.

ಶ್ರೀ ಸಿ. ಬೈರೇಗೌಡ : ನನಗೆ ಅನುಮಾನ ಏನೆಂದರೆ ಈ ಯೋಜನೆಯನ್ನು ತಾವು ಸೇರಿಸಿದ್ದೀರಿ ಎಂದು ಹೇಳುವುದರಲ್ಲಿ ಏನು ಅರ್ಥ? ಕೇಂದ್ರಕ್ಕೆ ಹೋಗಿ ನಮಸ್ಕಾರ ಮಾಡಿ, ನೀವು ಸೇರಿಸಿ ಎಂದು ಕೇಳುವುದರಲ್ಲಿ ಏನು ಅರ್ಥ? ಅಡಿಷನಲ್ ಯೋಜನೆಯಲ್ಲಿ 40 ಕೋಟಿ ರೂ. ಸೇರಿದೆ. ಅದಕ್ಕೆ ಕೇಂದ್ರ ಸರ್ಕಾರದ ಸೂತ್ರದ ಪ್ರಕಾರ ಹಣ ಬರಲೇಬೇಕಾಗುತ್ತದೆ. ಅದು ಬರದೇ ಇದ್ದರೆ ಈ ಯೋಜನೆಯಲ್ಲಿ ಸೇರಿಸಿದ್ದೇವೆ ಎಂದು ಹೇಳುವುದರಲ್ಲಿ ನಾವು ಸೇರಿಸಿದ್ದೇವೆ ಎಂದು ಮತ್ತೆ ಯಾರೋ ಹೇಳಿಕೊಳ್ಳುವುದರಲ್ಲಿ ಅರ್ಥವೇ ಇಲ್ಲ, ಏನೂ ಅರ್ಥ ಇಲ್ಲ ಇದಕ್ಕೆ.

ಶ್ರೀ ಡಿ.ಬಿ. ಚಂದ್ರೇಗೌಡ: ಇರತಕ್ಕ ವಸ್ತುಸ್ಥಿತಿಯನ್ನು ನಾನು ಇಲ್ಲಿ ಇಟ್ಟೆ ಸರ್ಕಾರದ ಆಸಕ್ತಿ ಬಗ್ಗೆ ಮಾತನಾಡುತ್ತಾ ಏಕೆ ಹೇಳಿದೆ ಎಂದರೆ 1988-89 1989-90 ನೈನ್ತ್ ಫೈನಾನ್ಸ್ ಕಮೀಷನ್ ತಮ್ಮ ಬೇಡಿಕೆಯನ್ನು ಸರ್ಕಾರ ಇಡಬೇಕಲ್ಲ? ಇವತ್ತಿನವರೆಗೆ ಈ ಸರ್ಕಾರದಿಂದ ಡಿಮಾಂಡ್ ಇಲ್ಲಿಂದ ಹೋಗಿಲ್ಲ. ಪ್ಲಾನಿಂಗ್ ಕಮೀಷನ್‌ದು ಅದು ಬೇರೆ. ಈ ಸರ್ಕಾರ ಇನ್ನೂ ಬರೆದಿಲ್ಲ. ಇಲ್ಲಿ ಫೈನಾನ್ಸ್ ಕಮೀಷನ್ ಬಗ್ಗೆ ಪ್ರಸ್ತಾಪ ಮಾಡುತ್ತೀರಿ. ಆದರೆ. This government has not written a letter to the 9th Finance Commission for additional allocation. I am not talking about the Planning Commission. I don't want to debate on that.

ಪ್ರತಿ ವರ್ಷ ಸರ್ಕಾರ ತನ್ನ ಹೇಳಿಕೆಯಲ್ಲಿ ಬರೀ ಬೈದರೇ ಹೇಗೆ? 9ನೇ ಕಮಿಷನ್ ಏನೂ ಕೊಟ್ಟಿಲ್ಲ. ಎಂದು ಹೇಳುತ್ತೀರಿ. ಅನ್ಯಾಯ ಆಗಿದೆ, ಮತ್ತೊಂದು ಆಗಿದೆ ಎಂದು ಹೇಳುತ್ತೀರಿ. ಆದರೆ ನೀವು ಕೇಳಿದರೇ ತಾನೇ ಕೊಡುವುದು? ಹಿಂದಿನ ವರ್ಷ ಪತ್ರ ಬರೆದು ಕೇಳಿದ್ದಿರಿ. ಈ ವರ್ಷ ಕೇಳಿಲ್ಲ.

Sri M RAJASHAKARA MURTHY: The Finance Commission has given norms between the Centre and the States. It is only according to that. This need not go to the Finance Commission. This will only go before the planning Commission.

Sri D.B.CHANDRE GOWDA: I want to make clear this point. Anyway I dont want.......

Sri M.Y. GHORPADE: Please let it be cleared. The point is ಗಾಡ್ಗಿಲ್ ಫಾರ್ಮುಲಾ ಪ್ರಕಾರ, ಸೆಂಟ್ರಲ್ ಅಸಿಸ್ಟೆನ್ಸ್ ಬರುತ್ತದೋ ಅದರಲ್ಲಿ ಒಂದು ಚೂರೂ ಜಾಸ್ತಿಯಾಗಿಲ್ಲ. ಈಗ ಕಾವೇರಿ ಪ್ರಾಜೆಕ್ಟ್ ಏನಿದೆ ಅದನ್ನು ಮಾಡುತ್ತಿದ್ದಾರೆ. ಅದನ್ನು ಪ್ಲಾನ್‌ನಲ್ಲಿ ಇನ್ನೂ ಅವರು ಸೇರಿಸಿಲ್ಲ ಅವರು ನಾನ್ ಪ್ಲಾನ್ ಎಂದು ಕರೆಯುತ್ತಿದ್ದಾರೆ. ಆದರೆ ಇದನ್ನು ಪ್ಲಾನ್‌ನಲ್ಲಿ ಒಪ್ಪಿಕೊಂಡಿದ್ದಾರೆ. ಅಷ್ಟೇ ವ್ಯತ್ಯಾಸ. ಆದರೆ ಇದಕೋಸ್ಕರವಾಗಿ ಅಡಿಷನಲ್ಲಾಗಿ ನಾವು ದುಡ್ಡು ಕೊಟ್ಟಿದ್ದೇವೆ ಎನ್ನುವ ಮಾತು ಏನಿದೆ ಅದನ್ನು

ನಾವು ಬಳಸಲಿಕ್ಕೆ ಸಾಧ್ಯ ಆಗೋದಿಲ್ಲ ಎಂಬ ಮಾತನ್ನು ಮಾತ್ರ ನಾನು ಹೇಳುತ್ತಿದ್ದೇನೆ. ಅಡಿಷನಲ್ಲಾಗಿ ನಮಗೆ ಏನೂ ಬಂದಿಲ್ಲ.

SRI RAJASHEKARA MURTHY: Representation has been made before the 9th Finance Commission, before the Government of India Regarding the injustice done in the 9th Finance Commission that we have refracted.

ಶ್ರೀ ಡಿ.ಬಿ. ಚಂದ್ರೇಗೌಡ: ತಾವು ಅಡಿಷನಲ್ ಎಂದು ಕೊಟ್ಟಿರಿ ಅದನ್ನೇ ನಾನು ಹೇಳುತ್ತಾ ಬಂದಿದ್ದೇನೆ. 10 ಕೋಟಿ ರೂಪಾಯಿಯನ್ನು ಹೈದರಾಬಾದ್ ಡೆವಲಪ್ ಮೆಂಟ್ ಅಥಾರಿಟಿಗೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಒಟ್ಟು 50 ಕೋಟಿ ರೂಪಾಯಿ ಖರ್ಚು ಮಾಡಬೇಕಲ್ಲವೇ? ಅದು ಏನಾಗಿದೇ? Has it been spent for the ddevelopment of that area? I want the accounts to be placed here. ಇಲ್ಲಿ ಪರ್‌ಫಾರ್ಮೆನ್ಸ್ ಬಜೆಟ್ ಇಲ್ಲ. ಗಾಳಿಯೊಳಗೆ ಗುದ್ದಾಟ ಮಾಡಿದ ಹಾಗಾಗಿದೆ. ಜನತಾ ಮನೆಗಳಿಗೆ ಎಕ್ಸ್‌ಟ್ರಾ 15 ಕೋಟಿ ಕೊಡುತ್ತೇವೆಂದು ಹೇಳಿದ್ದೀರಿ. ಹರಿಜನ ಗಿಜನರಿಗೆ ವೀಕರ್ ಸೆಕ್ಷನ್‌ಗೆ ಮತ್ತು 10 ಕೋಟಿ ಅಡಿಷನಲ್ ಕೊಡುತ್ತೇವೆಂದು ಹೇಳಿದ್ದೀರಿ ಹೈದರಾಬಾದ್ ಡೆವಲಪ್‌ಮೆಂಟ್ ಅಥಾರಿಟಿಗೆ 40 ಪ್ಲಸ್ 10 ಕೊಟ್ಟಿರಲ್ಲ ಈ 50 ಕೋಟಿ ಏನಾಯಿತು? ಪುರಸಭೆಗಳಿಗೆ 15 ಕೋಟಿ ಎಕ್ಸ್‌ಟ್ರಾ ಎಂದು ಹೇಳಿದಿರಿ, ಕಾಡಾಕ್ಕೆ 4 ಕೋಟಿ ಎಕ್ಸ್‌ಟ್ರಾ ಹರಿಜನ ಹಾಸ್ಟಲ್ ಕಟ್ಟಡಕ್ಕೆ ಎಕ್ಸ್‌ಟ್ರಾ 3 ಕೋಟಿ ಹಾಸ್ಟೆಲ್‌ನಲ್ಲಿ ಕೆಲಸ ಮಾಡತಕ್ಕಂತಹ ನೌಕರರ ಸಂಬಳಕ್ಕೆ ಎಕ್ಸ್‌ಟ್ರಾ ಒಂದು ಕೋಟಿ ವಿಲೇಜ್ ಕಮ್ಯುನಿಟಿ ಲೆಟ್ರಿನ್ನಿಗೆ 5 ಕೋಟಿ ಎಕ್ಸ್‌ಟ್ರಾ ಎಂದು ಹೇಳಿದ್ದೀರಿ. ಎಲ್ಲಿಯಾದರೂ ಒಂದು ಲೆಟ್ರಿನ್‌ಅನ್ನು ತೆಗೆದಿದ್ದೀರಾ? ನಮಗೆ ಗೊತ್ತಿಲ್ಲ ನಿಮ್ಮ ಸದಸ್ಯರ್ಯಾರಿಗಾದರೂ ಗೊತ್ತಿದ್ದರೆ ಹೇಳಿ. ರೆಗ್ಯುಲರ್ ಆಗಿ ಕೊಟ್ಟಿದ್ದನ್ನು ನಾನು ಹೇಳುವುದಿಲ್ಲ ಈ ವರ್ಷ 5 ಕೋಟಿ ಶೌಚಾಲಯದ ಕಾರ್ಯಕ್ರಮ ಏನಾಯಿತು? ಕಳೆದ ಒಂದು ವರ್ಷದ ಕಾರ್ಯಕ್ರಮವನ್ನು ಇಲ್ಲಿ ಈ ಶಾಸನಸಭೆಯಲ್ಲಿ ಬಹಿರಂಗಗೊಳಿಸಿದಿರಿ ಅದರ ಬಗ್ಗೆ ಎಲ್ಲರೂ ವಿಚಾರ ಮಾಡಬೇಕು ಅದು ಸರಯಾಗಿ ಜಾರಿ ಯಾಗುತ್ತಿದ್ದಿಯೇ ಇಲ್ಲವೇ ಎಂಬುದನ್ನು ರಿವ್ಯೂ ಮಾಡಬೇಕು. ಎಲ್ಲಿಯಾದರೂ ಒಂದು ಶೌಚಾಲಯವನ್ನು ಕಟ್ಟಿದ್ದೀರಾ?

ಶ್ರೀ ಆರ್.ವಿ. ದೇಶಪಾಂಡೆ: ಹಣ ರಿಲೀಸ್ ಆಗಿಲ್ಲವೆಂದು ಹೇಳುತ್ತಿದ್ದೀರಿ. ಅದೆ ನಮ್ಮ ಮುಖ್ಯ ಮಂತ್ರಿಗಳು ಹೇಳುತ್ತಾರೆ ಅದು ನನ್ನ ಜವಾಬ್ದಾರಿ ಅಲ್ಲ ಅದು ಹಿಂದೆ ಮುಖ್ಯ ಮಂತ್ರಿಗಳದ್ದು ಅವರು ಹೋದರು. ಆ ಹಣಕಾಸಿನ ಮಂತ್ರಿಗಳೂ ಹೋದರು ಅದನ್ನೇಕೆ ಈಗ ಕೇಳುತ್ತೀರಿ ಎಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಹಾಗಾದರೆ ಇವರನ್ನು ಏಕೆ ಕೇಳಬೇಕು ಇವರು ಜವಾಬ್ದಾರರಲ್ಲವೆಂದು ಹೇಳಿದ ಮೇಲೆ ಏಕೆ ಹೇಳಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ: ಇವರನ್ನು ಕೇಳುತ್ತಿಲ್ಲ ಅವರನ್ನೂ ಕೇಳುತಿಲ್ಲ. ಈ ಸದನದ ಮೂಲಕ ಇವರ ಮೋಸವನ್ನು ನಾನು ಸರ್ವಜನಿಕರಿಗೆ ಹೇಳುತ್ತಿದ್ದೇನೆ. ಅಷ್ಟೇ ಇವತ್ತಿನವರೆಗೂ ನಿಮ್ಮ ಹುಡ್ಕೋ ಮನೆಗಳು ಅರ್ಧಕ್ಕೇ ನಿಂತಿದೆ. ಅದಕ್ಕೆ ರೆಗ್ಯುಲರ್ ಆಗಿ 15 ಕೋಟಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈಗ ಮಳೆಗಾಲ ಬರುತ್ತಿದೆ ಆಗ ಎಲ್ಲವೂ ನೆಲಸಮವಾಗುತ್ತದೆ. ಮತ್ತೆ 1 ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದೀರಿ. ಏನು ಖಾತ್ರಿ? ನೀವು ಕಟ್ಟಿಸುತ್ತೀರಿ ಎಂದು? ಒಂದು ಕಕ್ಕಸ್ಸು ಕಟ್ಟದೇ ಇರುವವರು ಮನೆ ಕಟ್ಟುತ್ತೀರಾ? ಹೋದ ವರ್ಷ ಹೇಳಿದ್ದನ್ನೇ ಇನ್ನೂ ಕಟ್ಟಿಸುವುದಕ್ಕೆ ಆಗಿಲ್ಲ. ಈ ವರ್ಷ ಮನೆ ಕಟ್ಟಿಸುತ್ತೀರಾ? ಸಣ್ಣ ನೀರಾವರಿಗೆ 15 ಕೋಟಿ ಕೊಡುತ್ತೇವೆಂದು ಹೇಳಿದ್ದಿರಿ ಈ ವರ್ಷ ಅದರ ಮಾತೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಮುಂದಿನ ವರ್ಷದ ಆಯವ್ಯಯದಲ್ಲಿ ಎಲ್ಲರೂ ಉಪವಾಸವಿರಬೇಕೆಂದು ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ಹೊಸದೇನಾದರೂ ಕಾರ್ಯಕ್ರಮವೆಂದು ಹೇಳಿದ್ದಾರೆಯೇ ಸಾಧನೆಗಳಿದ್ದು ಒಂದು ಪಟ್ಟಿ ಮಾಡಿನೋಡೋಣವೆಂದು ವಿಚಾರ ಮಾಡಿದರೆ ಭೂ ಸುಧಾರಣೆ ಅಧಿನಿಯಮದ ಅಡಿಯಲ್ಲಿ 10 ಎಕರೆಗಿಂತ ಕಡಿಮೆ ಭೂಮಿ ಇದ್ದರೆ ಎಂದು ಹೇಳಿದ್ದಾರೆ ಇದೆಲ್ಲಾ ಹಳೆಯದೇ 1-2-3-4 ಕೃಷಿ ಪಾಸ್ ಪುಸ್ತಕದಿಂದ ಹಿಡಿದು ಪ್ರತಿಯೊಂದು ಕಾರ್ಯಕ್ರಮವೆಲ್ಲವೂ ಕೂಡ ರಾಮಕೃಷ್ಣ ಹೆಗಡೆಯವರ ಸರ್ಕಾರದಿಂದ ಇಲ್ಲಿಯವರೆಗೆ ಯಾವ ಕಾರ್ಯಕ್ರಮಗಳನ್ನು ಹೇಳಿದ್ದರೋ ಅದೇ ಇದೆ. ಸಮಯ ಇಲ್ಲದೇ ಇರುವುದರಿಂದ ನಾನು ಎಲ್ಲವನ್ನೂ ಹೇಳುವುದಕ್ಕೆ ಆಗುವುದಿಲ್ಲ. ಕಂಪ್ಯಾರಿಟೀವ್ ಆಗಿ ಎಲ್ಲಾ ಕಂಪೆಲ್ ಮಾಡಿ ಇಟ್ಟಿದ್ದೇನೆ. ಯಾವ್ಯಾವ ಕಾರ್ಯಕ್ರಮಗಳು ಯಾವ್ಯಾವ ಸಮಯದಲ್ಲಿ ಅನೌನ್ಸ್ ಆದವು ಎಂದು ಹೇಳುವುದಕ್ಕೆ ಈಗ ಇಲ್ಲಿ ಸಮಯ ಇಲ್ಲ ಇನ್ನು ಗಾಡ್ಗಿಲ್ ಸೂತ್ರವೆಂದು ಹೇಳುತ್ತೀದ್ದಾರೆ. ಆಗ ಹೆಗಡೆಯವರು ಆ ವಿಚಾರವನ್ನು ಪ್ರಸ್ತಾಪ ಮಾಡಿದರು. ಆಗ ಇಲ್ಲಿ ಕೂತುಕೊಂಡಂತಹ ಮೊಯಿಲಿಯವರು ಇನ್ನಿತರರು ಇದೆಲ್ಲಾ ನಿಮ್ಮ ಕೆಲಸ ನೀವು ಕೇಂದ್ರ ಸರಕಾರಕ್ಕೆ ಏಕೆ ಹೇಳುತ್ತೀರಿ ಎಂದು ಹೇಳಿದ್ದರು. ಅದೇ ಭಾಷೆಯಲ್ಲಿ ಇಲ್ಲಿ ಬಂದಿದೆ. ಭಾಷೆಯಲ್ಲಿ ಕೂಡ ವ್ಯತ್ಯಾಸವಿಲ್ಲ. Whatever Sri Ramakrishna Hegde has said in his budget speech almost every sentence is repeated here. With reference to Centre and State relationship whether it is Financial or otherwise. This Is where I see the influence of sre Sri Ramakrishna Hegdes thinking at that point of time. ಮುಂದು ಇಂಟಿಲಿಜೆನ್ಸ್ ಮತ್ತು ಬೇರೆ ಆಲೋಚನೆ ಮಾಡುವುದಕ್ಕೆ ಸರ್ಕಾರಕ್ಕೆ ಪುರುಸೊತ್ತು ಇಲ್ಲ.

ಶ್ರೀಮತಿ ಮೋಟಮ್ಮ: ಒಮ್ಮೊಮ್ಮೆ ಹೇಳುವ ವಿಷಯದಲ್ಲಿ ನಿಮ್ಮ ನಮ್ಮ ಭಾವನೆಗಳನ್ನು ಒಂದೇ ಆಗಿದ್ದರೆ ತಪ್ಪೇನು?

ಶ್ರೀ ಡಿ.ಬಿ. ಚಂದ್ರೇಗೌಡ: ತಪ್ಪೆಂದು ನಾನು ಹೇಳುವುದಿಲ್ಲ. ಆಗ ಬೈದರಲ್ಲ ಈಗ ಬೈದರೆ ಆ ಕತೆಗೆ ಹೋದರೆ ಬಹಳ ಹೊತ್ತಾಗುತ್ತದೆ. ನನ್ನನ್ನು ರೇಗಿಸಬೇಡಿ ತಾವು ಸುಮ್ಮನಿರಿ. ಶ್ರೀಮಾನ್ ಹೆಗಡೆಯವರು ಹೇಳಿದಾಗ ಟೀಕೆ ಮಾಡಿದ್ದೀರಿ. ಈಗ ಅದೇ ಭಾಷೆಯನ್ನು ಜೀರ್ಣಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಿ ಇದು ಹೇಗೆಂದು ಕೇಳಬೇಕು? ಆಗ ಅವರು ಪ್ರಸ್ತಾಪ ಮಾಡಿದ್ದರು. ಏನು ಹೇಳಿದ್ದರೆಂದರೆ ರಾಜ್ಯಗಳ ಹಿತಾಸಕ್ತಿಗಳನ್ನು ಕೇಂದ್ರ ಸರ್ಕಾರದ ಹಿತಾಸಕ್ತಿಗಳಿಂದ ಪ್ರತ್ಯೇಕಿಸಿ ನೋಡಬಾರದು ಎಂದು ನಾನು ಕೇಂದ್ರ ಸರ್ಕಾರಕ್ಕೆ ನಾನು ಸದನದ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಅದೇ ಭಾಷೆ. ಆಗಾಗಲೇ ಶೇಕಡ 10ರಷ್ಟನ್ನು ಕಡಿತ ಮಾಡಿದೆಯೆಂದರೆ ಜವಾಹರ್ ರೋಜಗಾರ್ ಅಂತಹ ಯೋಜನೆಯಲ್ಲಿಯೂ ಕೂಡ ಖರ್ಚು ಕಡಿಮೆಯಾಗಿದೆಯೆನ್ನತಕ್ಕದ್ದು ನೀರಾವರಿ ಹಾಗೂ ವಿದ್ಯುತ್ ಯೋಜನೆಗಳಿಗೆ ಬಾಂಡ್‌ಗಳ ಮೂಲಕ ರಾಜ್ಯಗಳು ಸಾಲ ಎತ್ತಲು ಅನುಮತಿ ನೀಡಬೇಕೆಂದು ಕೋರಿದ್ದೇವೆ. ಅದು ಬಹಳ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ನಾನು ಈ ವಿಚಾರಗಳ ದೀರ್ಘ ವ್ಯಾಖ್ಯಾನಕ್ಕೆ ಹೋಗುವುದಿಲ್ಲ. ಪುಟ-35 ಮತ್ತು 36ರಲ್ಲಿ ವಿ.ಪಿ. ಸಿಂಗ್‌ರವರ ಪ್ರೇರಿತವಾದಂತಹ ಕೆಲವು ಭಾಷೆಗಳು ಬಂದಿವೆ. ಇದುವರೆಗೆ ಹೆಗಡೆಯವರ ಪ್ರೇರಣೆಯಿಂದ ಅದದ್ದು. ಈಗ ವಿ.ಪಿ. ಸಿಂಗ್‌ರವರ ಪ್ರೇರಿತವಾದಂತಹ ಕೆಲವು ಇಲ್ಲಿ ಬಂದಿವೆ. ಬಹಳ ಮುಖ್ಯವಾಗಿ ಪುಟ 35ರಲ್ಲಿ ಒಂದು ಮಾತು ಹೇಳಿದ್ದಾರೆ. ಇದುವರೆಗೆ ಹೆಗಡೆಯವರ ಪ್ರೇರಣೆ ಈಗ ವಿ.ಪಿ. ಸಿಂಗ್‌ರವರ ಪ್ರೇರಣೆ ಅದು ಏನೆಂದು ನೋಡೋಣ. ವಿವಿಧ ಪ್ರಯೋಜಿತ ಆಧಾರಿತವಾದ ಯೋಜನೆಗಳಲ್ಲಿ ಶೇಕಡ

18 ರಷ್ಟು ವೆಚ್ಚಮಾಡುವ ನೀತಿಯನ್ನು ನಾವು ಈಗಗಲೇ ಕಾರ್ಯಗತಗೊಳಿಸುತ್ತಿದ್ದೇವೆ. ಅದೇ ರೀತಿಯಲ್ಲಿ ಸರ್ಕಾರವು ಈ ಕಾರ್ಯ ಕ್ರಮಗಳ ಅಡಿಯಲ್ಲಿ ಹಿಂದುಳಿದ ವರ್ಗದವರಿಗಾಗಿ ವೆಚ್ಚಮಾಡಲು ಶೇಕಡ 32ರಷ್ಟು ಹಣವನ್ನು ಮೀಸಲಾಗಿಡಲು ನಿರ್ಧರಿಸಿದ್ದೇವೆ ಎಂದು ಹೇಳಿದ್ದಾರೆ. ಕಮಿಷನ್ ವಿಚಾರದಲ್ಲಿ ವಿ.ಪಿ. ಸಿಂಗ್‌ರವರು ಯಾವ ಕಾರಣಕ್ಕಾಗಿ ರಾಜಿನಾಮೆಯನ್ನು ಕೊಟ್ಟರೋ ರಾಜಿನಾಮೆ ಕೊಟ್ಟು ಹೊರಗೆ ಬರಬೇಕಾಯಿತು. ಈಗ ನಿಮ್ಮ ಸರ್ಕಾರ ಬ್ಯಾಕ್‌ವರ್ಡ್‌ಕ್ಲಾಸಸ್‌ಗೆ 32 ಪರ್ಸೆಂಟ್ ಇಟ್ಟಿದ್ದೇವೆಂದು ಹೇಳಿದಾರೆ ಅದು ಯಾವುದು? ನಾನು ಇದರಲ್ಲಿ ಎಲ್ಲಾ ಹುಡುಕಿದೆ. ಹಿಂದುಳಿದ ವರ್ಗಗಳಾಗಿ ವರ್ಗೀಕರಿಸಿರುವುದು ಮಂಡಲ ಆಯೋಗದ ವರದಿಯಲ್ಲಿ ನೂರಕ್ಕೆ 52ರಷ್ಟು ಹಿಂದುಳಿದ ವರ್ಗದವರು ಎಂದು ಹೇಳುತ್ತಾರೆ. ಶೇಕಡ 32ರಷ್ಟು ಮೀಸಲಾತಿ ಎಂದು ಹೇಳುವಾಗ ಅದು ಆ ವರದಿಯಲ್ಲಿರುವುದು 32 ಪರ್ಸೆಂಟ್ ಅಲ್ಲ ಹಾವನೂರು ಕಮೀಷನ್‌ನಲ್ಲಿ ಚಿನ್ನಪರೆಡ್ಡಿ ಕಮೀಷನ್‌ನಲ್ಲಿ ಶೇಕಡ 50ರ ಮೇಲೆ ಹಿಂದುಳಿದ ವರ್ಗದವರು ಎಂದು ಹೇಳಿದ್ದಾರೆ. ಮಂಡಲ್ ಕಮೀಷನ್‌ನಲ್ಲಿರುವಂತೆ ಶೇಕಡ 52ರಲ್ಲಿ ಅರ್ಧಭಾಗ ಮೀಸಲಾತಿಯೆಂದು ಹೇಳಿದರೂ ಅದು 27 ಪರ್ಸೆಂಟ್ ಆಗುತ್ತದೆ. ಹಿಂದುಳಿದ ವರ್ಗದವರಿಗೆ 32ಪರ್ಸೆಂಟ್ ಯಾವುದು? ಅದಕ್ಕೆ ಆಧಾರವೇನು? ಏನೋ ಒಂದು ಹೇಳುವುದು. ಬ್ಯಾಕ್‌ವರ್ಡ್‌ಕ್ಲಾಸಸ್ ಹೆಸರು ಹೇಳುವುದು ಬೇಡವೆ? ಆಯಿತು ಹೇಳಿದರು, ಅವರ ಅಭಿವೃದ್ಧಿಗೆ ಮೀಸಲಾಗಿಟ್ಟಿರತಕ್ಕ ಹಣವೆಷ್ಟು? ನೂರಕ್ಕೆ 52ರಷ್ಟು ಇರತಕ್ಕ ಹಿಂದುಳಿದ ವರ್ಗದವರಿಗೆ ಶೇಕಡ 32ರಷ್ಟು ಹಣವನ್ನು ಖರ್ಚು ಮಾಡುತ್ತೇವೆಂದು ಹೇಳಿ ಹಿಂದುಳಿದ ವರ್ಗಗಳವರ ನಿಗಮಕ್ಕೆ ಇಟ್ಟಿರತಕ್ಕ ಹಣ 4ಕೋಟಿ ರೂಪಾಯಿಗಳು ಶೇಕಡ 18ರಷ್ಟು ಇರತಕ್ಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳವರ ಯೋಜನಾ ವೆಚ್ಚದಲ್ಲಿ ಮೀಸಲಾಗಿಟ್ಟಿರತಕ್ಕದ್ದು 130ಕೋಟಿ ರೂಪಾಯಿ ಅಂದರೆ ಶೇಕಡ 18ರಷ್ಟು ಜನರಿಗೆ 130 ಕೋಟಿ ನೂರಕ್ಕೆ 52ರಷ್ಟು ಇರುವ ಇವರಿಗೆ 4ಕೋಟಿ ರೂಪಾಯಿ ಸಾಕೆ? ಏತಕ್ಕೆ ಇದು? ಅಲ್ಪಸಂಖ್ಯಾತರು ಯಾರಾದರೂ ಇಲ್ಲಿದ್ದರೆ ದಯಮಾಡಿ ಇದನ್ನು ಗಮನಿಸಬೇಕು.

4.45 ಪಿ.ಎಂ.

ಅಲ್ಪಸಂಖ್ಯಾತರ ನಿಗಮಕ್ಕೆ: ಶೇಕಡಾ 11ರಷ್ಟು ಇರತಕ್ಕಂಥ ಅಲ್ಪಸಂಖ್ಯಾತರಿಗೆ ಇಲ್ಲಿ ಕೊಟ್ಟಿರತಕ್ಕದ್ದು.

"ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮವು 1991-92ನೇ ಸಾಲಿಗೆ ತನ್ನ ವಿವಿಧ ಯೋಜನೆಗಳಿಗಾಗಿ 240 ಲಕ್ಷ ರೂಪಾಯಿಗಳ ಕಾರ್ಯಕ್ರಮ..........."

ಎರಡು ಕೋಟಿ ನಲ್ವತ್ತು ಲಕ್ಷ ರೂಪಾಯಿಗಳು, ... ಇಂತಹ ಕಣ್ಣು ಒರೆಸುವ ಕೆಲಸ ಮಾಡಬೇಡಿ ಏಕೆಂದರೆ ಹಿಂದುಳಿದ ವರ್ಗಕ್ಕೆ ಎಂದು ಬೆನ್ನು ತಟ್ಟಿಕೊಂಡು 100ಕ್ಕೆ 52ರಷ್ಟು ಜನರು ಇರುವುದಕ್ಕೆ 4 ಕೋಟಿ, 100ಕ್ಕೆ 11 ಜನ ಇರುವುದಕ್ಕೆ ಎರಡೂವರೆ ಕೊಟಿ ಕೊಟ್ಟು ಬಿಟ್ಟು ಏನು ಅಭಿವೃದ್ಧಿ ಮಾಡುತ್ತೀರಿ? ಅದ್ದರಿಂದ ಈ ಮಾತುಗಳಿಗೆ ನಾನು ಯಾವ . ಅರ್ಥವನ್ನೂ ಕಲ್ಪಿಸುವುದಿಲ್ಲ. ಒಂದೇ ಅರ್ಥ ಅದು ಏನೆಂದರೆ ಚುನಾವಣೆ ಬರುತ್ತಿದೆ. ಹಿಂದುಳಿದ ವರ್ಗಗಳ ಬಗ್ಗೆ ನಿಮಗೆ ಇರತಕ್ಕಂಥ ಕಳಕಳಿ ಪ್ರದರ್ಶನ ಮಾಡದೇ ಇದ್ದರೆ ವಿ.ಪಿ. ಸಿಂಗ್ ಅವರನ್ನು ಭೇಟಿ ಮಾಡುವುದಕ್ಕೆ ಆಗುವುದಿಲ್ಲ ಇಲ್ಲಿ 32 ಪರ್ಸೆಂಟ್ ಖರ್ಚು ಮಾಡುವುದಕ್ಕೆ ಇಟ್ಟಿದ್ದೇವೆ ಎಂದು ಹೇಳಿಬಿಟ್ಟು 4 ಕೋಟಿ ಕೊಟ್ಟು ಬಿಟ್ಟು ಮುಗಿಸಿಬಿಡುತ್ತೀರಿ. ಇದನ್ನು ಒಳ್ಳೆಯ ಅಚ್ಚಕನ್ನಡದಲ್ಲಿ ಹೇಳಭೇಕು ಎಂದರೆ. ಇಂತಹ ಮೋಸ ಮಾಡಬೇಡಿ. Let us be plain, simple and honest in our thinking. ಆದ್ದರಿಂದ ಈ ಅಂತರದ ಅರಿವು

ಡಾ: ಎನ್.ಬಿ. ನಂಜಪ್ಪ: ತಾವು ಈಗ ಮಾತನಾಡತಕ್ಕಂಥ ಸಂಧರ್ಭದಲ್ಲಿ ಬಹಳ ಮೋಸ ಮಾಡುತ್ತಿದ್ದೀರಿ, ಇದರಲ್ಲಿ ಅಂಕಿಅಂಶಗಳನ್ನು ಸರಿಯಾದ ರೀತಿಯಲ್ಲಿ ಕೊಟ್ಟಿಲ್ಲವೆಂದು ಹೇಳಿದಿರಿ. ದಯವಿಟ್ಟು ಹೋಲಿಕೆ ಮಾಡಿನೋಡಿ, ಆಗ ಗೊತ್ತಾಗುತ್ತದೆ ಹಿಂದೆ ನೀವು ಇದ್ದಾಗ ಎಷ್ಟೆಷ್ಟನ್ನು ಈ ಕೆಲಸಕಾರ್ಯಗಳಿಗೆ ಒದಗಿಸಿದ್ದೀರಿ ಎಂಬುದನ್ನು ಕಂಪ್ಯಾರಿಸನ್ ಕೊಟ್ಟರೆ ಆಗ ಬಹಳ ಚೆನ್ನಾಗಿ ಅರ್ಥವಾಗುತ್ತದೆ ಎಂದು ನನಗಾದರೂ ಅನ್ನಿಸುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಈಗಾಗಲೇ ಹೇಳಿದ್ದೇನೆ. ಕಂಪಾಯಿಲ್ ಮಾಡಿಟ್ಟಿದ್ದೇನೆ, ಫಿಗರ್ಸ್ ಕೊಡುತ್ತೇನೆ. ತಾವು ಹೊಸದಾಗಿ ಬಂದಿದ್ದೀರಿ. ಇದು ಯಾವಾಗ ತಿಳಿಯುತ್ತದೆ. ಎಂದರೆ ಪರ್‌ಫಾರ್ಮೆನ್ಸ್ ಬಜೆಟ್ ಇಟ್ಟರೆ ತಿಳಿಯುತ್ತದೆ. ಆದರೆ ಇವರು ಇಡುತ್ತಿಲ್ಲ, ಜನರಿಗೆ ಮೋಸ ಇಲ್ಲಿ ಮಾಡುತ್ತೀರಿ ಎಂದರೆ ನಿಮ್ಮ ಸಾಧನೆ ಮಾಡಿರುವುದು ಜನತೆಗೆ ಗೊತ್ತಾಗಬಾರದು.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ನನಗೆ ಹೆಚ್ಚಿನ ಸಮಯ ಕೊಟ್ಟರೆ ನಾನು ಇದನ್ನು ಹೇಳುತ್ತೇನೆ. ಇಲ್ಲಿ ಮಹಿಳೆಯರಿಗೆ ಉದ್ಯೋಗದಲ್ಲಿ 30ರಷ್ಟು ಮೀಸಲಾತಿ ಎಂದು ಇದೆ. ಬೇಷ್ ಮೀಸಲಾತಿ ಇದೆ. ಉದ್ಯೋಗ ಎಲ್ಲಿದೆ? ಅದನ್ನೂ ಹೇಳಬೇಕಲ್ಲ ಇಲ್ಲಿ? ನಾನು ಸುಮಾರು ಐದು ಇಲಾಖೆಗಳಿಗೆ ಫೋನು ಮಾಡಿದೆ, ಉದ್ಯೋಗ ಎಷ್ಟೆಷ್ಟು ಇದೆಯೆಂದು ತಿಳಿದುಕೊಳ್ಳೋಣ ಎಂದು. ಒಬ್ಬರೂ ಕೂಡ ಅದನ್ನು ಹೇಳುವುದಕ್ಕೆ ಸಿದ್ಧರಿಲ್ಲ. ಇದನ್ನು ಕಂಪೈಲ್ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಮುಖ್ಯಮಂತ್ರಿಗಳೇ ಇದನ್ನು ಒಪ್ಪಿಕೊಳ್ಳುತ್ತಾರೆ. ನಿಖರವಾಗಿ ಉದ್ಯೋಗ ಸೃಷ್ಟಿ ಬಗ್ಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಕಡೆಗೆ ಮುಖ್ಯಮಂತ್ರಿಗಳಿಗೆ ಏನೂ ಗೊತ್ತಿಲ್ಲ ಹೋಗಲಿ ಕನಿಷ್ಟ ಇಲಾಖೆಯ ಮುಖ್ಯಸ್ಥರಿಗಾದರೂ ಗೊತ್ತೇನೋ ಎಂದು ಐದು ಇಲಾಖೆಗಳಿಗೆ ಫೋನು ಮಾಡಿದೆ, ಒಬ್ಬರೂ ಕೂಡ ಲೆಕ್ಕ ಕೊಡಲಿಲ್ಲ ಆದ್ದರಿಂದ ಉದ್ಯೋಗವೇ ಇಲ್ಲವೆಂದು ಮೇಲೆ ನೂರಕ್ಕೆ ನೂರರಷ್ಟು ಎಂದು ಹೇಳುವುದಕ್ಕೆ ಏನು?

ಶ್ರೀಮತಿ ಮೋಟಮ್ಮ: ನಮ್ಮ ಸರ್ಕಾರದವರು ಸತ್ಯವನ್ನು ಮರೆಮಾಚಿ ಹೇಳುವುದಿಲ್ಲ ನಾವು ಹೇಳದೇನೇ ಉದ್ಯೋಗಗಳನ್ನು ಭರ್ತಿಮಾಡಿದ್ದೇವೆ. ಆರೋಗ್ಯ ಇಲಾಖೆಯಲ್ಲಿ ನಾಲ್ಕು ನೂರು ಡಾಕ್ಟರ್‌ಗಳ ಉದ್ಯೋಗಗಳನ್ನು ಭರ್ತಿ ಮಾಡಿಲ್ಲವೇನು? ಅದೇರೀತಿ ಉಪಾಧ್ಯಾಯರ ಹುದ್ದೆಗಳು ಹಾಗೆಯೇ ಪೋಲೀಸ್ ಇಲಾಖೆಯಲ್ಲಿ ಸಹ ಮಹಿಳೆಯರಿಗೆ....

ಶ್ರೀ ಡಿ.ಬಿ. ಚಂದ್ರೇಗೌಡ: ನೀವು ಮುಂದಿನ ಸೀಟಿಗೆ ಬಂದಾಗ ಹೇಳುವಿರಂತೆ ಈಗ ಇರುವವರು ಹೇಳಲಿ.

ಶ್ರೀ ಕೆ ಪ್ರತಾಪಚಂದ್ರಶೆಟ್ಟಿ: ನಿಮ್ಮ ಮನೆಗೊಂದು ಉದ್ಯೋಗ ಯೋಜನೆ ಏನಾಯಿತು?

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ ಶ್ರೀ ಬಸವಲಿಂಗಪ್ಪನವರಿಗೆ ಹೇಳಬೇಕಾದದ್ದು ಒಂದಿದೆ.

ಈಗ ನಿಮಗೆ ಸಂಬಂಧಪಟ್ಟಿದ್ದು ಹೇಳುತ್ತೇನೆ. ಒಬ್ಬೊಬ್ಬರನ್ನು ನೋಡಿದಾಗ ಒಂದೊಂದು ಉತ್ಸಾಹ ಬರುತ್ತದೆ. ಈ ಆಯವ್ಯಯವನ್ನು ಹೇಗೆ ಒಪ್ಪಿಕೊಂಡಿದ್ದೀರೋ ನನಗೆ ಗೊತ್ತಿಲ್ಲ.

"ಹರಿಜನ ಕೇರಿಗಳಿಗೆ, ಲಂಬಾಣಿ ತಾಂಡಗಳಿಗೆ, ಒಡ್ಡರ ಕೇರಿಗಳಿಗೆ ಮತ್ತು ಅದೇರಿಯ ಸ್ಥಳಗಳಲ್ಲಿನ ದೇವಸ್ಥಾನಗಳು ಮತ್ತು ಇತರ ಪೂಜಾ ಮಂದಿರಗಳು ಬಹಳ ದುಸ್ಥಿತಿಯಲ್ಲಿರುವುದು ಮಾನ್ಯ ಸದಸ್ಯರಿಗೆ ತಿಳಿದ ಸಂಗತಿಯಾಗಿದೆ. ಅವರು

ಆಯ್ಕೆ ಮಾಡುವ ಪೂಜಾ ಮಂದಿರಗಳನ್ನು ಪುನರ್ ನಿರ್ಮಿಸಲು ಮತ್ತು ಜೀರ್ಣೋದ್ಧಾರ ಮಾಡಲು ಸರ್ಕಾರ ನಿರ್ಧರಿಸಿದೆ."

ಎಂತಹ ಕಾರ್ಯಕ್ರಮ. ಹೊಟ್ಟೆಗೆ ಅನ್ನ ಕೊಡಿ ಎಂದು ಕೇಳಿದರೆ, ದೇವಸ್ಥಾನ ರಿಪೇರಿ ಮಾಡಿಸುತ್ತೇವೆಂದು ಹೇಳುತ್ತೀರಿ, ಮಾಡಿಸಿ ಸಂತೋಷ. ಇದು ಸಮಾಜವಾದಿ ಸಿದ್ಧಾಂತದ ಮೂಲ ತಿರಳು. ಇದಕ್ಕೆ ದುಡ್ಡು ಎಷ್ಟು ಇಟ್ಟಿದ್ದೀರಿ, ಒಂದು ರೂಪಾಯಿ ಏನಾದರೂ ಇಟ್ಟಿದ್ದೇವೆಂದು ಹೇಳಿದ್ದೀರಾ? ತಾವು ದಯಮಾಡಿ ಹೇಳಿ. ಒಂದು ಪಟ್ಟಿ ತಯಾರಿಸಿ ನೋಡಿ ಯಾವ ಯಾವ ಹರಿಜನ ಕೇರಿಗಳಲ್ಲಿ, ಲಂಬಾಣಿ ಕೇರಿಗಳಲ್ಲಿ ದೇವಸ್ಥಾನ ಎಷ್ಟಿವೆ? ಎಷ್ಟು ಮುರಿದು ಬಿದ್ದಿವೆ, ಅವುಗಳನ್ನು ರಿಪೇರಿ ಮಾಡಿಸಿ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಉದ್ಯೋಗದ ಬಗ್ಗೆ ಬಹಳ ಸ್ವಾರಸ್ಯವಾಗಿ, ನ್ಯೂನತೆಗಳನ್ನು ಹೇಳಿದ್ದಾರೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದತಕ್ಷಣ ಒಂದು ಮಾತು ಹೇಳಿದರು. ಒಳ್ಳೆಯ ತತ್ವದ ಉದ್ದೇಶಗಳಿಂದಲೇ ಹೇಳಿದರು. ಪ್ರತಿಯೊಂದು ಮನೆಗೂ ಒಂದೊಂದು ನೌಕರಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಅದು ಆಗಲಿಲ್ಲ. ಒಂದು ವರ್ಷವಾಯಿತು, ಎರಡು ವರ್ಷವಾಯಿತು, ಮೂರು ವರ್ಷವಾಯಿತು. ನಾವು ಅಲ್ಲಿದ್ದಾಗ ಕೇಳಿದ್ದೇವೆ. ಮಾನ್ಯ ಬೊಮ್ಮಾಯಿಯವರು ಬಂದರು. ನಾವು ಎಲ್ಲರಿಗೂ ಉದ್ಯೋಗ ಕೊಟ್ಟಿದ್ದೇವೆಂದು ಹೇಳಿದರು. ಯಾರಿಗೆ ಉದ್ಯೋಗ ಕೊಟ್ಟಿದ್ದಾರೆಂದು ನಮಗೆ ಆಶ್ಚರ್ಯವಾಯಿತು. ಅದು ಯಾವ ರೀತಿಯಲ್ಲಿ ಎಂದರೆ, ಎಲ್ಲಾ ರೈತರು ಮನೆಯಲ್ಲಿ ಇರುವುದಿಲ್ಲ, ಅವರ ಹೊಲದಲ್ಲಿ ಕೆಲಸ ಮಾಡುತ್ತಿದ್ದಾರೆ, ಎಲ್ಲಾ ನೌಕರಿದಾರರೂ ಮನೆಯಲ್ಲಿರುವುದಿಲ್ಲ, ಅವರೂ ಕೆಲಸ ಮಾಡುತ್ತಿದ್ದಾರೆ, ಫ್ಯಾಕ್ಟರಿಯಲ್ಲಿ ಎಲ್ಲರೂ ಉದ್ಯೋಗಕ್ಕೆ ಹೋಗಿದ್ದಾರೆ, ಇನ್ನು ಉಳಿದವರು ಯಾರು ಎನ್ನತಕ್ಕಂಥ ಉತ್ತರ ಕೊಟ್ಟರು. ಇದರ ಹಿನ್ನೆಲೆಯಲ್ಲಿ ಏನಾದರೂ ಟೀಕೆ ಮಾಡುವುದಾದರೆ ಬಹಳ ಸ್ವಾಗತ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ದೇವಸ್ಥಾನದ ವಿಷಯ ಹೇಳಿದ್ದೀರಿ, ಗುಡಿ ಕಟ್ಟುವುದು, ರಿಪೇರಿ ಮಾಡುವುದು ಇದಕ್ಕೆ ಸಂಬಂಧಪಟ್ಟಂತೆ ಹೇಳಿ ಎಂದರೆ, ನಿಮ್ಮ ಹಾಗೆ ಉದ್ಯೋಗ ಕೊಡುವುದಕ್ಕೆ ಎಲ್ಲರಿಗೂ ನಾಗಸೇನಾ ಶಾಲೆಗಳು ಸಿಗುತ್ತವೆಯೇ? ಉದ್ಯೋಗದ ವಿಚಾರ ಸೃಷ್ಟಿ ಮಾಡುವುದಕ್ಕೆ ನಮಗೆ ಬರುವುದಿಲ್ಲ, ನಮಗೆ ತಿಳಿಯದು, ಉದ್ಯೋಗದ ವಿಚಾರ ಮಾತನಾಡುವುದು ಬೇಡ.

ಶ್ರೀ ಬಿ. ಬಸವಲಿಂಗಪ್ಪ : ನಾವು ನಾಗಸೇನಾ ವಿದ್ಯಾಶಾಲೆ ಕಟ್ಟಿದ್ದೇವೆ, ನೀವೂ ಒಂದನ್ನು ಕಟ್ಟಿ. ನಾನು ಹೇಳುತ್ತಿದ್ದೇನೆ, ಪ್ರತಿಯೊಬ್ಬ ರಾಜಕಾರಣಿ ಕೂಡ ಒಂದೊಂದು ಶಾಲೆ ಕಟ್ಟಬೇಕು. ನಾವು ಯಾವರೀತಿಯಾಗಿ 3-4ವರ್ಷಗಳಿಂದ ಕಟ್ಟಿದ್ದೇವೆ, ಅದೇ ರೀತಿಯಾಗಿ ನೀವು ಕಟ್ಟಿದರೆ, ನನಗನ್ನಿಸುತ್ತದೆ, ಈ ಸಮಾಜದಲ್ಲಿ ಆಸಕ್ತಿ ವಹಿಸಿ ಕೆಲಸ ಮಾಡುವುದಕ್ಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ರೂರಲ್ ಡೆವಲೆಪ್‌ಮೆಂಟ್‌ನಿಂದ ನಮಗೆ ಈ ರೀತಿಯಾಗಿ ಹಣ ಕೊಡುತ್ತಾರೆಯೇ? ನಮಗೆ ಕೊಡುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುತ್ತಿದ್ದೇನೆ. ದಯಮಾಡಿ, let it not be a State sponsored Chandraguthi.This is all the sum and substance of it. ಚಂದ್ರಗುತ್ತಿ ಇದೆಯಲ್ಲ, ಆ ರೀತಿಯಲ್ಲಿ ಮಾಡಬೇಡಿ. ದುರ್ಬಲವರ್ಗದವರಿಗೆ ಹೆಚ್ಚುವರಿ ಕೊಡಿಡಿ, ಶೌಚಾಲಯ ಪ್ರಕಟಿಸಿದ್ದೀರಿ. ಕಳೆದ ವರ್ಷ ಪ್ರಕಟಿಸಿದ ಶೌಚಾಲಯ, ಮಾನ್ಯ ಅಧ್ಯಕ್ಷರೇ, ತಮ್ಮ ಕ್ಷೇತ್ರದಲ್ಲಾದರೂ ಆಗಿದ್ದರೆ ನಮಗೆ ಸಂತೋಷ. ನೀವು

ಈ ಕಾರ್ಯಕ್ರಮ ಪ್ರಾರಂಭ ಮಾಡಿದ್ದು ಹೋದ ವರ್ಷ, ಶೌಚಾಲಯ ಕಟ್ಟಿಸುತ್ತೇವೆಂದು ಹೇಳಿದಿರಿ. ತಾವು ಈ ರೀತಿ ಉತ್ತರ ಕೊಡುವುದಿಲ್ಲ, ನೀವು ಈಗ ಸರ್ಕಾರ ನಡೆಸುತ್ತಿದ್ದೀರಿ, ಕಳೆದ ಸಾರಿ ನೀವು ಹೇಳಿದ್ದೀರಿ. ಈ ವರ್ಷ ಹೆಚ್ಚುವರಿ ಕೊಠಡಿ, ಶೌಚಾಲಯ ಕಟ್ಟಿಸುತ್ತೇವೆಂದು ಹೇಳಿದ್ದೀರಿ. ಹೋದವರ್ಷದ ನೀವು ಹೇಳಿದ ಶೌಚಾಲಯಗಳು ಏನಾದವು? 315 ಕೋಟಿ ರೂಪಾಯಿ ಹೆಚ್ಚುವರಿ ಬಂದಿದೆ ಎಂದು ಹೇಳಿದಿರಿ. What happened to this money? ಶೌಚಾಲಯಕ್ಕೆ 5 ಕೋಟಿ ಕೊಟ್ಟಿರಿ. ಒಂದೂ ಶೌಚಾಲಯ ಆಗಲಿಲ್ಲ. ಹಾಗಾದರೆ ನಾನು ತಮ್ಮನ್ನು ಕೇಳುತ್ತೇನೆ. ಇಂತಹ ವಿಚಾರಗಳಿಗೆ, ಈ ಆಯವ್ಯಯಕ್ಕೆ ನಾವು ಶಾಸನಸಭೆಯಲ್ಲಿ ಓಟು ಕೊಟ್ಟಿದ್ದೇವೆ; ಇದನ್ನು ಮಂಜೂರು ಮಾಡಿದ್ದೇವೆ. ಈ ಹಣ ಏನಾಯಿತು? This is where I needed performance budget. ವಿವಿಧ ಇಲಾಖೆಗಳಿಗೆ ನೀವು ಅಲಾಟ್ ಮಾಡಿದ್ದೀರಿ, ಇಲ್ಲಿ ಓಟು ತೆಗೆದುಕೊಂಡಿದ್ದೀರಿ, ಈ ಹಣ ಏನಾಯಿತು? ಅದಕ್ಕಾಗಿ ನಾನು ಹೇಳಿದೆ, ಹುಡ್ಕೋ ಮನೆಗಳು ಅರೆಬರೆಯಾಗಿ ನಿಂತಿವೆ, ಮೊದಲು ಅವುಗಳನ್ನು ಪೂರ್ಣ ಮಾಡಿ.

ಒಂದು ಲಕ್ಷ ಮನೆ ಹೊಸದಾಗಿ ಅನೌನ್ಸ್ ಮಾಡಿರುತ್ತೀರಿ. ಅಡಿಷನಲ್ ರೂಮ್ಸ್ ಕೊಡುತ್ತೇವೆ ಎಂದು ಹೇಳಿದ್ದೀರಿ. ಮಾಡಿ. ಆದರೆ ಇದು ಬರೀ ಕಾಗದದ ಮೇಲಿನ ಯೋಜನೆಗಳಾಗಬಾರದು. ಹೋದವರ್ಷ ನಿಮ್ಮ ಸರಕಾರ ಕೊಟ್ಟಂತಹ ಭಾಷೆ, ಈ ಸದನದಿಂದ ರಾಜ್ಯಕ್ಕೆ, ನಾಡಿಗೆ ಕೊಟ್ಟಂತಹ ಭಾಷೆಯ ಪ್ರಕಾರ ಒಂದು ಕೆಲಸ ಕೂಡಾ ಅಂತಹುದು ಆಗಲಿಲ್ಲವಲ್ಲ ಏತಕ್ಕೆ? ಅಕ್ಷಯ, ಆಶ್ರಯ, ಆರಾಧನಾ ಈ ಮೂರು ಭಾಷೆ ನನಗೆ ಪ್ರಿಯವಾದಂಥ ಭಾಷೆ.

Mr. Speaker : They are all complementary to Sethubandhana, Ganga Kalyana...

ಶ್ರೀ ಬಸವರಾಜ ರಾಯರೆಡ್ಡಿ : ಹೊಸ ಕನ್ನಡ ಕಲಿತುಕೊಳ್ಳುತ್ತಿದ್ದಾರೆ.

ಶ್ರೀಮತಿ ಮೋಟಮ್ಮ : ತಾಳಿಭಾಗ್ಯ, ಹೆರಿಗೆಭತ್ಯ

-ಗೊಂದಲ-

I am not trying to interrupt you. But I like the concept of Sethubandhana, Ganga Kalyana which is beautiful. It is a beautiful concept, like Akshaya, Aradhna...

ಶ್ರೀ ಬಸವರಾಜ ರಾಯರೆಡ್ಡಿ : ಅಕ್ಷಯ ಪಾತ್ರೆ ಆದರೆ ಒಳ್ಳೆಯದು ಯಾವಾಗಲೂ ಅದರಲ್ಲಿ ಅನ್ನ ಸಿಗಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅಕ್ಷಯ - ಪೌಷ್ಠಿಕ ಆಹಾರದ ಯೋಜನೆ ಇದನ್ನು ಸ್ವಾಗತಿಸಬೇಕಾದ ಅಂಶ. 20 ಕೋಟಿ ಇದಕ್ಕೆ ಮೀಸಲಿಟ್ಟಿದ್ದೀರಿ.

ಶ್ರೀ ಬಸವರಾಜ ರಾಯರೆಡ್ಡಿ : ಅಕ್ಷಯ ಪಾತ್ರೆ ಹೋಗಿ ಭಿಕ್ಷಾ ಪಾತ್ರೆ ಆಗಬಾರದು.

ಶ್ರೀ ಡಿ.ಎ. ಚಿನ್ನಪ್ಪ : ಅವರ ಕಾಲದಲ್ಲಿ ಭಿಕ್ಷಾಪಾತ್ರೆ ಆಗಿತ್ತು, ಭಿಕ್ಷಾಪಾತ್ರೆ ಪುನಃ ಬರುವುದು ಬೇಡ.

ಡಿ.ಬಿ. ಚಂದ್ರೇಗೌಡ : ಇದು ನಮ್ಮ ಅನುಕರಣೆ. ಅನುಕರಣೆಯನ್ನಾದರೂ ಮಾಡಿರುತ್ತೀರಿ. ಹೊಸ ಕಾರ್ಯಕ್ರಮ ಕೊಡುವುದಕ್ಕೆ ಆಗದಿದ್ದರೂ ಅನುಕರಣೆ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಕಾಮಧೇನು ಕೊಡಿರಿ....

ಶ್ರೀ ಡಿ.ಬಿ. ಚಂದ್ರೇಗೌಡ : ಅದು ನಾವು ನೀವು ಬಂದಾಗ ಕೊಡೋಣ. ಸುಶ್ರುತ ಯೋಜನೆ. ಒಂದು ಕಡೆಯಿಂದ ವೈದ್ಯಕೀಯ ತಪಾಸಣೆ. A very imaginative programme. ಇದನ್ನು ಪರ್‌ಫಾರ್ಮೆನ್ಸ್ ಮಾಡುವಾಗ ನಾವು ಹಿಂದಿನ ವರ್ಷ ಕೊಟ್ಟಿದ್ದು ಶೌಚಾಲಯಗಳ ಹಣೆಬರಹ ಆಗಬಾರದು. ಮಾನ್ಯ ಅಧ್ಯಕ್ಷರೇ, ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚುಹಣ ಕೊಟ್ಟಿದ್ದೇವೆ. ಎನ್ನುವಂತಹ ಮಾತನ್ನು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕು. ನೀವು ಹೇಳಿಕೊಂಡಿರುವಂತೆ ಮುಂದಿನ ವರ್ಷದ ವಾರ್ಷಿಕ ಯೋಜನೆಗೆ 31.88, ಸರಿಸುಮಾರು ಶೇಕಡಾ 32ರಷ್ಟು ಏನು ಹೆಚ್ಚಳವಾಗಿದೆ, ಅದಕ್ಕೆ ದಾಮಾಶಾ ಹೋಲಿಸಿ ಕೊಂಡರೆ ಬಹಳ ಕಡಿಮೆ ಅಷ್ಟೇ ಪ್ರಮಾಣಕ್ಕಾದರೂ ಇರಬೇಕಲ್ಲ, ಕಾವೇರಿ ಮತ್ತು ಕೃಷ್ಣಾ ವಿಚಾರದಲ್ಲಿ ವಿಶೇಷ ಸಂದರ್ಭದಲ್ಲಿ ನಾವು ಇದ್ದೇವೆ. ಈ ಸಾರಿ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದೆವು. ಕೃಷ್ಣಾ ಕಾವೇರಿಗೆ ಹೆಚ್ಚು ಹಣ ಒದಗಿಸಬಹುದೆಂದು ಇದ್ದೆವು. ಶೇಕಡಾವಾರು ದೃಷ್ಟಿಯಿಂದ 1991-92ರಲ್ಲಿ ಏನು ಈ ಯೋಜನೆಗಳಿಗೆ 1548 ಕೋಟಿ ರೂಪಾಯಿಗಳನ್ನು ಹೇಳಿ, ಸುಮಾರು 32ರಷ್ಟು ಹೆಚ್ಚು ಒದಗಿಸಿದ್ದೇವೆ ಎಂದ ಬೆನ್ನು ಚಪ್ಪರಿಸಿಕೊಂಡಿದ್ದೀರಿ, ಆ ಪ್ರಮಾಣದಲ್ಲಾದರೂ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚು ಹಣ ಒದಗಿಸಿಲ್ಲ.

ಶ್ರೀ ಎಸ್. ಬಂಗಾರಪ್ಪ : ವಿದ್ಯುಚ್ಛಕ್ತಿಗೆ ಹೆಚ್ಚು ಒದಗಿಸಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಆಡಾಮಾಶಕ್ಕೆ ಬರುವುದಿಲ್ಲ, ಲೆಕ್ಕ ಹಾಕಿದ್ದೇನೆ. ಶೇಕಡಾ 32ರಷ್ಟು ದಾಮಾಶಕ್ಕೆ ಬರುವುದಿಲ್ಲ. ಆ ಡಾಮಮಾಶಕ್ಕಾದರೂ ಬರಬೇಕಲ್ಲ. ತಮಿಳುನಾಡು ಆಂಧ್ರಪ್ರದೇಶದಲ್ಲಿ ಶೇಕಡಾ 32 ರಷ್ಟನ್ನು ಅಂದರೆ ಸರಿಸುಮಾರು ಶೇಕಡಾ ಮೂರನೇ ಒಂದು ಭಾಗದಷ್ಟನ್ನು ನೀರಾವರಿಗೆ ಖರ್ಚು ಮಾಡುತ್ತಾರೆ. ನಮ್ಮದು ಇಷ್ಟೆಲ್ಲಾ ಹೇಳಿದರೂ ಇನ್ನೂ ಶೇಕಡಾ 20ರಷ್ಟನ್ನು ದಾಟಿಲ್ಲ.

ಕಾವೇರಿ ಮತ್ತು ಕೃಷ್ಣಾ ನದಿಗಳು ಒಂದು ಕಡೆ. ಕಾವೇರಿ ಬಗ್ಗೆ ರಾಜ್ಯದಲ್ಲಿ ತೀರ್ಮಾನವಾಗುವುದಕ್ಕಿಂತ ಮುಂಚೆ ನಾವು ನಮ್ಮ ಹೆಚ್ಚುವರಿ ನೀರನ್ನು ಬಳಸಿಕೊಳ್ಳತಕ್ಕಂಥಾದ್ದಕ್ಕೆ ನಾವೆಲ್ಲರು ಒಪ್ಪಿಕೊಂಡಿರುವ ಹಾಗೆ ಯಾವುದಾದರೊಂದು ಬೇರೆ ಬಾಬಿಗೆ ಹಣ ಕಡಿಮೆ ಮಾಡಿ ಈ ಕಡೆಗೆ ಸ್ವಲ್ಪ ಹಣ ಹೆಚ್ಚು ಮಾಡಿ ನಮ್ಮ ಪಾಲಿನ ನೀರನ್ನು ನಾವು ಎರಡು ಸಾವಿರ ಇಸವಿಯೊಳಗೆ ಬಚಾವತ್ ತೀರ್ಪಿನ ಅನ್ವಯ ನಮಗೆ ಬರತಕ್ಕಂಥ ನಮ್ಮ ಪಾಲಿನ ನೀರನ್ನು ನಾವು ಬಳಕೆ ಮಾಡುವುದು ಅವಶ್ಯಕತೆ ಇದೆ. ಇನ್ನು ಉದ್ಯೋಗ ಸೃಷ್ಟೀ ಬಗ್ಗೆ ಕೊಟ್ಟಿದ್ದಾರೆ. ಸುಮಾರು ಹನ್ನೆರಡುವರೆ ಲಕ್ಷ ಉದ್ಯೋಗ ಎಂದು ನಮ್ಮ ಸರ್ಕಾರ ಉತ್ತರದಲ್ಲಿ ಸರಿಸುಮಾರು 12 ಲಕ್ಷ 97 ಸಾವಿರ 528 ಜನ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನಮ್ಮ ಕರ್ನಾಟಕ ರಾಜ್ಯದ ಮಕ್ಕಳು ತಮ್ಮ ಹೆಸರುಗಳನ್ನು ನೊಂದಾವಣೆ ಮಾಡಿದ್ದಾರೆ. ಇನ್ನು ನೊಂದಾವಣೆ ಆಗದೆ ಇರುವಂತಹದ್ದು ಮತ್ತೊಂದು ಇದೆ. ಈ ಕಾರಣ ಉದ್ಯೋಗ ಎಷ್ಟರ ಮಟ್ಟಿಗೆ ಸೃಷ್ಟಿ ಆಗಬೇಕಾಗಿತ್ತೋ ಅದು ಆಗಿಲ್ಲ. ಅದಕ್ಕೆ ಬೇರೆ ಒಂದು ಸಮಿತಿ ರಚನೆ ಮಾಡಿದ್ದಾರೆ. ಅದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ನಾನು ಇನ್ನು ಒಂದೆರಡು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಒಂದು ಜಿಲ್ಲಾ ಪರಿಷತ್ತು ಆ ಅಧಿಕಾರ ಕೂಡಾ ಕಿತ್ತುಕೊಂಡಿದ್ದಾರೆ. ಇನ್ನು ಕೆಲವೇ ದಿವಸಗಳಲ್ಲಿ ನಮಗೆ ಅದು ಬಂದುಬಿಡುತ್ತದೆಂದು ತಾವು ತಿಳಿದುಕೊಂಡಿದ್ದೀರಿ. ಅದು ಅಷ್ಟು ಸುಲಭವಾಗಿ ಆಗುವುದಿಲ್ಲ. ಅದಕ್ಕೆ ನೀವು ತಲೆ ಕೆಡಿಸಿಕೊಂಡಿದ್ದೀರಿ. ತಲೆಕೆಡಿಸಿಕೊಂಡು ನಿಮ್ಮ ತಲೆಯಲ್ಲಿದ್ದ ಕೂದಲು ಉದುರಿ ಹೋದವು. ಯೋಚನೆ ಮಾಡಿ ಮಾಡಿ ಸ್ವಲ್ಪ ಬೆಳೆಯುತ್ತಿದ್ದ ಕೂದಲೂ ಹೋದವು.

ಅದು ಸಾಧಾರಣವಾಗಿ ಆಗುವುದಿಲ್ಲ. ಅಷ್ಟು ಸುಲಭವಲ್ಲ. ಆಮೇಲೆ ಸಹಕಾರ ಸಂಸ್ಥೆಗಳಲ್ಲಿ ಚುನಾವಣೆ ನಡೆದವು. ಬಹಳ ಉತ್ಸಾಹದಿಂದ ಚುನಾವಣೆಗಳನ್ನು ಮಾಡಿದಿರಿ. ಚುನಾವಣೆ ಫಲಿತಾಂಶ ಫಿನಾಯಿತು ಗೊತ್ತಾಯಿತು ನಿಮಗೆ ಜನ ನಮ್ಮ ಪರವಾಗಿ ಇಲ್ಲ ಎಂದು. ಅದಕ್ಕೇನು ಮಾಡಿದಿರಿ ನಿಯಮ 29ರನ್ವಯ ನಾಮಿನೇಶನ್ ಮಾಡಲು ಶುರು ಮಾಡಿದರು. ನೀವು ನಾಮಿನೇಶನ್ ಶುರು ಮಾಡಿದ ಮೇಲೆ ಗೊತ್ತಾಯಿತು. ಇನ್ನು ಒಂದೆರಡು ಮಾತುಗಳನ್ನು ನಾನು ತೆರಿಗೆ ವಿಚಾರದಲ್ಲಿ ಹೇಳಬೇಕಾಗಿದೆ. ಲೈಸೆನ್ಸ್ ಫೀಯನ್ನು ಜಾಸ್ತಿ ಮಾಡಿದ್ದಾರೆ. ಸಿಎಲ್-1 ಸಿ.ಎಲ್-2 ಲೈಸೆನ್ಸ್‌ನಿಂದ ಸುಮಾರು ಅಂದರೆ ಎಷ್ಟು ಹೆಚ್ಚುವರಿ ಫೀಬರಬಹುದು. ಎಂದು ನಾನು ನನ್ನ ಒಂದು ಕಂಪ್ಯೂಟರ್‌ನಲ್ಲಿ ನಾನು ವರ್ಕ್ ಮಾಡಿದ್ದೇನೆ. ಅದು ಸುಮಾರು 19 ಕೋಟಿ 60 ಲಕ್ಷ ರೂಪಾಯಿಗಳು ಇದರಿಂದ ಬರಬಹುದು. ನಾನು ಎರಡು ಮೂರು ಸಾರಿ ಪರೀಕ್ಷೆ ಮಾಡಿ ನೋಡಿದ್ದೇನೆ. ಮೇಲ್ಮನೆಯಲ್ಲಿ ಹೇಳುತ್ತಾರೆ. 36ಕೋಟಿ ರೂಪಾಯಿಗಳೆಂದು. ಅದರೆ ನನ್ನ ಲೆಕ್ಕದ ಪ್ರಕಾರ ಅದು ಸರಾಸರಿ 20 ಕೋಟಿ ರೂಪಾಯಿಗಳು, ಆಗಬಹುದು.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ಜಿಲ್ಲಾ ಪರಿಷತ್ತು ಕಿತ್ತುಕೊಂಡರು ಎಂದು ಹೇಳಿದರು. ಆದರೆ ಇದರ ಸರ್ಕಾರ ಇದ್ದಾಗ ನಾವು ಬಡವರಿಗೆ ಕೊಟ್ಟಿರತಕ್ಕಂಥ ಜಮೀನನ್ನು ಕಿತ್ತುಕೊಂಡು ಸಾಹುಕಾರಿಗೆ ಮಾರಿದ್ದರು. ಅದಕ್ಕೆ ಬೇಕಾದಷ್ಟು ನಿದರ್ಶನಗಳಿವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾಯಕರೇ ತಾವು ಕುಳಿತುಕೊಳ್ಳಿ. ನೀವು ಅಲ್ಲ ನೀವು ನಮಗೆ ಖಾಯಂ ನಾಯಕರು. ನಾನು ಹೇಳುತ್ತಿರುವುದು ಸಭಾನಾಯಕರಿಗೆ. ಮಾನ್ಯ ಅಧ್ಯಕ್ಷರೇ ಇಷ್ಟು ಹೆಚ್ಚುವರಿ ಬರುತ್ತದೆ. ಎಂದು ಹೇಳಿದ್ದಾರೆ. ಆದರೆ ವಿವರಗಳಿಗೆ ನಾನು ಹೋಗುವುದಿಲ್ಲ. ಹೆಚ್ಚು ಅಂದರೆ ನನ್ನ ಒಂದು ಲೆಕ್ಕಾಚಾರದ ಪ್ರಕಾರ ಸುಮಾರು 19.6 ಕೋಟಿ ರೂಪಾಯಿಗಳು ಇಲ್ಲಾ 20 ಕೋಟಿ ರೂಪಾಯಿಗಳು ಆದಾಯ ಜಾಸ್ತಿ ಬರುತ್ತದೆ. ಈ ಲೈಸೆನ್ಸ್‌ನಿಂದ ಆದಾಯ ಜಾಸ್ತಿ ಬರುತ್ತದೆ. ಇದನ್ನು 1991-92ನೇ ಇಸವಿಯ ನಿವ್ವಳ ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹಣೆ ಕೋಸ್ಟಕದಲ್ಲಿ ಅದು ಬರಬೇಕಲ್ಲ. ಲಾಸ್ಟ್‌ನಲ್ಲಿ 1991-92 ನೇ ಇಸವಿಯ ನಿವ್ವಳ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಯಲ್ಲಿ ಮಾರಾಟ ತೆರಿಗೆಯಿಂದ ಇಷ್ಟು ಬರುತ್ತದೆ. ವೃತ್ತಿ ತೆರಿಗೆಯಿಂದ ಇಷ್ಟು ಬರುತ್ತದೆ. ಮೋಟರ್ ವೆಹಿಕಲ್ ಟ್ಯಾಕ್ಸ್‌ನಿಂದ ಇಷ್ಟು ಬರುತ್ತದೆ. ಲೈಸೆನ್ಸ್ ಫೀ ಇದರಿಂದ ಇಷ್ಟು ಹಣ ಬರುತ್ತದೆ. ಇದನ್ನೂ ಏತಕ್ಕೆ ಇಲ್ಲಿ ಕಾಣಿಸಿಲ್ಲ? This is a deliberate attempt by the Government and that is why this is not shown. Has this enactment shown in the budget book could be negotiable? ಅವರು ಏನಾದರೂ ಕೇಳಿದರೆ ಕಡಿಮೆ ಮಾಡಿಬಿಡೋಣ, ಆದರೆ, ಈ ಸದನದ ಮುಂದೆ ಈ ಪುಸ್ತಕವನ್ನು ಇಡುವಾಗ ಲೆಕ್ಕ ಇಷ್ಟು ಜಾಸ್ತಿಯಾಗಿದೆಯೆಂದು ಹೇಳುವಾಗ 53 ಪ್ಲಸ್ 10 ಒಟ್ಟು 63 ಕೋಟಿ ರೂಪಾಯಿ ಡೆಫಿಸಿಟ್ ತೋರಿಸಿದ್ದೀರಲ್ಲ. ಆದಾಯ ಬರತಕ್ಕಂಥಾ ಮೂಲಗಳಿಗೆ ಏನು ಕೈ ಹಾಕಿದ್ದೀರಿ? ಹೆಚ್ಚು ಬರತಕ್ಕಂಥ ಆದಾಯದಲ್ಲಿ ಪ್ರತಿಧ್ವನಿ ಆಗಲೇಬೇಕಲ್ಲಾ? ಏಕೆ ಅದು ಬಿಟ್ಟು ಹೋಗಿದೆ ? Who is responsible for this lapse? Could the House be taken for a ride? This is one of the very important basic lapse committed by the Government. ಅಥವಾ ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿಯತಕ್ಕಂಥ ಒಂದು ಪ್ರಯತ್ನವೆ? ಯಾರನ್ನು ಮೋಸ ಮಾಡಲಿಕ್ಕಾಗಿ ಈ ಹಣ? ಏನಾಯಿತು ಆ ಹಣ? I want this should be gone into in detail. Whatever

the proportion, every proportion is voted in this House and Constitutionally voted in this House. Conspicuously this Rs. 20 Crores is missing. This is a big lapse, I should say. I feel only sorry for this Government. Beyond that, I won't want to say and I leave at that.

ಮಾನ್ಯ ಅಧ್ಯಕ್ಷರೆ ಎಂಥಾದ್ದಕ್ಕೆ ತೆರಿಗೆ ಹಾಕುವುದು? ಆಯಿಲ್ ಸೀಡ್ಸ್‌ಗೆ. ರೈತನಿಗೆ ಮೊದಲೇ ಗೂನು ಬೆನ್ನು, ಅವನಿಗೆ ಮತ್ತೊಂದು ಹೊಡೆತ. ಆಯಿಲ್ ಸೀಡ್ಸ್‌ಗೆ ಮೂಲದಲ್ಲಿ ತೆರಿಗೆ ಇಲ್ಲ, ಅಂತಿಮವಾಗಿ ಎಣ್ಣೆ ಬಂದಾಗ ತೆರಿಗೆ. ನಾನು ಒಂದು ಕಂಪ್ಯಾರಿಸನ್ ಲಿಸ್ಟ್ ನೋಡುತ್ತಿದ್ದೆ. ಗೋವಾದಲ್ಲಿ 2 ಪರ್ಸೆಂಟ್, ಮಹಾರಾಷ್ಟ್ರದಲ್ಲಿ 4 ಪರ್‌ಸೆಂಟ್. ತಮಿಳುನಾಡಿನಲ್ಲಿ 1 ಪರ್ಸೆಂಟ್, ಕೇರಳದಲ್ಲಿ ಇಲ್ಲ, ಕರ್ನಾಟಕದಲ್ಲಿ 3 ಪರ್‌ಸೆಂಟ್ ಇದು ಆಯಿಲ್‌ಗೆ, ಇನ್ನು ಆಯಿಲ್ ಸೀಡ್ಸ್‌ಗೆ ಗೋವಾದಲ್ಲಿ ಇಲ್ಲ. ಮಹಾರಾಷ್ಟ್ರದಲ್ಲಿ ಇಲ್ಲ. ತಮಿಳುನಾಡಿನಲ್ಲಿ 4 ಪರ್‌ಸೆಂಟ್, ಕೇರಳದಲ್ಲಿ ಇಲ್ಲ. ಕರ್ನಾಟಕದಲ್ಲಿ 4 ಪರ್ಸೆಂಟ್ ಆಮೇಲೆ ಆಯಿಲ್ ಕೇಕ್ ಮೇಲೆ ಗೋವಾದಲ್ಲಿ ಇಲ್ಲ. ಮಹರಾಷ್ಟ್ರದಲ್ಲಿ 2 ಪರ್‌ಸೆಂಟ್, ತಮಿಳುನಾಡಿನಲ್ಲಿ ಇಲ್ಲ, ಕೇರಳದಲ್ಲಿ ಇಲ್ಲ, ಅಂದರೆ ಗೋವಾದಲ್ಲಿ ಎಣ್ಣೆ ಬೀಜ ಮತ್ತು ಎಣ್ಣೆ ಹಾಗೂ ಆಯಿಲ್ ಕೇಕ್ ಮೇಲೆ ಒಟ್ಟು 2 ಪರ್‌ಸೆಂಟ್ ಇದೆ. ಮಹಾರಾಷ್ಟ್ರದಲ್ಲಿ 6 ಪರ್‌ಸೆಂಟ್, ತಮಿಳುನಾಡಿನಲ್ಲಿ 5 ಪರ್‌ಸೆಂಟ್, ಕೇರಳದಲ್ಲಿ ಇದಕ್ಕೆ ಒಂದು ಪೈಸೆಯಷ್ಟೂ ತೆರಿಗೆ ಇಲ್ಲ, ಕರ್ನಾಟಕದಲ್ಲಿ 4 ಪ್ಲಸ್ 3 ಪ್ಲಸ್ 5 ಒಟ್ಟು 12 ಪರ್‌ಸೆಂಟ್ ಇದರ ಜೊತೆಗೆ ಟಿ.ಒ.ಟಿ. ಎಲ್ಲಾ ಸೇರಿ 13.75 ಪರ್ಸೆಂಟ್ ತೆರಿಗೆ. ಇದು ರೈತರ ಪರವಾಗಿ ಆಯವ್ಯಯವೆಂದು ನಾನು ಹೇಗೆ ಹೇಳಲಿ? ಅದಕ್ಕೇ ನಾನು ಇದನ್ನು ರೈತ ವಿರೋಧಿ ಆಯವ್ಯಯ ಎನ್ನುವಂಥ ಮಾತನ್ನು ಪ್ರಾರಂಭದಲ್ಲೇ ಹೇಳಿದ್ದೇನೆ. ಬಹಳ ಮುಖ್ಯವಾದಂಥ ಒಂದಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಪುಟ 65ರಲ್ಲಿ ಕ್ಯಾಪಿಟಲ್ ಔಟ್‌ಲೇ 431.15, ಪರಿಷ್ಕೃತ ಅಂದಾಜು 682.75 ಬಜೆಟ್ ಅಂದಾಜು 533.20. ಮಾನ್ಯ ಅಧ್ಯಕ್ಷರೇ ಇದನ್ನು ನಾನು ಅನೇಕ ವರ್ಷಗಳಿಂದ ನೋಡುತ್ತಾ ಬಂದಿದ್ದೇನೆ. 150 ಕೋಟಿ ರೂಪಾಯಿ ಕಡಿಮೆ. 149.75 ರಷ್ಟು ಬಂಡವಾಳ ವೆಚ್ಚದಲ್ಲಿ ನಿವ್ವಳ ಕಡಿಮೆ. ಇದು ನಿಮ್ಮ ಬಟವಾಡೆ ಇದನ್ನು ಸಾಧನೆಯೆಂದು ಹೇಳಲೇ? 1990-91ರಲ್ಲಿ ಅಂದಾಜು ಮಾಡಿದ್ದು 431 ಕೋಟಿ ರೂಪಾಯಿ, ಪರಿಷ್ಕೃತ ಅಂದಾಜು 628 ಕೋಟಿ, ಬಜೆಟ್ ಅಂದಾಜು 1991-92ರಲ್ಲಿ 531 ಕೋಟಿ ರೂಪಾಯಿ.

1991-92ಕ್ಕೆ ಅಂದಾಜು ಬಜೆಟ್ 531 ಕೋಟಿ ರೂಪಾಯಿಗಳು. ವೆಚ್ಚ 150 ಕೋಟಿ ಇಷ್ಟು ವ್ಯತ್ಯಾಸಕ್ಕೆ ಸಮಾಧಾನವನ್ನು ಮಾನ್ಯ ಅರ್ಥಮಂತ್ರಿಗಳೇ ಕೊಡಬೇಕೆಂದು ನಾನು ಹೇಳುತ್ತೇನೆ, ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೋಟಾರು ವಾಹನಗಳ ತೆರಿಗೆ ಬಹಳ ಇಂಟರೆಸ್ಟಿಂಗ್ ಆಗಿದೆ. ನಾನು ನಿನ್ನೆಯ ದಿವಸ ಶ್ರೀಮಂತರ ಬಜೆಟ್ ಎಂದಾಗ ಯಾವ ಕಾರಣಕ್ಕಾಗಿ ಈ ರೀತಿ ಹೇಳಿದೆ ಎಂದರೆ ಜನಸಾಮಾನ್ಯರು ಓಡಾಡತಕ್ಕಂತೆ ವಾಹನಗಳ ಮೇಲೆ ಎಲ್ಲಾ ತೆರಿಗೆ ಏರಿಕೆ. ಆದರೆ ಸಿನಿಮಾದವರು ಮತ್ತು ಹೆಂಡದ ದೊರೆಗಳು ಹೋಗತಕ್ಕಂಥಹ ಇಂಪೋರ್ಟೆಡ್ ಕಾರ್‌ಗಳಿಗೆ ಸಾವಿರ ರೂಪಾಯಿನಿಂದ ನೂರು ರೂಪಾಯಿಗೆ ಇಳಿತ. ಕಂಪ್ಯಾರಿಟೀವ್ ಇದು. ಸುಮ್ಮನೇ ಒಂದೆರಡು ಉದಾಹರಣೆ ಹೇಳಿದೆ ಅಷ್ಟೇ. "ಭಾರತದ ಹೊರಗೆ ತಯಾರಿಸಿದ ಅಥವಾ ಬಿಡಿ ಭಾಗಗಳನ್ನು ಜೋಡಿಸಿರುವ 1981ರ ಹಾಗೂ ಅನಂತರದ ಮಾದರಿಯ ಹಾಗೂ ವ್ಯಕ್ತಿಗಳ ಹಾಗೂ ಕಂಪೆನಿಗಳ ಒಡೆತನದಲ್ಲಿರುವ ಆಮದು ಮಾಡಿಕೊಂಡ ಕಾರುಗಳು, ತೂಕ ಹೇಳಿದಾಗ, 1500 ಕಿಲೋ ಗ್ರಾಂಗೆ ಮೀರದ ಭಾರವುಳ್ಳ ಕಾರು 1000 ಇದ್ದದ್ದು ಸೀದಾ 500ಕ್ಕೆ ಕೆಳಕ್ಕೆ ಇಳಿಯುತ್ತದೆ. 1060 ಇದ್ದಂತಹ ವಿದೇಶಿ

ಕಾರಿನ ತೆರಿಗೆ 590ಕ್ಕೆ ಇಳಿಯುತ್ತದೆ. ಹಾಗೆಯೇ ಇಳಿಯುತ್ತದೆ. ದಾಮಾಶಾ ವಿದೇಶೀ ಕಾರುಗಳಿಗೆ ಅರ್ಧಕ್ಕೆ ಅರ್ಧ ಇಳಿಯುತ್ತದೆ. ನಾವು ಓಡಾಡತಕ್ಕಂಥಹ ಬಸ್, ಟ್ಯಾಕ್ಸಿ ಇವೆಲ್ಲಾ ಏರುತ್ತಿದೆ. ಇದಕ್ಕೆ ಕಾರಣ ಏನು? ಯಾಕೆ ಹೀಗೆ ಆಯಿತು? ನಮ್ಮ ಮತ್ತು ಸಿನೆಮಾದವರ ಸಂಬಂಧವೋ ಅಥವಾ ನಮ್ಮ ಮತ್ತು ಹೆಂಡದ ದೊರೆಗಳಿಗೆ ಇರತಕ್ಕ ಸಂಬಂಧವೋ? ತೆರಿಗೆಯನ್ನು ಇಳಿಸುವುದಕ್ಕೆ ಏನಾದರೂ ಕಾರಣ ಬೇಕಲ್ಲ. ಏನು ಕಾರಣ? ಇದನ್ನು ನಾನು ತಿಳಿಯಬಯಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ವಿರೋಧ ಪಕ್ಷದ ನಾಯಕರು ಈಗ ತಾನೇ ಪಕ್ಕದ ರಾಜ್ಯದಲ್ಲಿನ ಆಯಿಲ್ ಸೀಡ್ಸ್ ಬಗ್ಗೆ ಹೇಳಿದ್ದಾರೆ. ಅದೇ ರೀತಿ ವಾಹನಗಳ ಬಗ್ಗೆ ತಾವು ತಿಳಿದುಕೊಳ್ಳಬೇಕು. ಆಂಧ್ರದಲ್ಲಿ ಫಾರೀನ್ ಕಾರಿಗೆ ಲೈಫ್ ಟ್ಯಾಕ್ಸ್ 300 ರೂಪಾಯಿಗಳು. ಆ ಒಂದು ದೃಷ್ಟಿಯಲ್ಲಿ ನಮ್ಮ ಸರ್ಕಾರ ಮಾಡಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ನನಗೆ ಗೊತ್ತಾಗುವುದಿಲ್ಲ. ನಿಮಗೆ ಗೊತ್ತಿರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ಕಾರು, ಪಾರು ಬಗ್ಗೆ ಹುಡುಕುವುದಕ್ಕೆ ಹೋಗುವುದಿಲ್ಲ. ನಾನು ರೈತರಿಗೆ ಬೇಕಾಗಿರತಕ್ಕ ಎಣ್ಣೆ ಬೀಜಗಳ ಪ್ರೈಸಸ್ ಎಷ್ಟು ಇದೆ ಎಂದು ಹುಡುಕುತ್ತೇನೆ. ಅಷ್ಟೇ. ರೈತರು ಉತ್ಪಾದನೆಗೆ ಬಳಸತಕ್ಕಂಥ ಸಾಧನಗಳು ಇದ್ದಾವಲ್ಲ ಟ್ರಾಕ್ಟರ್‌ಗಳಾಗಲೀ, ಟಿಲ್ಲರ್ ಟ್ರೈಲರ್‌ಗಳಾಗಲೀ ಇವೆಕ್ಕೆಲ್ಲಾ ಜಾಸ್ತಿ. ವಿದೇಶಿ ಕಾರುಗಳಿಗೆ ಕಡಿಮೆ. ಆದ್ದರಿಂದ ನಾನು ಇನ್ನು ಸಮಯದ ವ್ಯಾಪ್ತಿಯನ್ನು ಮೀರುತ್ತಿದ್ದೇನೆ. ತಾವು ನನ್ನ ಕಡೆ ನೋಡುತ್ತಿದ್ದೀರಿ, ನಾನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಇಲ್ಲಿ ರಾಜ್ಯದಲ್ಲಿ ನಡೆದಿರತಕ್ಕಂಥ ಕೋಮುಗಲಭೆಗಳನ್ನು ಪ್ರಾರಂಭಿಕವಾಗಿ ಪ್ರಸ್ತಾಪ ಮಾಡಿದ್ದಾರೆ. ನಾನು ಮುಖ್ಯಮಂತ್ರಿಗಳ ಗಮನಕ್ಕೆ ಎರಡು ಕಮೀಷನ್ ಆಫ್ ಎನ್‌ಕ್ವೇರಿ ರಿಪೋರ್ಟ್‌ಗಳನ್ನು ಕನಿಷ್ಠ ಗಮನಿಸಬೇಕು ಎಂದು ಕೇಳುತ್ತೇನೆ. Recommendations of the Commission of Inquiry into the police firing in Ramanagaram.

ಅಲ್ಲಿ ಮಾನ್ಯ ಜಸ್ಟೀಸ್ ಡಿ.ಪಿ. ಹಿರೇಮಠ್ ರವರು ಕೆಲವು ರೆಕ್ಮಂಡೇಷನ್ಸ್ ಮಾಡಿದ್ದಾರೆ. ಅದು ಹೀಗಿದೆ.

"1. Intelligence machinery of the State should be strengthened.

2. Police force should be expanded.

3. Fire fighting devices should be readily made available at a short notice."

ಹೀಗೆ ಅನೇಕ ರೆಕ್ಮಂಡೇಷನ್ ಮಾಡಿದ್ದಾರೆ. ಇವನ್ನು ಗಮನಿಸಿ ಸರ್ಕಾರ ಯಾವುದಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದೆಯಾ? ಹಾಕಿಕೊಳ್ಳದೇ ಇದ್ದರೆ ಈ ಕಮೀಷನ್ ಆಫ್ ಎನ್‌ಕ್ವೈರಿ ರಿಪೋರ್ಟ್ ಯಾಕೆ ಇರಬೇಕು? 1974 ರ ಡಿಸೆಂಬರ್ 9 ನೇ ತಾರೀಖು ಶ್ರೀ ಪಿ.ಆರ್. ಲಿಂಗೋಜಿ ರಾವ್ ಕಮೀಷನ್ ಎನ್ನತಕ್ಕದ್ದನ್ನು ಮಾಡಿದ್ದಾರೆ. ಇದುವರೆಗೆ ಅದು ಇಂಪ್ಲಿಮೆಂಟ್ ಮಾಡಿಲ್ಲ. ರಾಮನಗರದಲ್ಲಿ 1987ರಲ್ಲಿ ನಡೆದ ಘಟನೆಗಳ ಬಗ್ಗೆ ಒಂದು ಕಮೀಷನ್ ವರದಿ ಇದೆ. ಅದರ ಆಧಾರದ ಮೇಲೆ ಮೂರು ವರ್ಷದ ತರುವಾಯವೂ ಕೂಡ ಪೋಲೀಸ್ ಇಲಾಖೆಯಲ್ಲಿರತಕ್ಕಂಥ ದೋಷಗಳನ್ನು ಗುರುತಿಸಿ, ವರದಿ ಮೂಲಕ ನಮಗೆ ಕೊಟ್ಟಿದ್ದಾರೆ. ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸರ್ಕಾರ ಹಮ್ಮಿಕೊಂಡಿರತಕ್ಕ ಕಾರ್ಯಕ್ರಮಗಳನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ.

ಕೊನೆಯದಾಗಿ ಒಂದೆರಡು ಸಲಹೆಗಳನ್ನು ಸರ್ಕಾರದ ಪುನರ್ ಪರಿಶೀಲನೆಗಾಗಿ ಒತ್ತಾಯ ಪಡಿಸುತ್ತೇನೆ. ಉಳಿದದ್ದೆಲ್ಲ ಲೆಕ್ಕವಾಯಿತು. ಕೆಲವು ಮುಖ್ಯವಾಗಿ ನಮ್ಮ ರೈತರಿಗೆ ನೀವು ಮಧ್ಯಾಹ್ನದ ಮೀಲ್ಸ್ ಕೊಡಬೇಡಿ. ಸಬ್ಸಿಡಿಗಳನ್ನು ಕೊಡಬೇಡಿ. ದಯವಿಟ್ಟು ನಮ್ಮ ರಾಜ್ಯದಲ್ಲಿ ಸುಮಾರು 26 ಸಾವಿರ ಕೆರೆಗಳಿವೆ. ಅವುಗಳಲ್ಲೆಲ್ಲ ಹೂಳು ತುಂಬಿ ನಿಂತಿದೆ. ನಾನು ಕೆಲಸವನ್ನು ನೋಡಿದ್ದೇನೆ, ಖಾಸಗಿಯವರು ಹೂಳು ತೆಗೆಸಿದ್ದಾರೆ. ಇಂತಹ ಕ್ಷಾಮದ ಪರಿಸ್ಥಿತಿಯಲ್ಲೂ ಅಂತಹ ಕೆರೆಗಳಲ್ಲಿ ನೀರಿದೆ. ಆದ್ದರಿಂದ ಈ ರಾಜ್ಯದ ರೈತರಿಗೆ ಕನಿಷ್ಟ ಆಧಾರವಾಗಿರುವ ಕೆರೆಗಳೇನಿವೆ ಅವುಗಳ ಹೂಳು ತೆಗೆಸುವ ಕಾರ್ಯಕ್ರಮ ಹಾಕಿಕೊಳ್ಳಿ. ಮೀಲ್ಸ್‌ಗೆಂದು ಇಟ್ಟಿರುವ 20 ಕೋಟಿಯಲ್ಲಿ ಆಗ ಅವರೇ ನಿಮಗೆ ಅನ್ನ ಹಾಕುತ್ತಾರೆ. ಕನಿಷ್ಟ ಅಭಾವವಿರುವವರೆಗಾದರೂ ವಿದ್ಯುತ್ ಕೊಡುತ್ತೇವೆಂದರೂ ಹೇಳಿ. ಇವತ್ತು ಬೆಳಿಗ್ಗೆ ಕೂಡ ಚರ್ಚೆ ಮಾಡಿದ್ದೇವೆ. ಹನಿ ನೀರಾವರಿ ಕುರಿತು. ನಾವು ಅದನ್ನು ಮಾಡದಿದ್ದರೆ ಅನ್ಯಥಾ ಮಾರ್ಗವಿಲ್ಲ. ಆದ್ದರಿಂದ ತುಂತುರು ನೀರಾವರಿಗಾಗಿ ಯಾವ್ಯಾವ ಪಾರ್ಟ್ಸ್ ಬೇಕೋ ಅವುಗಳ ಮೇಲೆ ಸಬ್ಸಿಡಿ ಕೊಡುವ ಬದಲು ಅದಕ್ಕೆ ಬೇಕಾಗದ ಸಾಧನಗಳಸ್ನು ಉತ್ಪಾದನೆ ಮಾಡುವುದಕ್ಕೆ ಆರಂಭಿಸಬೇಕು. ಅದು ಸಾಧ್ಯವಾಗದಿದ್ದರೆ ಶೇಕಡ 50 ರಿಂದ 60 ರಷ್ಟು ರೈತರು ಯಾರು ತುಂತುರು ನೀರಾವರಿ ಮಾಡುತ್ತಿದ್ದಾರೆ. ಅವರಿಗೆ ಪ್ರೋತ್ಸಾಹ ಕೊಡಬೇಕು. ಅದರ ಜೊತೆಗೆ ಮಾರುಕಟ್ಟೆ ಇದೆ. ಆಗಲೇ ಬಂಗಾರಪ್ಪ ಕಮಿಷನ್ನಿನ ಮೊದಲನೇ ಸೆಂಟೆನ್ಸನ್ನು ಓದಿದ್ದೇನೆ. I don't want to take the trouble or the time of the House to go through the details.

ಕನಿಷ್ಟ ಅವರೇ ತಯಾರಿಸಿದ ವರದಿಯನ್ನು ಜಾರಿಗೆ ಕೊಡುವ ಪ್ರಯತ್ನ ಮಾಡಬೇಕೆಂದು ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಾರ್ಥನೆ ಮಾಡುತ್ತಾ, ಈ ಆಯವ್ಯಯದಲ್ಲಿ ಸಾಧನೆಗಳ ದೃಷ್ಟಿಯಿಂದ ಪದೇಪದೇ ಒತ್ತಿ ಹೇಳುತ್ತೇನೆ ಪರ್‌ಫಾಮೆನ್ಸ್ ಬಜೆಟ್ ಕೊಡದೆ ಈ ದೇಶದ ಜನತೆಗೆ ಮೋಸ ಮಾಡುತ್ತಿದ್ದೀರಿ, ಹೊಸದಾಗಿ ಬಂದಿರುವ ಸದನದ ಸದಸ್ಯರಿಗಂತೂ ಈ ಜಗಲರಿ ಆಫ್ ಫಿಗರ್ಸ್ ಅರ್ಥವಾಗದೆ, ಕೊಟ್ಟ ಮಾತು ಮತ್ತು ಸಾಧನೆ ಇವುಗಳ ತುಲನೆ ಮಾಡುವುದಕ್ಕಾಗಿ ಏನೂ ಉಪಯೋಗವಾಗುತ್ತಿಲ್ಲ. ಕಾಫಿ ತೆರಿಗೆಯಲ್ಲಿ 13 ಪರ್ಸೆಂಟ್ ಪ್ಲಸ್ ಒಂದೂವರೆ ಪರ್ಸೆಂಟ್ ಕರ್ನಾಟಕದಲ್ಲಿದೆ. ನಿಮ್ಮ ಪಕ್ಷದ ಸರ್ಕಾರದ ಅಧಿಕಾರಕ್ಕೆ ಬಂದ ತರುಣದಲ್ಲಿ ದಕ್ಷಿಣ ಭಾರತದ ಎಲ್ಲ ಅರ್ಥಮಂತ್ರಿಗಳ ಸಭೆ ಕರೆದು ಇದರಲ್ಲಿ ಸಮಾನತೆ ತರುವ ಪ್ರಯತ್ನ ಮಾಡಲಾಗುವುದೆಂದಿದ್ದಿರಿ. ಆ ಭರವಸೆ ಏನಾಯಿತು. ಒಂದು ಮೀಟಿಂಗೂ ಆಗಲಿಲ್ಲ. ಪಕ್ಕದ ಕೇರಳದಲ್ಲಿ ಕಾಫಿಗೆ 6 ಪರ್ಸೆಂಟ್ ಟ್ಯಾಕ್ಸಿದ್ದರೆ ಕರ್ನಾಟಕದಲ್ಲಿ 14.5 ಪರ್ಸೆಂಟ್. ಈ ಕಾಫಿ ಮಿಲ್ ಆಗುವುದು ಒಂದೇ ಕಡೆ, ಹಣ ಕೊಡುವುದೂ ಒಂದೇ ಕಡೆ. ಆದರೆ ಕರ್ನಾಟಕದಲ್ಲಿ ಮಾತ್ರ ಏಕೆ 14 ಪ್ಲಸ್ ಒಂದೂವರೆ ಪರ್ಸೆಂಟ್ ತಮಿಳುನಾಡಿನಲ್ಲಿ 4 ಪರ್ಸೆಂಟ್. ನನಗೆ ತಿಳಿದಂತೆ, ಆಂಧ್ರದಲ್ಲಿ ತೆರಿಗೆಯೇ ಇಲ್ಲ, ಆದ್ದರಿಂದ ಈ ಸಲವಾದರೂ ಮಾನ್ಯ ಮುಖ್ಯಮಂತ್ರಿಗಳು, ಹಣಕಾಸುಮಂತ್ರಿಗಳೂ ದಯವಿಟ್ಟು ಇದನ್ನು ವಿಶೇಷವಾಗಿ ಗಮನಿಸಬೇಕು. ಈ ಬಗ್ಗೆ ಮೂರುವರೆ ನಾಲ್ಕು ವರ್ಷದಿಂದಲೂ ಹೇಳುತ್ತಿದ್ದೇವೆ. ತೆರಿಗೆಯನ್ನು ತೆಗೆದುಹಾಕಿ ಎಂದು ಹೇಳುವುದಿಲ್ಲ, ಆದ್ದರಿಂದ ಬಹಳ ಕಷ್ಟವಾಗುತ್ತದೆ. ಆದರೆ ಈ ರಾಜ್ಯದಲ್ಲಿ ಒಂದು ತರಹ ಆ ರಾಜ್ಯದಲ್ಲಿ ಒಂದು ತರಹ ಇದ್ದರೆ ಹೇಗೆ? ಕಾಫಿಯಲ್ಲಿರುವ ವ್ಯತ್ಯಾಸವಾದರೂ ಏನು? ಮಾನ್ಯ ರಾಜಶೇಖರಮೂರ್ತಿಯವರು ಭರವಸೆ ಕೊಟ್ಟಿದ್ದರು. ಆದರೆ ಅದನ್ನು ಈಡೇರಿಸಲು ಅವರಿಗೆ ಸಾಧ್ಯವಾಗಲಿಲ್ಲ. ದಕ್ಷಿಣ ಭಾರತದ ಫೈನಾನ್ಸ್ ಮಿನಿಸ್ಟರ್ಸನ್ನೆಲ್ಲ ಕರೆದು ಕಾನ್‌ಫರೆನ್ಸ್ ಮಾಡಿ ಒಂದು ಸಮತೋಲನ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಮಾಡಿಕೊಡಬೇಕು. ಅಧ್ಯಕ್ಷರೇ, ನಾನು ಬಹಳ ಸಮಯ

ತೆಗೆದುಕೊಂಡಿದ್ದೇನೆ. ನನ್ನ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಮಾಡಿದ್ದೇನೆ ಕೆಲವು ಸಲ ನೀವು ಕೊಟ್ಟ ಎಲ್ಲ ಆಶ್ವಾಸನೆಗಳನ್ನು ಇಂಪ್ಲಿಮೆಂಟ್ [illegible]. ನಿಮ್ಮ ಸರ್ಕಾರ ಸಂಪೂರ್ಣವಾಗಿ ಸೋತಿವೆ ಇಲ್ಲವೇ ಸೋಲನ್ನು ಒಪ್ಪಿಕೊಳ್ಳುವುದಕ್ಕೆ ನೀವು ತಯಾರಾಗಿಲ್ಲ. ಆದ್ದರಿಂದ ಇದು ರಾಜ್ಯದ ರೈತವಿರೋಧಿ ಆಯವ್ಯಯ, ಸ್ವಲ್ಪ ಮಟ್ಟಿಗೆ ಶ್ರೀಮಂತರ ಪರವಾಗಿರುವ ಆಯವ್ಯಯ. ನನ್ನ ನಿರೀಕ್ಷೆ ನಿಮ್ಮ ಬಗ್ಗೆ ಏನಿತ್ತು. ಯಾವ ಹಿನ್ನೆಲೆಯಿಂದ ನೀವು ಬಂದಿರಿ. ಅದಕ್ಕೆ ತದ್ವಿರುದ್ಧವಾದ ಆಲೋಚನೆಯನ್ನು ನೀವು ಏಕೆ ಮಾಡಿದಿರಿ ಎಂದು ವೈಯಕ್ತಿಕವಾಗಿಯಾದರೂ ನನಗೆ ನೀವು ವಿವರಣೆ ಕೊಡಬೇಕು. ಸಿಕ್ಕಿದ ಅವಕಾಶವನ್ನು ನೀವು ಕಳೆದುಕೊಳ್ಳಬಾರದಿತ್ತೆಂದು ಹೇಳಿ ನನ್ನ ದೃಷ್ಟಿಯಿಂದ ಒಪ್ಪಿಗೆ ಕೊಡುವುದಕ್ಕೆ ಯೋಗ್ಯವಲ್ಲವೆಂದು ಇದನ್ನು ವಿರೋಧಿಸಿ ನನ್ನ ಮಾತು ಮುಗಿಸುತ್ತೇನೆ.

+ಶ್ರೀ ಎಂ.ವೈ. ಘೋರ್ಪಡೆ (ಸಂಡೂರು) : ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ ಬೆಜೆಟ್ ಅಂದಾಜುಗಳನ್ನು ಸಮರ್ಥನೆ ಮಾಡುವಾಗ ಕೆಲವು ವಿಚಾರಗಳನ್ನು ಮಾತ್ರ ಸದನದ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಈಗಾಗಲೇ ವಿರೋಧಪಕ್ಷದ ನಾಯಕರು ಸುಧೀರ್ಘ ಭಾಷಣ ಮಾಡಿದ್ದಾರೆ. ಇವತ್ತು ನನಗೆ ಮಾತನಾಡಲು ಅವಕಾಶ ಸಿಗುವುದೋ, ಇಲ್ಲವೋ ಎಂದು ನಂಬಿಕೆ ಬಾರದಷ್ಟು ಮಾತಾಡಿದ್ದಾರೆ. ಯಾವುದೇ ಒಂದು ಬಜೆಟ್ ಬಗ್ಗೆ ವಿಶ್ಲೇಷಣೆ ನಡೆಯಬೇಕು ಮತ್ತು ಅದು ಕಾರ್ಯಗತವಾಗಬೇಕಾದುದೆಂದು ನಾವೆಲ್ಲರೂ ಒಪ್ಪುತ್ತೇವೆ ಅದರಲ್ಲಿ ಏನೂ ಅನುಮಾನ ಇಲ್ಲ. ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಪ್ರಸ್ತಾಪ ಸದನದಲ್ಲಾಗಿದೆ. ಅದಕ್ಕಾಗಿ ಅದರ ಬಗ್ಗೆ ಪುನಃ ನಾನು ಮಾತನಾಡಲು ಇಷ್ಟಪಡುವುದಿಲ್ಲ. ಒಂದು ಮಾತು ಹೇಳುವುದಾದರೆ ಗೌರ್ನರ್ ಅಡ್ರೆಸ್‌ಗೆ ಉತ್ತರ ಕೊಡುವಾಗ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾಗಿ ಉತ್ತರಿಸಿದ್ದಾರೆ. ಕರ್ನಾಟಕದಲ್ಲಿ ಕುಡಿಯುವ ನೀರಿಗೆ ಎಷ್ಟು ಗಂಭೀರ ಪರಿಸ್ಥಿತಿ ಇದೆ ಎಂದು ಅರಿತುಕೊಂಡಿರುವುದಾಗಿ ಮತ್ತು ಅದನ್ನು ದಕ್ಷತೆಯಿಂದ ಎದುರಿಸಲಿಕ್ಕೆ ಸರ್ವ ಪ್ರಯತ್ನ ಮಾಡುವುದಾಗಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಮುಖ್ಯಮಂತ್ರಿಗಳಿಗೆ ಕೆಲವು ಸೂಚನೆಗಳನ್ನು ಹೇಳಬಯಸುತ್ತೇನೆ. ಹೋದ ವರ್ಷ ಕುಡಿಯುವ ನೀರಿಗಾಗಿ 35 ಕೋಟಿ ಏನಿಡಲಾಗಿತ್ತು. ಈ ವರ್ಷ ಅದನ್ನು 42 ಕೋಟಿಗೆ ಏರಿಸಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಚರ್ಚೆಗೆ ಉತ್ತರಿಸುವಾಗ ಅದಕ್ಕೆ ಇನ್ನೂ 25 ಕೋಟಿ ಸೇರಿಸಬೇಕೆಂದು ನನ್ನ ಸ್ಪಷ್ಟ ಸಲಹೆ. ಅಂದರೆ ಅದು 60 ಕೋಟಿ ಆಗುತ್ತದೆ ತಿಂಗಳಿಗೆ 5 ಕೋಟಿಯಂತೆ ಖರ್ಚು ಮಾಡಬಹುದು. ಇದರ ಬಗ್ಗೆ ಒಂದೆರಡು ಮಾತು ಹೇಳಬೇಕು. ಇಂದು ಇಂಪ್ಲಿಮೆಂಟೇಷನ್ ಸರಿಯಾಗಿ ಆಗುತ್ತಿಲ್ಲ ಅದಕ್ಕಾಗಿ ಉನ್ನತ ಮಟ್ಟದಲ್ಲಿ ಸರ್ಕಾರ ಲಕ್ಷ್ಯ ಕೊಡಬೇಕು ನನ್ನ ಸೂಚನೆ ಏನೆಂದರೆ ಡಿವಿಜನಲ್ ಕಮಿಷನರ್‌ಗೆ ನಿರ್ದಿಷ್ಟ ಜವಾಬ್ದಾರಿ ಇದ್ದಂತಿಲ್ಲ, ಅದನ್ನು ವಹಿಸಬೇಕು. ಮತ್ತೆ ಡಿವಿಜಿನಲ್ ಕಮಿಷನರ್, ಡಿ.ಸಿ. ಮತ್ತು ಜಿಲ್ಲಾಪರಿಷತ್‌ಗಳ ಮುಖ್ಯ ಕಾರ್ಯದರ್ಶಿಗಳು ಒಂದು ತಿಂಗಳಲ್ಲಿ ಎರಡು ಸಲ ಇದನ್ನು ಮಾನಿಟರ್ ಮಾಡಬೇಕು. ಯಾವ್ಯಾವ ತಾಲ್ಲೂಕಿನಲ್ಲಿ ಯಾವ್ಯಾವ ಸಮಸ್ಯಾತ್ಮಕ ಹಳ್ಳಿಗಳಿವೆ ಎಂಬುದು ಎಲ್ಲರಿಗೂ ಗೊತ್ತು ಅದನ್ನು ಒಂದೇ ವಾರದಲ್ಲಿ ಪಟ್ಟಿ ಮಾಡಿ ಅಲ್ಲಿಗೆ ಟ್ರಾಕ್ಟರ್‌ಗಳಲ್ಲಿ ನೀರು ಸಾಗಿಸಬೇಕಾದ ಗಂಭೀರ ಪರಿಸ್ಥಿತಿ ಇದೆ. ಒಂದೇ ತಿಂಗಳಲ್ಲಿ ಈ ತೊಂದರೆಯನ್ನು ನಿವಾರಣೆ ಮಾಡಬೇಕು ಇದನ್ನು ಮಾಡಬೇಕಾದರೆ ವಿಭಾಗಾಧಿಕಾರಿಗಳು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯದರ್ಶಿಗಳು 15 ದಿವಸಕ್ಕೊಮ್ಮೆ ಮಾನಿಟರ್ ಮಾಡಬೇಕು.

ತಿಂಗಳಿಗೆ ಒಂದು ಸಲ ಚೀಫ್ ಸೆಕ್ರೆಟರಿ ಮತ್ತೆ ಡಿವಿಜನಲ್ ಕಮೀಷನರ್ ಮಾನಿಟರ್ ಮಾಡಿ ಕ್ಯಾಬಿನೆಟ್‌ಗೆ ವರದಿಯನ್ನು ಒಪ್ಪಿಸಬೇಕು. ಕ್ಯಾಬಿನೆಟ್ ಕೂಡಾ

[illegible] ಮಾನಿಟರ್ ಮಾಡಬೇಕಾಗುತ್ತದೆ. ವಿರೋಧ ಪಕ್ಷದ ನಾಯಕರು ಹೇಳಿದರು. ಇದರ ಪರ್‌ಪಾರ್‌ಮೆನ್ಸ್‌ನ್ನು ರೆವ್ಯೂ ಮಾಡಬೇಕೆಂದು. ಅದು ಹೊಸ ವಿಚಾರವಲ್ಲ. ನಾವೆಲ್ಲರೂ ಹೇಳುತ್ತಿದ್ದೇವೆ. ಅದು ಆರು ತಿಂಗಳಿಗೆ ಒಂದು ಸಲ ಫರ್‌ಫಾರ್ಮೆನ್ಸ್ ರೆವ್ಯೂ ಮಾಡಿ ಈ ಸದನಕ್ಕೆ ಡೆವಲಪ್‌ಮೆಂಟ್ ಪ್ರೋಗ್ರಾಮ್ಸ್ ಎಷ್ಟರಮಟ್ಟಿಗೆ ನಾವು ಕಾರ್ಯಗತ ಮಾಡಿದ್ದೇವೆ ಎಂಬುದನ್ನು ಸಾಧಿಸಿದಂಥ ವಿಚಾರವನ್ನು ಕೊಟ್ಟರೆ ಇದಕ್ಕೆ ಸಹಕಾರವಾಗುತ್ತದೆ. ಆ ವಿಚಾರ ಬಹಳ ಒಳ್ಳೆಯ ವಿಚಾರ ಇದೆ. ಇದು ಹೊಸ ವಿಚಾರವಲ್ಲ. ಮತ್ತು ಇದಕ್ಕೆ ನಮ್ಮ ಕರ್ನಾಟಕ ಸರ್ಕಾರ ಅದನ್ನು ಒಪ್ಪಿಕೊಳ್ಳುವುದಕ್ಕೆ ತೊಂದರೆಯಾಗಲಿಕ್ಕಿಲ್ಲ. ಮತ್ತೆ ಒಪ್ಪಿಕೊಂಡರೆ ಒಂದು ಹೊಸ ದಾಖಲೆಯನ್ನು ಪಾರ್ಲಿಮೆಂಟರಿ ಸಿಸ್ಟಮ್‌ನಲ್ಲಿ ನಾವು ಮಾಡಿದಂತಾಗುತ್ತದೆ. ಅದು ಪ್ರಗತಿಪರವಾದ ವಿಚಾರ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನಾನು ಸಂಕ್ಷಿಪ್ತವಾಗಿ ಹೇಳುವುದಾದರೆ ಬಜೆಟ್ 1991-92 ಬಗ್ಗೆ ಮಾತನಾಡುವುದಕ್ಕೆ ಮುಂಚೆ 1990-91ರಲ್ಲಿ ಏನಿತ್ತು ಎನ್ನುವುದನ್ನು ನಾವು ಸ್ವಲ್ಪ ನೋಡಬೇಕಾಗುತ್ತದೆ. ಸಂತೋಷದ ಮಾತೆಂದರೆ 1990-91ರ ಬಜೆಟ್ ಎಸ್ಟಿಮೇಟ್ ಮತ್ತೆ ಬಜೆಟ್ ರಿವೈಸ್ಡ್ ಎಸ್ಟಿಮೇಟ್‌ಗೂ ಹೋಲಿಸಿದರೆ ಕರ್ನಾಟಕದ ರೆವಿನ್ಯೂ ಆದಾಯ 269 ಕೋಟಿ ರೂಪಾಯಿ ಜಾಸ್ತಿಯಾಗಿದೆ. 3815 ಕೋಟಿ ರೂಪಾಯಿಯಿಂದ 4084 ಕೋಟಿ ರೂಪಾಯಿಯಾಗಿದೆ. ಇದು ಮೂಲಭೂತವಾದಂಥ ಮಾತು. The revenue has increased by Rs. 269 crores in the financial year 1990-91.

ಇದರ ಜೊತೆಗೆ ಎಕ್ಸ್‌ಪೆಂಡಿಚರ್ ಕೂಡಾ ಬಜೆಟ್ ಎಸ್ಟಿಮೇಟ್‌ಗಿಂತ ರಿವೈಸ್ಡ್ ಎಸ್ಟಿಮೇಟ್‌ನಲ್ಲಿ 102 ಕೋಟಿ ರೂಪಾಯಿ ಜಾಸ್ತಿಯಾಗಿದೆ. in the financial year 1990-91. 102 ಕೋಟಿ ರೂಪಾಯಿಗಳಲ್ಲಿ 88 ಕೋಟಿ ರೂಪಾಯಿ ನಮ್ಮ ರಾಜಶೇಖರಮೂರ್ತಿಯವರು ಅಡಿಷನಲ್ ಅಲಾಟ್‌ಮೆಂಟ್ ಅನೌನ್ಸ್‌ಮೆಂಟ್ ಮಾಡಿದ್ದರು. 250 ಕೋಟಿ ರೂಪಾಯಿಗೆ ಅದಕ್ಕೆ ಸಂಬಂಧಪಟ್ಟ ಐಟಂಸ್ ಇದರಲ್ಲಿ ಸೇರಿದೆ. 102 ಕೋಟಿ ರೂಪಾಯಿಗಳಲ್ಲಿ 78 ಕೋಟಿ ರೂಪಾಯಿ ಎಂದರೆ ರಸ್ತೆಗಳಿಗೋಸ್ಕರ 25 ಕೋಟಿ ರೂಪಾಯಿ, ಕೆ.ಇ.ಬಿ.ಗೆ 20 ಕೋಟಿ ರೂಪಾಯಿ, ಕೊಂಕಣ ರೈಲ್ವೆಗೆ 10 ಕೋಟಿ ರೂಪಾಯಿ, ಹೈದರಾಬಾದ್ ಕರ್ನಾಟಕಕ್ಕೆ ಹತ್ತು ಕೋಟಿ ರೂಪಾಯಿ. ಈಗಾಗಲೇ ನೀವು ಹೇಳಿದ ದುರ್ದೈವದ ಮಾತು. ಈ ಹತ್ತು ಕೋಟಿ ರೂಪಾಯಿಗಳಲ್ಲಿ ನಾವು ಅಡಿಷನಲ್ ಕೊಟ್ಟು ಒಟ್ಟು 50 ಕೋಟಿ ರೂಪಾಯಿಗಳನ್ನು ಹೈದರಾಬಾದ್ ಕರ್ನಾಟಕಕ್ಕೆ ನಾವು ಕೊಟ್ಟರೂ ಅದರಲ್ಲಿ 15 ಕೋಟಿ ರೂಪಾಯಿ ಮಾತ್ರ ಖರ್ಚಾಗಿದೆ. ಇದು ನಿಜ ಸ್ಥಿತಿ. ಕೇಂದ್ರದಿಂದ ನಮಗೆ ಅಡಿಷನಲ್ ಆಗಿ ಇದಕ್ಕೋಸ್ಕರ ಹಣ ಬರಬೇಕಾಗಿತ್ತು. ವೀರೇಂದ್ರ ಪಾಟೀಲರು, ರಾಮಕೃಷ್ಣಹೆಗಡೆಯವರು ಮಾತನಾಡಿದಾಗ ಯಾವ ಒಂದು ಅಭಿಪ್ರಾಯಕ್ಕೆ ಅವರು ಬಂದಿದ್ದರು. ಅಡಿಷನಲ್ ಗ್ರಾಂಟ್ ಪ್ಲಾನಿಂಗ್ ಕಮೀಷನ್‌ನಿಂದ ಕೇರಧ್ರದಿಂದ ಬರಬೇಕು ಎಂದು ಹೇಳಿ ಅದು ದುರ್ದೈವದಿಂದ ಹೈದರಾಬಾದ್ ಕರ್ನಾಟಕಕ್ಕೆ ಬರಲಿಲ್ಲ. ಆದರೂ ಕೂಡಾ ನಾವು ನಮ್ಮ ಬಜೆಟ್‌ನಲ್ಲಿ ಎಷ್ಟು ಇಟ್ಟಿದ್ದೆವು, ಈಗ 1,250 ಕೋಟಿ ರೂಪಾಯಿಯಲ್ಲಿ ಯಾವುದೂ ರಿಲೀಸ್ ಆಗಿಲ್ಲ ಎಂದರೆ ರೂರಲ್ ವಾಟರ್ ಸಪ್ಲೈಗೆ 25 ಕೋಟಿ ರೂಪಾಯಿ ಆಗಿಲ್ಲ, ಜನತಾ ಹೌಸಸ್‌ಗೆ 15 ಕೋಟಿ ರೂಪಾಯಿ ಆಗಿಲ್ಲ. House sites for poor ಅವರಿಗೆ 16 ಕೋಟಿ ರೂಪಾಯಿ ಆಗಿಲ್ಲ, ಮೈನರ್ ಇರಿಗೇಷನ್‌ಗೆ 15 ಕೋಟಿ ರೂಪಾಯಿ ಆಗಿಲ್ಲ, ಕಮ್ಯುನಿಟಿ latrines ಗೆ 5 ಕೋಟಿ ರೂಪಾಯಿ ಆಗಿಲ್ಲ. ಹರಿಜನ ಹಾಸ್ಟೆಲ್ಸ್‌ಗೆ 3 ಕೋಟಿ ರೂಪಾಯಿ ಆಗಿಲ್ಲ, ಹರಿಜನ ಹಾಸ್ಟಲ್‌ನಲ್ಲಿ ಸಿಬ್ಬಂದಿ ವರ್ಗಕ್ಕೆ ಪೇಸ್ಕೇಲ್ ಬಂದು ಕೋಟಿ ರೂಪಾಯಿ ಏನು ಇತ್ತು, ಅದು ಆಗಿಲ್ಲ. ಅಂದರೆ 750 ಕೋಟಿ ರೂಪಾಯಿಯಲ್ಲಿ ಸುಮಾರು 80 ಕೋಟಿ ರೂಪಾಯಿ ಆಗಿದೆ. 80 ಕೋಟಿ ರೂಪಾಯಿ

ಆಗಿಲ್ಲ ಎಂದರೆ ಇಷ್ಟಕ್ಕೆ ಹಣದ ಅಭಾವದ ಪ್ರಶ್ನೆ ಇರಲಿಲ್ಲ ಎಂದು ನಾನು ಆಗಲೇ ಹೇಳಿದೆ. 269 ಕೋಟಿ ರೂಪಾಯಿ ಕರ್ನಾಟಕದಲ್ಲಿ ಜಾಸ್ತಿ ಆಯಿತು ಹೋದ ವರ್ಷ ಎಂದು ಹೇಳಿದೆ. ಸಮಾಧಾನದ ಮಾತೆಂದರೆ ಸ್ವಲ್ಪ ಹೆಮ್ಮೆ ಪಡಬಹುದು. ಹೋದ ವರ್ಷ ಎಂದರೆ 1990-91ರಲ್ಲಿ ರೆವಿನ್ಯೂ ಡೆಫಿಸಿಟ್ ಇದ್ದದ್ದು 194 ಕೋಟಿ ರೂಪಾಯಿ ಎಂದು ಅಂದಾಜು ಮಾಡಿದ್ದರು. ಅದು ಇದ್ದರೂ ಸಹಾ ಅಡಿಷನಲ್ ರಿಸೋರ್‌ಸಸ್ಸ್ ಮೊಬಿಲೈಜೇಷನ್ 147 ಕೋಟಿ ರೂಪಾಯಿ ಮಾಡಿ ರೆವಿನ್ಯೂ ಇನ್‌ಕ್ರಿಸ್‌ಗೆ 269 ಕೋಟಿ ರೂಪಾಯಿಯನ್ನು ಸಾಧಿಸಿದೆ. ಅದಕ್ಕೋಸ್ಕರ ಇದು ಪ್ಲಸ್ ಪಾಯಿಂಟ್. ಈ ಹಣಕಾಸಿನ ದೃಷ್ಟಿಯಿಂದ 1990-91 has been a fairly successful year...............ಎಂದು ಹೇಳಬಹುದು.

ಇನ್ನು ಎಕ್ಸೈಜ್ ವಿಷಯದ ಬಗ್ಗೆ ಹೇಳಬೇಕಾದರೆ ಬಜೆಟ್ ಎಸ್ಟಿಮೇಟ್‌ಗಿಂತ ರಿವೈಸ್ ಎಸ್ಟಿಮೇಟ್ 43 ಕೋಟಿ ಜಾಸ್ತಿಯಾಗಿದೆ. ಬಜೆಟ್ ಎಸ್ಟಿಮೇಟ್ 424 ಕೋಟಿ ಇತ್ತು, ರಿವೈಸ್‌ಡ್ ಎಸ್ಟಿಮೇಟ್ 467 ಕೋಟಿ ಆಯಿತು. 43 ಕೋಟಿ ಎಕ್ಸೈಜ್ ರೆವಿನ್ಯೂ ಜಾಸ್ತಿಯಾಗಿದೆ.

ಶ್ರೀ ಸಿ. ಬೈರೇಗೌಡ : ಆಕ್ಚುಯಲ್ ಬಂದಿದ್ದು ಹೇಳಿ.

ಶ್ರೀ ಎಂ.ವೈ. ಘೋರ್ಪಡೆ : ಅಕ್ಚುಯಲ್ ಆಗಿ ಬಂದಿರುವುದನ್ನು ಹೇಳುತ್ತಿದ್ದೇನೆ. 43 ಕೋಟಿ ರೂಪಾಯಿ ಜಾಸ್ತಿ ಬಂದಿದೆ. ಇನ್ನು ಒಂದು 18 ಕೋಟಿ ಬಗ್ಗೆ ಸ್ಟೇ ಆರ್ಡರ್ ಬಂದಿದೆ ಅದು ರಿಯಲೈಜ್ ಆದರೆ ಬರುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಅವರು ಬಜೆಟ್ ಭಾಷಣದಲ್ಲಿ ಮಾಡಿಫೈ ಎಸ್ಟಿಮೇಟ್ ಎಂದು ಪ್ರಸ್ತಾಪ ಮಾಡಿದ್ದಾರೆ. ಮಾಡಿಫೈ ಎಸ್ಟಿಮೇಟ್ ಬಗ್ಗೆ ನಾನು ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಅವರು ಹಲವಾರು ಅಸೆಂಪ್‌ಷನ್ ಮೇಲೆ ಅಂಕಿಯನ್ನು ಕೊಟ್ಟಿರಬಹುದು. ಬಜೆಟ್ ಎಸ್ಟಿಮೇಟ್ ಮತ್ತು ರಿವೈಸ್ ಎಸ್ಟಿಮೇಟ್ ಇವೆರಡನ್ನು ಕಂಪೇರ್ ಮಾಡಲಿಕ್ಕೆ ಸಾಧ್ಯವಿದೆ.

ಶ್ರೀ ಸಿ. ಬೈರೇಗೌಡ : ಮಾಡಿಫೈಡ್ ಎಸ್ಟಿಮೇಟ್ ಯಾವ ಬಜೆಟ್ಟಿನ ಪ್ರೋಸಿಜರ್‌ನಲ್ಲಿದೆ?

ಶ್ರೀ ಎಂ.ವೈ. ಘೋರ್ಪಡೆ : ಅಧ್ಯಕ್ಷರೆ Modified Estimate is not part of the formal budget presentation or formulation.

ಫಾರ್ಮಲ್ ಬಜೆಟ್‌ನಲ್ಲಿ ಬಜೆಟ್ ಎಸ್ಟಿಮೇಟ್ ಇರುತ್ತದೆ. ರಿವೈಸ್‌ಡ್ ಎಸ್ಟಿಮೇಟ್ ಇರುತ್ತದೆ. ನಾನು ಬಾಷಣ ಮಾಡುವಾಗ ಅಷ್ಟಕ್ಕೆ ಮಾತ್ರ ಹೇಳಬೇಕಾಗುತ್ತದೆ. ಮಾಡಿಫೈ ಎಸ್ಟಿಮೇಟ್ 555 ಕೋಟಿ ಏನಿದೆ ಅದನ್ನು 1991-92ರಲ್ಲಿ ಎಕ್ಸೈಜ್‌ನಿಂದ ಅವರು ನಿರೀಕ್ಷೆ ಮಾಡಿದ್ದಾರೆ. ಅವರು ಭಾಷಣ ಮಾಡುವಾಗ ಯಾವ ಆಧಾರದಮೇಲೆ ಮಾಡಿದ್ದಾರೆಂಬುದನ್ನು ಹೇಳಬಹುದು. ಆದರೆ ನಾವು ಬಜೆಟ್ ಭಾಷಣದಿಂದ ಇಷ್ಟು ಮಾತ್ರ ಹೇಳಲಿಕ್ಕೆ ಸಾಧ್ಯವಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಬಂಡವಾಳ ಲೆಕ್ಕ (ಬಿ)ಯಲ್ಲಿ ಬಟವಾಡೆಯಲ್ಲಿ ಪುಟ 65ರಲ್ಲಿ ಬಂಡವಾಳ ವೆಚ್ಚ ನಿವ್ವಳ 431ಕೋಟಿ ಬಜೆಟ್ ಅಂದಾಜು ಪರಿಷ್ಕೃತ 682.75, 1991-92ಕ್ಕೆ 533 ಇದ್ದದ್ದು 150 ಕೋಟಿ ಕಡಿಮೆ ಆಗುತ್ತದೆಲ್ಲಾ.

ಶ್ರೀ ಎಂ.ವೈ. ಘೋರ್ಪಡೆ : ಬಜೆಟ್ ಎಸ್ಟಿಮೇಟ್ ಎಕ್ಸೈಜ್ ಎಸ್ಟಿಮೇಟ್ ಎಷ್ಟಿದೆ ಅಂದರೆ 426 ಕೋಟಿ ರಿವೈಸ್ಡ್ ಎಸ್ಟಿಮೇಟ್ 469 ಕೋಟಿ ಅದಕ್ಕೋಸ್ಕರ 43 ಕೋಟಿ ಜಾಸ್ತಿಯಾಗಿದೆ ಎಂಬ ಮಾತನ್ನು ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳು ಅವರ ಭಾಷಣದಿಂದ ಪ್ರಥಮವಾಗಿಯೇ ಹೇಳಿದ್ದಾರೆ. ಹೋದವರ್ಷ ಏನು ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆ ಆಯಿತು, ಅದರಿಂದ ಈ ವರ್ಷ ನಾವು ಒಂದು

[illegible] ಯೋಜನೆಯನ್ನು ಮಾಡಲು ಸಾಧ್ಯವಾಯಿತು. ಮತ್ತು ಆತ್ಮವಿಶ್ವಾಸ ಕೂಡಬೆಳೆಯಲು ಸಾಧ್ಯವಾಯಿತು ಎಂಬ ಮಾತನ್ನು ಅವರು ಹೇಳಿದ್ದಾರೆ. 1991-92 ಬಜೆಟ್ ಬಗ್ಗೆ ಹೇಳುವಾಗ ಈ ಬಜೆಟ್‌ನಲ್ಲಿ ರೆವಿನ್ಯೂ ಸರ್‌ಪ್ಲೆಸ್ 2.4 ಕೋಟಿ ಇದೆ. ನಮ್ಮ ದೇಶದಲ್ಲಿ ರಾಜ್ಯ ಸರ್ಕಾರಗಳ ಬಜೆಟ್ ನೋಡಿದಾಗ ಬಹಳಷ್ಟು ರಾಜ್ಯ ಸರ್ಕಾರಗಳಲ್ಲಿ ರೆವಿನ್ಯೂ ಸರ್‌ಪ್ಲೆಸ್ ಹೂಡುವುದೇ ಕಷ್ಟವಾಗಿದೆ. ಈಗ ಕರ್ನಾಟಕ ರಾಜ್ಯದಲ್ಲಿ ರೆವಿನ್ಯೂ ಸರ್‌ಪ್ಲೆಸ್ ಅನ್ನು ನೋಡುತ್ತಿದ್ದೇವೆ. ಇದು ಹಣಕಾಸಿನ ದೃಷ್ಟಿಯಿಂದ ಹಣಕಾಸಿನ ಭದ್ರವಾದಂತಹ ಒಂದು ಸೂಚನೆ. ಅಡಿಷನಲ್ ರಿಸೋರ್ಸಸ್‌ಗೆ ಮೊಬಿಲೈಸೇಷನ್ 10 ಕೋಟಿ ನೆಟ್ ಮಾತ್ರ ತೋರಿಸಿದ್ದಾರೆ. ಹೋದವರ್ಷ 147 ಕೋಟಿ ಇತ್ತು, ಈ ವರ್ಷ 10 ಕೋಟಿ ತೋರಿಸಿದ್ದಾರೆ. ಬಹುಶಃ ಮುಂದೆ ಇದಕ್ಕೂ ಹೆಚ್ಚಿನ ಪ್ರಯತ್ನ ಸರ್ಕಾರ ಮಾಡಲಿಕ್ಕೆ ಸಾಧ್ಯವಾಗಬಹುದು. ಇಷ್ಟು ಇದ್ದರೂ ಸಹ ಡಿಫಿಶಿಟ್ 53 ಕೋಟಿ ಮಾತ್ರ ಇದೇ. ಈ 53 ಕೋಟಿ ಡಿಪಿಸಿಟ್ ಅಂತಹ ದೊಡ್ಡ ಡಿಫಿಸಿಟ್ ಅಲ್ಲ. ರೆವಿನ್ಯೂ ಬಗ್ಗೆ ಇಷ್ಟು ಕಲೆಕ್ಟ್ ಮಾಡಿದರೆ ಮುಂದೆ ಇದರ ಬಗ್ಗೆ ಭಯಪಡುವ ಹಾಗಿಲ್ಲ. ಆದರೆ ಇನ್ನು ಎರಡು ವಿಷಯಗಳನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ನೆಟ್ ಕ್ಯಾಪಿಟಲ್ ಔಟ್‌ಲೇ ಕಡಿಮೆಯಾಗಿದೆ. ಈ ವರ್ಷದ್ದು ನೆಟ್ ಕ್ಯಾಪಿಟಲ್ ಔಟ್‌ಲೇ 1990-91ಕ್ಕೆ ಹೋಲಿಸಿದರೆ, 150 ಕೋಟಿ ರೂಪಾಯಿ ಕಡಿಮೆಯಾಗಿದೆ. ಅಂದರೆ ನೆಟ್ ಕ್ಯಾಪಿಟಲ್ ಔಟ್‌ಲೇ 1990-91ರಲ್ಲಿ 683 ಕೋಟಿ ರೂಪಾಯಿ ಇತ್ತು. ಈ ವರ್ಷ 533 ಕೋಟಿ ರೂಪಾಯಿ ಆಗಿದೆ. I will give a fair analysis. ಏಕೆಂದರೆ ನಾನು ಪ್ರಾರಂಭದಲ್ಲಿಯೇ ಹೇಳಿದೆ, The Budget is meant to be analysed and acted upon..

ಅದರಲ್ಲಿ ಏನಿದೆ ಇದು 150 ಕೋಟಿ ರೂಪಾಯಿ ಕಡಿಮೆಯಾಗಿದೆ. ರೆಕವರೀಸ್ ಆಫ್ ಲೋನ್ಸ್ ಅಂಡ್ ಅಡ್ವಾನ್ಸಸ್ ಇದು ಕೂಡ 130 ಕೋಟಿ ಜಾಸ್ತಿಯಾಗಿದೆ. ಮಾನ್ಯ ಡಿ.ಬಿ.ಚಂದ್ರೇಗೌಡರು ಅದು ಏತಕ್ಕೆ ಹೇಳಲಿಲ್ಲ ನನಗೆ ಗೊತ್ತಿಲ್ಲ, ರೆಕವರೀಸ್ ಆಫ್ ಲೋನ್ಸ್ ಅಂಡ್ ಅಡ್ವಾನ್ಸ್‌ಸ್ ಹೋದವರ್ಷ 387 ಕೋಟಿ ಇತ್ತು. ಈ ವರ್ಷ 130 ಕೋಟಿ ಮಾತ್ರ ಅಂದಾಜು ಮಾಡಿದ್ದಾರೆ. ಅಂದರೆ 130 ಕೋಟಿ ಅದು ಕಡಿಮೆಯಾಗಿದೆ. ಇದರ ಕಡೆ ಸರ್ಕಾರ ಸ್ವಲ್ಪ ಗಮನ ಕೊಡಬೇಕು, ಇದು ಕಡಿಮೆಯಾಗಲಿಕ್ಕೆ ಕಾರಣ ಏನು, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಬೇಕೆಂದು ಹೇಳುತ್ತೇನೆ. ಇನ್ನು ಇರಿಗೇಷನ್ ಅಂಡ್ ಪವರ್ ಇರಿಗೇಷನ್‌ಗೋಸ್ಕರ 309 ಕೋಟಿ ರೂಪಾಯಿ ಇಟ್ಟಿದ್ದಾರೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಪವರ್‌ಗೋಸ್ಕರ 317 ಕೋಟಿ ಇಟ್ಟಿದ್ದಾರೆ. ಇದು ಒಳ್ಳೆಯ ಪ್ರಯತ್ನ ಆದರೆ ಸಾಲದು, ಇದಕ್ಕೂ ಜಾಸ್ತಿ ಪ್ರಯತ್ನ ಕ್ರಮೇಣ ಮಾಡಬೇಕಾಗುತ್ತದೆ. ಅಷ್ಟೊಂದು ಶಕ್ತಿ ಕೂಡ ಕರ್ನಾಟಕಕ್ಕೆ ಬರಲಿ ಎಂದು ಹಾರೈಸುತ್ತೇನೆ. ಇದು ಏತಕ್ಕೆ ಸಾಲದು ಅಂದರೆ ಇವೊತ್ತು ಕೃಷ್ಣ ಬೇಸಿನ್ ಏನಿದೆ, ಅಲ್ಲಿ ನೀರಾವರಿ ಯೋಜನೆಗಳನ್ನು 10 ವರ್ಷಗಳಲ್ಲಿ ಪೂರೈಸಲಿಕ್ಕೆ 3 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ಅಂದರೆ ಅದಕ್ಕೆ ವರ್ಷಕ್ಕೆ 300 ಕೋಟಿ ರೂಪಾಯಿ ಬೇಕಾಗುತ್ತದೆ. ಕಾವೇರಿಗೋಸ್ಕರ 5 ವರ್ಷದಲ್ಲಿ ಪೂರೈಸಲಿಕ್ಕೆ ಒಂದು ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ಅಂದರೆ ವರ್ಷಕ್ಕೆ 200 ಕೋಟಿ ಬೇಕಾಗುತ್ತದೆ. ಎರಡು ಐಟಮ್‌ಗಳನ್ನು ತೆಗೆದುಕೊಂಡರೆ ಮೇಜರ್ ಇರಿಗೇಷನ್‌ಗೆ ವರ್ಷಕ್ಕೆ 500 ಕೋಟಿ ರೂಪಾಯಿ ಬೇಕಾಗುತ್ತದೆ. ನಾವು 390 ಕೋಟಿ ಇದನ್ನು ಮಾಡಿದ್ದೇವೆ. ಪವರ್‌ಗೆ ಬಹಳಷ್ಟು ಗ್ಯಾಪ್ ಇದೆ. ನಮ್ಮ ಲೆಕ್ಕದ ಪ್ರಕಾರ ಮುಂಬರುವ 5 ವರ್ಷಗಳಲ್ಲಿ 2500 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದರೆ, ವರ್ಷಕ್ಕೆ 500 ಕೋಟಿ ರೂಪಾಯಿ ಖರ್ಚು ಮಾಡಬೇಕು. ಸರಾಸರಿ ಹೇಳಬೇಕಾದರೆ, ವರ್ಷಕ್ಕೆ ಪವರ್‌ಗೋಸ್ಕರ 500 ಕೋಟಿ. ಮೇಜರ್

ಇರಿಗೇಷನ್‌ಗೋಸ್ಕರ ನಾವು 500 ಕೋಟಿ ಇಡಬೇಕಾಗುತ್ತದೆ. ನಾವು ಈಗ ಇಟ್ಟಿದ್ದು 700 ಕೋಟಿ ರೂಪಾಯಿ ಹೆಚ್ಚು ಕಡಿಮೆ ಅಂದರೆ ಆದಷ್ಟು ಬೇಗ ಇದು ಒಂದು 300 ಕೋಟಿ ಜಾಸ್ತಿ ಮಾಡುವ ಒಂದು ಪ್ರಯತ್ನ ಕರ್ನಾಟಕದಲ್ಲಿ ನಡೆಯಬೇಕಾಗುತ್ತದೆ. ಈಗ ಪೀಪಲ್ಸ್ ಹೌಸಿಂಗ್ ಪ್ರೋಗ್ರಾಮ್ ಇದರ ಬಗ್ಗೆ ನನಗೆ ಬಹಳಷ್ಟು ಆಸಕ್ತಿ ಇದೆ. ಏಕೆಂದರೆ 1972-73ರಲ್ಲಿ ನಾನು ಆ ಕಾಲಕ್ಕೆ ಹಣಕಾಸು ಮಂತ್ರಿಯಾಗಿದ್ದಾಗ ಈ ಕಾರ್ಯಕ್ರಮ ಪ್ರಾರಂಭವಾಯಿತು. 1972-73ರಲ್ಲಿ 25 ಸಾವಿರ ಮನೆಗಳನ್ನು ಕಟ್ಟಿ, 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಸರಾಸರಿ ಒಂದು ವರ್ಷಕ್ಕೆ 50 ಸಾವಿರದಿಂದ ಒಂದು ಲಕ್ಷ ಮನೆಗಳು ವರ್ಷೇ ವರ್ಷೇ ಕರ್ನಾಟಕದಲ್ಲಿ ಕಟ್ಟಬೇಕೆಂಬುದು ನಮ್ಮ ಕಾರ್ಯಕ್ರಮ ಇತ್ತು. ಇವೊತ್ತು ಏನಾಗಿದೆ ಅಂದರೆ, ಇಡೀ ಕರ್ನಾಟಕದಲ್ಲಿ 4 ಲಕ್ಷ 25 ಸಾವಿರ ಮನೆಗಳನ್ನು ಕಟ್ಟಿದ್ದೇವೆ. ಮತ್ತು ಒಂದು ಲಕ್ಷ 75 ಸಾವಿರ ಮನೆ ಇನ್‌ಕಂಪ್ಲೀಟ್ ಒಂದು ಲಕ್ಷ 75 ಸಾವಿರ ಮನೆಗಳು ಕಳೆದ ಮೂರು ವರ್ಷಕ್ಕೆ ಸಂಬಂಧಪಟ್ಟಿದ್ದು. ಇದನ್ನು ನಾವು ಪ್ರಿಯಾರಿಟಿ ಮೇಲೆ ಪೂರೈಸಬೇಕಾಗುತ್ತದೆ. ಇದನ್ನು ಪೂರೈಸಲಿಕ್ಕೆ ಬಹಳಷ್ಟು ದುಡ್ಡು ಬೇಕಾಗುತ್ತದೆ. ಒಂದೊಂದು ಮನೆ ಕಟ್ಟಲಿಕ್ಕೆ ೪ ಸಾವಿರ ರೂಪಾಯಿ ಪ್ರಕಾರ ಲೆಕ್ಕವನ್ನು ಹಾಕಿದರೂ ಒಂದು ಲಕ್ಷ 75 ಸಾವಿರ ಮನೆ ಪೂರೈಸಲಿಕ್ಕೆ 75 ಕೋಟಿ ರೂಪಾಯಿ ಬೇಕಾಗುತ್ತದೆ. ಇದರ ಕಡೆ ಯಾವ ಒಂದು ವ್ಯವಸ್ಥೆ ಬಡ್ಜೆಟ್‌ನಲ್ಲಿ ನಮಗೆ ಕಂಡುಬರುತ್ತಿಲ್ಲ. ಇದರ ಕಡೆ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರತ್ಯೇಕವಾದಂಥ ಪ್ರಯತ್ನ ಮತ್ತು ಇದರ ಬಗ್ಗೆ ಲಕ್ಷ್ಯ ಕೊಡಬೇಕಾಗುತ್ತದೆಂದು ಹೇಳುತ್ತೇನೆ. ಇಲ್ಲದೇ ಹೋದರೆ ಹೊಸ ಮನೆಗಳನ್ನು ಕಟ್ಟುವುದರಲ್ಲಿ ನಮಗೆ ತೊಂದರೆಯಾಗುತ್ತದೆ. ಈ ವರ್ಷದ ಬಜೆಟ್‌ನಲ್ಲಿ ಹೊಸ ಮನೆಗಳಿಗೆ 17 ಕೋಟಿ ರೂ. ಇದೆ. ಇದರಲ್ಲಿ ಮರುಪಾವತಿ ಇಂಟರೆಸ್ಟ್ ಎಲ್ಲಾ ತೆಗೆದರೆ ಸಬ್‌ಸಿಡಿಯನ್ನು ಕೊಡುವುದಕ್ಕೆ 7 ಕೋಟಿ ರೂ. ಮಾತ್ರ ಇದೆ. ಸಬ್ಸಿಡಿ ಎಂದರೆ ಒಂದೊಂದು ಮನೆಗೆ 2-2 ಸಾವಿರ ರೂ.ನಂತೆ ಏನು ಕೊಡುತ್ತೇವೆ ಅದಕ್ಕೆ 7 ಕೋಟಿ ರೂ. ಮಾತ್ರ ಇದೆ. 2 ಸಾವಿರಕ್ಕಿಂತ ಸಬ್ಸಿಡಿಯನ್ನು ಕೊಟ್ಟರೆ ಇನ್ನು 25-30 ಸಾವಿರ ಮನೆಗಳನ್ನು ನಾವು ಹೊಸದಾಗಿ ಕಟ್ಟಬಹುದು. ಆದರೆ ಹುಡ್ಕೋದಿಂದ ಬರತಕ್ಕ ಹಣ ಸಕಾಲಕ್ಕೆ ಬಂದರೆ ಮಾತ್ರ ಸಾಧ್ಯ. ಹುಡ್ಕೋದಿಂದ ಸಕಾಲಕ್ಕೆ ದುಡ್ಡು ಬರಬೇಕಾದರೆ ಸರ್ಕಾರದವರೇ ಈ 4 ಸಾವಿರ ರೂ.ಗಳನ್ನು ಕೊಟ್ಟು ಅನಂತರ ಹುಡ್ಕೋದಿಂದ ರೀಇಂಬರ್ಸ್ ಮಾಡಿ ಕೊಂಡರೆ ಮಾತ್ರ ಹೊಸ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯ. ಅಪೂರ್ಣ ಮನೆಗಳಿಗೆ ಬೇರೆ ವ್ಯವಸ್ಥೆ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಮ್ಯಾಸಿವ್ ರೂರಲ್ ಹೌಸಿಂಗ್ ಪ್ರೋಗ್ರಾಂನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಏಕೆಂದರೆ, ಹಳ್ಳಿಗಳಲ್ಲಿ ಬಡ ಜನರಿಗೆ ಮನೆಗಳು ಬೇಕೇಬೇಕು ಆದರೆ ಅಷ್ಟೇ ಗಮನಾರ್ಹ ರೀತಿಯಲ್ಲಿ ಬಜೆಟ್ ಅಲೋಕೇಷನ್ನು ಜಾಸ್ತಿ ಮಾಡದೇ ಹೋದರೆ ಈ ಮ್ಯಾಸಿವಿ ರೂರಲ್ ಹೌಸಿಂಗ್ ಪ್ರೋಗ್ರಾಂ ಈಗಿರತಕ್ಕ ಬಜೆಟ್‌ನಲ್ಲಿ ಸಾಧ್ಯವಾಗುವುದಿಲ್ಲ. ಆದುದರಿಂದ ಸರ್ಕಾರದವರು ಈಕಡೆ ನೇರವಾಗಿ ತಮ್ಮ ಗಮನವನ್ನು ಕೊಡಬೇಕು. ಅಡಿಷನಲ್ ಅಲಾಟ್‌ಮೆಂಟ್‌ನ್ನು ಹೌಸಿಂಗ್ ಪ್ರೋಗ್ರಾಂಗೆ ಗಮನಾರ್ಹ ರೀತಿಯಲ್ಲಿ ಹೆಚ್ಚಿಸುತ್ತಾರೆಂದು ನಾನು ನಂಬಿದ್ದೇನೆ. ಇದನ್ನು ಹೇಳುವುದಕ್ಕೆ ಇನ್ನೊಂದು ಕಾರಣ ಇದೆ. ಪೀಪಲ್ ಹೌಸಿಂಗ್ ಪ್ರೋಗ್ಯಾಂ ಸ್ಕೀಂಗೆ ಇನ್ನೊಂದು ಹೊಸ ಹೆಸರು ಬಂದಿದೆ. ಏನು ಹೊಸ ಹೆಸರು ಬಂದರೂ ಕೂಡ ಇದು ಹಳೆಯ ಕಾರ್ಯಕ್ರಮವೇ. ಇವತ್ತು 8 ಸಾವಿರ ರೂಗೆ ಮನೆಯನ್ನು ಕಟ್ಟತಕ್ಕದ್ದು ಬಹಳ ಕಷ್ಟ. ಏಕೆಂದರೆ, ಇಂದಿರಾ ಅವಾಜ್ ಯೋಜನೆಯಲ್ಲಿ ಇಂಥದೇ ಮನೆ ಅಥವಾ ಇನ್ನೂ ಚಿಕ್ಕ ಮನೆಯನ್ನು ಕಟ್ಟುವುದಕ್ಕೆ 14 ಸಾವಿರ ರೂ. ಬೇಕಾಗುತ್ತದೆ. ಇವತ್ತು 8 ಸಾವಿರದಲ್ಲಿ ಎಷ್ಟು ಮನೆಕಟ್ಟುವುದಕ್ಕೆ ಸಾಧ್ಯವಾಗುತ್ತದೆ? ಇದಕ್ಕೆ ಹೊಸಡಿಸೈನ್ಸ್ ಹೊಸ ಸ್ಟ್ರಾಟಿಜಿಯನ್ನು ತಯಾರಿಸಬೇಕಾಗುತ್ತದೆ. ಹೊಸ ಸ್ಟ್ರಾಟಜಿ ಎಂದರೆ ಮೂಲಭೂತವಾಗಿ firm pillars and firm roofs, pre-rabricated pillers and fire-proofs ಇದನ್ನು ನಾವು ಕೊಟ್ಟರೆ

ಅವರಿಗೆ ಬಹಳ ಸಹಾಯವನ್ನು ಮಾಡಿದಂತಾಗುತ್ತದೆ. ಇದು ಸುಮಾರು 8-10 ಸಾವಿರ ರೂ.ನಲ್ಲಿ ಆಗಬಹುದು. ಈ ದೃಷ್ಟಿಯಲ್ಲಿ ಮಾಡಿದರೆ a massive housing programme with pre-fabricated pillers and roofs ನಾವು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುತ್ತದೆಂಬ ವಿಶ್ವಾಸ ನನಗಿದೆ. ಹೊಸ ಕಾರ್ಯಕ್ರಮವನ್ನು ಮಾಡುವಾಗ ಹಳೇ ಕಾರ್ಯಕ್ರಮಗಳನ್ನು ನಾವು ಮರೆಯಬಾರದು. ಕಮ್ಯುನಿಟಿ ಲೆಟ್ರಿನ್ಸ್ ಬಗ್ಗೆ ಹಾನು ಹೇಳುತ್ತೇನೆ. ಕಳೆದ ಜುಲೈ ತಿಂಗಳಲ್ಲಿ 5 ಕೋಟಿ ರೂ.ಗಳನ್ನು ಪ್ರತ್ಯೇಕವಾಗಿ ಇದಕ್ಕೆ ಸೇರಿಸಿದೆ. ಉದ್ದೇಶ ಏನೆಂದರೆ ಒಂದೊಂದು ಪಂಚಾಯಿತಿಗೆ ಹೆಣ್ಣುಮಕ್ಕಳಿಗೋಸ್ಕರ ಒಂದೊಂದು ಲೆಟ್ರಿನ್ ಮಾಡಿ ಅದನ್ನು ಯಶಸ್ವಿಯಾಗಿ ನಡೆಸಬೇಕು, ಅಲ್ಲಿಗೆ ನೀರಿನ ವ್ಯವಸ್ಥೆ ಮಾಡಬೇಕು. ಈಗಾಗಲೇ ಸಂಡೂರಿನಲ್ಲಿ ಇಂಥಾದ್ದು ಎಷ್ಟೋ ಕಮ್ಯುನಿಟಿ ಲೆಟ್ರಿನ್ಸ್ ಮಾಡಿದ್ದು ಅವು ಚೆನ್ನಾಗಿ ನಡೆಯುತ್ತಿವೆ. ಹೆಣ್ಣುಮಕ್ಕಳಿಗೋಸ್ಕರ ಲೆಟ್ರಿನ್ಸ್ ಕಟ್ಟಿಸಿದರೆ ಅದು ಯಶಸ್ವಿ ಆಗುವುದಿಲ್ಲ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ನೀವು ಪ್ರಾರಂಭ ಮಾಡಬೇಕು. ಈ ಕಾರ್ಯಕ್ರಮವನ್ನು ಕೈ ಬಿಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಕೈ ಬಿಡಬಾರದು. ಅದರಲ್ಲೂ ಹೆಣ್ಣುಮಕ್ಕಳಿಗೆ ಕಮ್ಯೂನಿಟಿ ಲೆಟ್ರಿನ್‌ನ್ನು ಕಟ್ಟಿಸುವ ಬಗ್ಗೆ ವಿಶೇಷವಾದ ಪ್ರಯತ್ನವನ್ನು ಕೇವಲ ಅಧಿಕಾರಿಗಳು ಮಾತ್ರವಲ್ಲ ಎಲ್ಲ ಪಕ್ಷದವರೂ ಆಸಕ್ತಿವಹಿಸಿ ಯಶಸ್ವಿಯಾಗಿ ಮಾಡಿ ಈ ಕಾರ್ಯಕ್ರಮವನ್ನು ಬೆಳಸಬೇಕು.

ಇನ್ನು ಇದೇ ರೀತಿ, ವೃದ್ಧಾಪ್ಯವೇತನ ಕೊಡತಕ್ಕ ಯೋಜನೆ 1977ರಲ್ಲಿ ಜಾರಿಗೆ ಬಂತು. ಈ ಪೆನ್‌ಷನ್ನು 50 ರೂ ನಿಂದ 75 ರೂ ಗೆ ಏರಿಸಿರುವುದನ್ನು ನಾನು ಸ್ವಾಗತಮಾಡುತ್ತೇನೆ. ಇದರಿಂದಾಗಿ ಸರ್ಕಾರದವರಿಗೆ ಬಹಳಷ್ಟು ಆಶೀರ್ವಾದಗಳನ್ನು ಈ ಜನರು ಕೊಡುತ್ತಾರೆ. ಏಕೆಂದರೆ ಇವತ್ತು ಬೆಲೆಗಳೆಲ್ಲಾ ಜಾಸ್ತಿಯಾಗುತ್ತಿವೆ. ಈ ಅಂಶವನ್ನು ಸರ್ಕಾರದವರು ಗಮನಿಸಿ ಪೆನ್‌ಷನನ್ನು 50 ರಿಂದ 75 ರೂಪಾಯಿಗೆ ಹೆಚ್ಚಿಸಿ ಬಹಳ ಉತ್ತಮ ಹೆಜ್ಜೆಯನ್ನಿಟ್ಟಿದ್ದಾರೆಂದು ಹೇಳಬಯಸುತ್ತೇನೆ.

ಇನ್ನು ಮಿಡ್ ಡೇ ಮೀಲ್ಸ್ ವಿಚಾರವೂ ಅಷ್ಟೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ 1ನೇ ಕ್ಲಾಸ್‌ನಿಂದ 7 ನೇ ಕ್ಲಾಸ್‌ವರೆಗೆ ಓದತಕ್ಕ ವಿದ್ಯಾರ್ಥಿಗಳಿಗೆ ಮಿಡ್ ಡೇ ಮೀಲ್ಸ್‌ಗೋಸ್ಕರ 20 ಕೋಟಿ ರೂಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಇದನ್ನು ನಾನು ಸ್ವಾಗತಮಾಡುತ್ತೇನೆ. ಈ ರೀತಿ ಸ್ವಾಗತಿಸುವಾಗ ನಾನು ಒಂದು ವಿಚಾರವನ್ನು ಅವರಿಗೆ ನೆನಪುಮಾಡಿಕೊಡಬೇಕಾಗುತ್ತದೆ. 1977-78ರಲ್ಲಿ ಕರ್ನಾಟಕ ರಾಜ್ಯದಲ್ಲಿ 19 ಲಕ್ಷ ವಿದ್ಯಾರ್ಥಿಗಳಿಗೆ ಮಿಡ್ ಡೇ ಮೀಲ್ಸ್ ಸಿಕ್ಕುತ್ತಿತ್ತು. ಈ ಯೋಜನೆಯನ್ನು ಯಾವ ರೀತಿ ಬೆಳೆಸಬೇಕೆಂಬ ವಿಚಾರವನ್ನು 1977ರ ಮಾರ್ಚಿಯಲ್ಲಿ ನಾನು ಮಾಡಿರತಕ್ಕ ಬಜೆಟ್ ಭಾಷಣದಲ್ಲಿ ಸುದೀರ್ಘವಾಗಿ ಪ್ರಸ್ತಾಪಮಾಡಿದ್ದೇನೆ. ದಯವಿಟ್ಟು ತಾವು ಅದನ್ನು ನೋಡಬಹುದು. ಏಕೆಂದರೆ ಸರ್ಕಾರದ ಪರವಾಗಿ ಕರ್ನಾಟಕದ ಪರವಾಗಿ ನಾನು ಹೇಳಿರತಕ್ಕ ಮಾತು. ಅದರಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. 1983-84ರವರೆಗೆ ಈ ಕರ್ನಾಟಕ ರಾಜ್ಯದಲ್ಲಿ ಮಿಡ್ ಡೇ ಮೀಲ್ಸ್‌ನ್ನು ಪಡೆಯತಕ್ಕ ವಿದ್ಯಾರ್ಥಿಗಳ ಸಂಖ್ಯೆ 50 ಲಕ್ಷಕ್ಕೆ ಏರಿಸುವುದಕ್ಕೆ ಸಾಧ್ಯ, ಏರಿಸಲೇಬೇಕು, ಮತ್ತು ಪ್ರೀ ಸ್ಕೂಲ್ ಹುಡುಗರು ಏನಿದ್ದಾರೆ ಅದು 27 ಲಕ್ಷ ಆಗುತ್ತದೆ.

5.45 ಪಿ.ಎಂ.

50 lakhs beneficiaries school going children and 23 lakhs pre-school going. This will work out the economics and the finances. We wanted to manufacture nutritious food in Karnataka in four or five factories. ಹೀಗಾಗಿ ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಂದರೆ 1980-85 ರಲ್ಲಿ ಬಿಲೋ ಪಾವರ್ಟಿ ಲೈನ್‌ನಲ್ಲಿರುವವರಿಗೆ ಮಿಡ್ ಡೇ ಮೀಲ್ಸ್ ಕೊಡುವಂಥ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯದಲ್ಲಿ ಯಾವರೀತಿ ಮಾಡಲಿಕ್ಕೆ ಸಾಧ್ಯ ಎನ್ನುವ ಬಗ್ಗೆ ಸ್ಪಷ್ಟವಾದ ಚಿತ್ರವನ್ನು

ಆವಾಗ ನಾವು ಕೊಟ್ಟಿದ್ದೆವು. ಈಗ ದುರ್ದೈವದ ಮಾತು ಏನೆಂದರೆ ನಾವು ಅಲ್ಲಿಗೆ ಬಿಟ್ಟು ಬಿಟ್ಟು ಮರೆತು ಬಿಟ್ಟೆವು. ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಕಾರ್ಯಕ್ರಮ ಪೂರ್ತಿಯಾಗಿ ಬೇಕಾಗಿತ್ತೋ, 75 ಲಕ್ಷ ಹುಡುಗರಿಗೆ ಮಿಡ್ ಡೇ ಮೀಲ್ಸ್ ಸಿಕ್ಕಬೇಕಾಗಿತ್ತೋ, 1977ರಲ್ಲಿ 19 ಲಕ್ಷ ಹುಡುಗರಿಗೆ ಸಿಕ್ಕಬೇಕಾಗಿತ್ತೋ ಅದನ್ನು ಕೈಬಿಟ್ಟುಬಿಟ್ಟೆವು. ಇವತ್ತು ಎಂಟನೇ ಪಂಚವಾರ್ಷಿಕ ಯೋಜನೆಯ ಪ್ರಾರಂಭ ಕಾಲಕ್ಕೆ ಪುನಃ ಅದನ್ನು ನೆನಪು ಮಾಡಿಕೊಂಡಿದ್ದೇವೆ. Again, beginning with the 8th Five Year Plan, I Don't mena it as... ನಾನು ಟೀಕೆ ಮಾಡುವುದಕ್ಕೋಸ್ಕರವಾಗಿ ಟೀಕೆ ಮಾಡುತ್ತಿಲ್ಲ. ರಚನಾತ್ಮಕವಾದ ಟೀಕೆ ಎಂದು ಹೇಳುತ್ತೇನೆ. this is the flaw in the planning process in the country. We begin something and we forget about it and then wake up after 10-15 years. ಆದರೂ ಕೂಡ ಸನ್ಮಾನ್ಯ ಹಣಕಾಸಿನ ಮಂತ್ರಿಗಳು ಇದನ್ನು ಜ್ಞಾಪಿಸಿಕೊಂಡು ಮತ್ತೆ ಪುನಃ ಅದಕ್ಕೆ ಒಂದು ಶಕ್ತಿಯನ್ನು ಕೊಟ್ಟಿದ್ದಕ್ಕೆ ನಾನು ಸಂತೋಷಪಡುತ್ತೇನೆ. ಈ ಸಲ ಅದನ್ನು ಜಾರಿಗೆ ತಂದು 5 ವರ್ಷದಲ್ಲಿ ಆ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಬೆಳಸಿ ಬಿಲೋಪಾವರ್ಟಿಲೈನ್ ಕೆಳಗಡೆ ಇರತಕ್ಕಂಥ ಮಕ್ಕಳಿಗೆ ಅದು ಸಂಪೂರ್ಣವಾಗಿ ಮಿಡ್ ಡೆ ಮೀಲ್ಸ್ ಕೊಡುವಂಥ ವ್ಯವಸ್ಥೆ ಕರ್ನಾಟಕದಲ್ಲಿ ಜಾರಿಗೆ ತರಲು ಹಣಕಾಸಿನ ಶಕ್ತಿ ಇದೆ ಎಂದು ನಾನು ಹೇಳುತ್ತೇನೆ.

ಇನ್ನು ಹೆಲ್ತ್ ಚೆಕಪ್ ಬಗ್ಗೆ ಹೇಳಿರುವುದು ಅದು ಒಂದು ಒಳ್ಳೆಯ ವಿಚಾರ. ಒಂದು ಕೋಟಿಯಾದರೂ ಕೂಡ ಅದು ಪ್ರಶ್ನೆಯಲ್ಲ. ಹೆಲ್ತಚೆಕ್ ಎಲ್ಲರಿಗೂ ಮಾಡುವಂಥ ಬಹಳ ಮುಖ್ಯ. ಅದರ ಬಗ್ಗೆ ಮೊಬೈಲ್ ಯೂನಿಟ್ಸ್ ಮಾಡಿ ಎನ್‌ಕರೇಜ್ ಮಾಡಬೇಕು. ತಾಲ್ಲೂಕು ಮಟ್ಟದಲ್ಲಿ ಮೊಬೈಲ್ ಯೂನಿಟ್ಸ್‌ನ್ನು ಮಾಡಬೇಕು. ಹಳ್ಳಿಗಳಿಗೂ ನಾನು ಅವುಗಳನ್ನು ಕಳುಹಿಸಬೇಕು. ನಮ್ಮ ದೇಶದ ಪರಿಸ್ಥಿತಿ ಹೇಗಿದೆ ಎಂದರೆ ಸೌಕರ್ಯ ಇರುವ ಕಡೆ ಬಡವರು ಬರುವುದಕ್ಕಾವುದಿಲ್ಲ. ಅವರಿಗೆ ತ್ರಾಣ ಇಲ್ಲ. ಬಡವರು ಇರುವ ಕಡೆ ಸೌಕರ್ಯವನ್ನು ನಾವು ತೆಗೆದುಕೊಂಡು ಹೋಗಬೇಕು. ಈ ದೃಷ್ಟಿಯಿಂದ ಮೊಬೈಲ್ ಯೂನಿಟ್ಸ್‌ನ್ನು ಮಾಡುವುದಾದರೆ ಹೆಲ್ತ್ ಚೆಕಪ್ ಎನ್ನುವ ಮಾತನ್ನು ಹೇಳುವುದರಲ್ಲಿ ಅರ್ಥವಿರುತ್ತದೆ. ಹಳ್ಳಿಯ ಮಟ್ಟದಲ್ಲಿ ವಿಚಾರ ಏನಿದೆ ಅದರಿಂದ ಬಡವರಿಗೆ ಮುಟ್ಟಿಸಲಿಕ್ಕೆ ಸಾಧ್ಯವಾಗುತ್ತದೆ.

ಇನ್ನು ರೂರಲ್ ವಿಶ್ವಕಾರ್ಯಕ್ರಮ ರೂರಲ್ ಕಾಟೇಜ್ ಇಂಡಸ್ಟ್ರೀಸ್ ಎಂದು. ಇದು ಹೊಸ ಹೆಸರು ಇದ್ದರೂ ಕೂಡ ಇದು ಹೊಸ ವಿಚಾರವಲ್ಲ. ತಾವು ಹೊಸ ಹೆಸರನ್ನು ನೀಡಿರುವುದರಲ್ಲಿ ತಪ್ಪೇನು ಇಲ್ಲ. ಹೊಸ ಹೆಸರು ಇಟ್ಟಿರುವುದರಿಂದ ಹೊಸ ಚೇತನ ಈ ಕಾರ್ಯಕ್ರಮಕ್ಕೆ ಬರಲಿ ಎಂಬುದೇ ನಮ್ಮ ಉದ್ದೇಶ. ಈ ವಿಶ್ವ ಕಾರ್ಯಕ್ರಮ ಏನಿದೆ rural and cottage industries for continuous employment, marketing and training ಇದನ್ನು ಮುಂದುವರಿಸಬೇಕು. ಇದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಅಷ್ಟರಮಟ್ಟಿಗೆ ಸ್ಪಿರಿಟ್‌ನಲ್ಲಿ ಹಳ್ಳಿಯ ಮಟ್ಟದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. It is a question of developing the organisational infrastructure.

ಇನ್ನು ಎಂಪ್ಲಾಯ್‌ಮೆಂಟ್ ಜನರೇಷನ್ ಬಗ್ಗೆ ಹೇಳುವುದಾದರೆ ಅವರ ಬಗ್ಗೆಯೂ ಕೂಡ ಒಂದು ಮುಖ್ಯವಾದ ಮಾತನ್ನು ಹೇಳಿದ್ದಾರೆ. ತಾವು ಹೇಳಿದ್ದೀರಿ ಡೆವಲಪ್‌ಮೆಂಟ್ ಪ್ರೋಗ್ರಾಮ್ ಗೋಸ್ಕರ 239 ಕೋಟಿ ನಾವು ಇಟ್ಟಿದ್ದೇವೆಂದು. ಇದರಿಂದ 15 ಕೋಟಿ ಮ್ಯಾನ್‌ಡೇಸ್ ಕೆಲಸ ಕೊಡಲಿಕ್ಕೆ ಸಾಧ್ಯವಾಗುತ್ತದೆ. ನಾನು ಲೆಕ್ಕ ಹಾಕಿದೆ. 15 ಕೋಟಿ ಮ್ಯಾನ್‌ಡೇಸ್ ಎಂದರೆ 5 ಲಕ್ಷ ಜನರಿಗೆ 300 ದಿವಸ ಅವರಿಗೆ ಕೆಲಸ ಕೊಡಲಿಕ್ಕೆ ಸಾಧ್ಯವಾಗುತ್ತದೆ. It is a programme for employing five lakh people.

ಎಂದು ಇಟ್ಟುಕೊಳ್ಳೋಣ. ನನ್ನ ಸೂಚನೆ ಏನೆಂದರೆ ಮ್ಯಾನ್‌ಡೇಸ್ ಇದನ್ನು ಬಿಟ್ಟು ಬಿಟ್ಟು how many people are you able to emply per district ಎಂದು ಅದನ್ನು ನಾವು ಹೇಳಬಹುದು.

ಏಕೆಂದರೆ 1972-73ರಲ್ಲಿ ಬರಗಾಲ ಪರಿಸ್ಥಿತಿ ಇದ್ದಾಗ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಜನರಿಗೆ ಯಾವ್ಯಾವ ಕೆಲಸ ಕೊಡಿಸಿದ್ದೇವೆಂದರೆ, ಎಷ್ಟೋ ಜನರಿಗೆ ಸಾಯಿಲ್ ಕನ್‌ಸರ್ವೇಷನ್, ಎಷ್ಟೋ ಜನರಿಗೆ ರೋಡ್ ಕೆಲಸವೆಂದು ಸುಮಾರು 10 ಲಕ್ಷ ಜನರಿಗೆ ಆ ಕಾಲಕ್ಕೆ ನಾವು ಕೆಲಸ ಕೋಡಿಸಿದ್ದೇವೆ. ಮ್ಯಾನ್‌ಡೇಸ್ ಏನಿದೆ ಇದು ಎಲ್ಲಿಂದ ಬಂದಿದೆ ಎಂದು ಗೊತ್ತಿದೆ. ಇದು ಪ್ಲಾನಿಂಗ್ ಕಮಿಷನ್ ನಿಂದ ಬಂದಿದೆ. ಪ್ಲಾನಿಂಗ್ ಕಮಿಷನ್‌ನವರಿಗೆ ಕೂಡ ಹೇಳಿದೆ. ಇದರಿಂದ ಕನ್‌ಫ್ಯೂಷನ್ ಆಗುತ್ತದೆ ಎಂದು. ನಿಮಗೆ ಎಷ್ಟು ಜನರಿಗೆ ಕೆಲಸ ಕೊಡಲಿಕ್ಕೆ ಸಾಧ್ಯವಾಗಿದೆ ಎಂಬ ಒಂದು ಪಟ್ಟಿ ಮಾಡಿ ಕೊಡಿ. ಈ ಕಾರ್ಯಕ್ರಮದಂತೆ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಕೆಲಸಕ್ಕೆ ಎಷ್ಟು ಜನ ಹೋಗುತ್ತಿದ್ದಾರೆಂಬುದನ್ನು ಸರ್ಕಾರದವರು ತಿಳಿಸಬೇಕು. ನಾವು ಅದನ್ನು ಮಾನಿಟರ್ ಮಾಡಿ ಎವಾಲ್ಯುಯೇಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಎವಾಲ್ಯುಯೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಂಪ್ಲಾಯ್‌ಮೆಂಟ್ ಬಗ್ಗೆ ಬಜೆಟ್‌ನಲ್ಲಿ ಹೇಳಿದ್ದಾರೆ. ಜನರಿಗೆ ಕೆಲಸ ಕೊಡಬೇಕಾದರೆ ಸರ್ಕಾರದ ಎಲ್ಲಾ ಶಕ್ತಿಯನ್ನು ಉಪಯೋಗಿಸಿ ಒಂದು ತಾಲ್ಲೂಕಿನಲ್ಲಿ ಅಥವಾ ಒಂದು ಪಂಚಾಯಿತಿಯಲ್ಲಿ ಪ್ರಯೋಗಿಕವಾಗಿ ಮಾಡಿ ತೋರಿಸಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಮೈಕ್ರೋಲೆವಲ್ ಅನಾಲಿಸಿಸ್ ಇಲ್ಲ. ಹಳ್ಳಿಯಲ್ಲಿ, ಪಂಚಾಯಿತಿಯಲ್ಲಿ ಎಷ್ಟು ಜನರಿಗೆ ಕೆಲಸ ಇಲ್ಲವೆಂದು ಮಾಹಿತಿ ಇಲ್ಲ. ಸರ್ಕಾರ ಹೌಸ್-to-house ಸರ್ವೆ ಮಾಡಿಸಿ ನಿರುದ್ಯೋಗಿಗಳು ಎಷ್ಟು ಮಂದಿ ಇದ್ದರೆ ನಿರುದ್ಯೋಗ ಸಮಸ್ಯೆಯನ್ನು unemployment -to-employment situation, ಎಷ್ಟರಮಟ್ಟಿಗೆ • ಸುಧಾರಿಸಲಿಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. House-to-house surrvey in employment budget in at least some limitted areas in Karnataka to start with, should be done. I has suggested one or two panchayat areas in each taluk, gain experience and spread it to the whole state. I have discussed this matter with the Planning Commission. They are also favourable to such an idea. ಇಂಟಿಗ್ರೇಟೆಡ್ ಅಪ್ರೋಚ್ ಎಂದರೆ ರಾ ಮೆಟೀರಿಯಲ್ಸ್ ಮಾರ್ಕೆಟಿಂಗ್ ಡಿಸೈನ್ಸ್ ಎಲ್ಲ ಕೊಡಬೇಕು. ಅದು ಕೊಟ್ಟರೆ ಹ್ಯಾಂಡ್‌ಲೂಂ ಹ್ಯಾಂಡಿಕ್ರಾಪ್ಟ್‌ಅನ್ನು ಬೇಕಾದಷ್ಟು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಿದೆ. ಅದಕ್ಕೆ ಮಾರ್ಕೆಟ್ ಇಲ್ಲವೆಂದು ಅಲ್ಲ. ರಾಮೆಟೀರಿಯಲ್ಸ್, ಡಿಸೈನ್ಸ್ ಕೊಟ್ಟರೆ ಮಾರ್ಕೆಟಿಂಗ್ ಮಾಡುವ ವ್ಯವಸ್ಥೆ ಇಲ್ಲ. ಹೊರ ದೇಶದಲ್ಲಿ ನಮ್ಮ ದೇಶದಲ್ಲಿ ಬೇಕಾದಷ್ಟು ಬೇಡಿಕೆ ಇದೆ. ಇದರ ಬಗ್ಗೆ ನನ್ನ ವಿಚಾರವೇನೆಂದರೆ, If you are serious about rural employment , then we must provide integrated infrastructure on all these facilities like raw-materials, marketing, design at the village level, only to the extent we do that, we can increase employment.

ಇದನ್ನು ನಾವು ಮಾನಿಟರ್ ಮಾಡಬೇಕಾದರೆ, let us get the figures as to how many people are employment on what work, in which district and then watch it carefullty. ಕೊನೆಯದಾಗಿ ಒತ್ತಿಹೇಳಬೇಕಾದ ಮಾತುಗಳು 2-3 ಇವೆ. ಇರಿಗೇಷನ್ ಮತ್ತು ಪವರ್ ಏನಿದೆ ಅದಕ್ಕೆ 700 ರಿಂದ 1000 ಕೋಟಿಯವರೆಗೆ ವರ್ಷಕ್ಕೆ ಖರ್ಚಾಗಬೇಕು. ಆದಷ್ಟು ಬೇಗ ಆ ಮಟ್ಟವನ್ನು ಮುಟ್ಟಬೇಕು. ಔಟ್‌ಲೇ ಮತ್ತು ಅದರ ಡೆವಲೆಪ್‌ಮೆಂಟ್ ಅಂಡ್ ವೆಲ್‌ಫೇಲ್ ಆಕ್ಟಿವಿಟೀಸ್ ಏನಿದೆ ಅದಕ್ಕೆ 100-200 ಕೋಟಿ ಏನಿದೆ ಅದನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಿದೆ. ಇವತ್ತು

ನಮ್ಮ ಡಿಫಿಸಿಟ್ ಏನಿದೆ ಅದನ್ನು ಹತೋಟಿಯಲ್ಲಿಟ್ಟುಕೊಂಡು 100-200 ಕೋಟಿಯನ್ನು ಡೆವಲೆಪ್‌ಮೆಂಟ್ ಆಫ್ ವೆಲ್‌ಫೇಲ್ ಆಕ್ಟಿವಿಟೀಸ್‌ಗೋಸ್ಕರ ಹೆಚ್ಚಿಸಲಿಕ್ಕೆ ಸಾಧ್ಯವಿದೆ. ಇರಿಗೇಷನ್ ಮತ್ತು ಪವರ್‌ಗೆ 300 ಕೋಟಿ ರೂಪಾಯಿ ಜಾಸ್ತಿ ಕೊಡಬೇಕು. ಇದನ್ನು ಮಾಡಬೇಕಾದರೆ ಅಡಿಷನಲ್ ರಿಸೋರ್ಸಸ್ ಮೊಬಿಲೈಸೇಷನ್‌ನನ್ನು ಇವತ್ತಲ್ಲ ನಾಳೆ ಮಾಡಬೇಕಾಗುತ್ತದೆ. ಟ್ಯಾಕ್ಸ್ ಕಲೆಕ್ಷನ್ ಮಾಡಬೇಕಾಗುತ್ತದೆ. Wasteful ಎಕ್ಸ್‌ಪೆಂಡಿಚರ್‌ನ್ನು ಕಡಿಮೆ ಮಾಡಬೇಕಾಗುತ್ತದೆ. ರೀ-ಷೆಡ್ಯೂಲಿಂಗ್ of ರೀಪೇಮೆಂಟ್ ಮಾಡಬೇಕಾಗುತ್ತದೆ. ಎಷ್ಟು ಸಾಲ ತೆಗೆದುಕೊಳ್ಳುತ್ತೇವೆ. ಅಷ್ಟೇ ಸಾಲವನ್ನು ಮರುಪಾವತಿ ಮಾಡಬೇಕಾಗುತ್ತದೆ. This repayment is now exceeding your loans. Therefore, a time has come when the State Government and all State Governments will have to express in very clear terms in the National Development Council that the whole system of financing which has been practised all these years, has resulted in an impossible situations, where those loans which were applied to essential activities won't give a financial return and therefore rescheduling of loans must be done on a national scale at the N.D.C.in my own view, the financial relations of the Centre-States will have to be reviewed in such a way that two things are achieved. The core sector is protected and what is considered as reasonable tempo of development is maintained in all States. After all we don't want money to waste. All elastic resources are with the Centre, and therefore, States have every right to ask them to spell out Centre-State relations. Core sectors like Krishna and Cauvery projects, appear to be outside our financial strength. It is not completed in time. A reasonable tempo of development has to be maintained. In my opinion, Sir, we should increase irrigation and power by Rs.1,000/- crores as soon as possible and even in this year about Rs.100 crores and Rs. 200 crores on other essential development, welfare activities. I think, Chief Minister can do it without endangering the budget deficit. ಇದ್ದುದರಲ್ಲಿ ಈ ಚೌಕಟ್ಟಿನಲ್ಲಿ 100-200 ಕೋಟಿ ಮಾಡಿ ಅದನ್ನು ಯಶಸ್ವಿಯಾಗಿ ಕಾರ್ಯಗತ ಮಾಡುವುದಾದರೆ, Chief Minister must himself take interest in it and as I suggested there should be a monthly review at the Cabinet level so that these programmes actually reach the poor. Thank you.

ಅಧ್ಯಕ್ಷರು: ಶ್ರೀ ದಯಾನಂದರಾವ್......

ಶ್ರೀ ದಯಾನಂದರಾವ್: ಅಧ್ಯಕ್ಷರೇ, ನಾನು ನಾಳೆ ಮಾತನಾಡುತ್ತೇನೆ.

Mr. Speaker: I want know the sense of the house. Now, according to the decision of the B.A.C. ನಾಳೆ ಮುಖ್ಯಮಂತ್ರಿಗಳಿಂದ ಚರ್ಚೆಗೆ ಉತ್ತರ ಆಗಬೇಕಾಗಿದೆ. ಆದರೆ ಭಾಷಣ ಮಾಡತಕ್ಕ ಮಾನ್ಯ ಸದಸ್ಯರ ಹೆಸರುಗಳು ಬಹಳ ಇವೆ. ಜೊತೆಗೆ ವಿರೋಧಪಕ್ಷದ ಮುಖಂಡರುಗಳು ಇನ್ನೂ ಭಾಷಣ ಮಾಡಲಿಕ್ಕೆ ಆಗಿಲ್ಲ. ವಿರೋಧಪಕ್ಷದ ನಾಯಕರೊಬ್ಬರು ಮಾತ್ರ ಮಾತನಾಡಿದ್ದಾರೆ. ಆದ್ದರಿಂದ ಇವತ್ತು ರಾತ್ರಿ ಎಷ್ಟು ಹೊತ್ತಾದರೂ ಕೂತು ನಿಮ್ಮ ಭಾಷಣಗಳನ್ನು ಈ ಸಭೆ ಲಾಲಿಸತಕ್ಕ ಅವಕಾಶವನ್ನು ಉಪಯೋಗಿಸಿಕೊಳ್ಳೋಣವೇ ?

ಶ್ರೀ ವಾಟಾಳ್ ನಾಗರಾಜ್: ರಾತ್ರಿಯೆಲ್ಲಾ ಜಾಗರಣೆ ಮಾಡಬೇಕಾ

ಅಧ್ಯಕ್ಷರು: ಎಷ್ಟು ಹೊತ್ತಾದರೂ ಕೂತು ಅಂತ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್: ಜಾಗರಣೆ ಆಗಿಹೋಯ್ತು ತಾವು ಹೇಳುವುದು.

ಅಧ್ಯಕ್ಷರು: ಏನು ಮಾಡಬೇಕು ನೀವೇ ಹೇಳಿ.

ಶ್ರೀ ವಾಟಾಳ್ ನಾಗರಾಜ್: ಬೆಳಗಿನಿಂದ ಕೂತಿದ್ದೀರಿ. ನಿಮ್ಮನ್ನು ನೋಡಿದರೆ ನನಗೆ ಕನಿಕರ ಬರುತ್ತದೆ.

ಅಧ್ಯಕ್ಷರು: ಇಲ್ಲ, ನಿಮ್ಮನ್ನು ಕೂರಿಸಿ ನಾನು ಹೋಗಬಲ್ಲೆ. ಅದೇನೂ ಪರವಾಗಿಲ್ಲ. ಅದನ್ನು ಅಡ್ಜೆಸ್ಟ್ ಮಾಡಿಕೊಳ್ಳಬಹುದು. ನನ್ನ ಬಗ್ಗೆ ಕಳಕಳಿ ಬಗ್ಗೆ ಬೇಡ. ಚರ್ಚೆ ಇದೆಯಲ್ಲ ಇದು ಪ್ರಾಮುಖ್ಯವಾದ ಚರ್ಚೆ. ಆದ್ದರಿಂದ ಮಾನ್ಯ ಸಿಂಧ್ಯಾ ಅವರು ವಿರೋಧಪಕ್ಷದ ಉಪನಾಯಕರು ಹೇಳಬೇಕು ಏನು ಮಾಡಬೇಕು ಎಂದು. ಮಾರ್ಗದರ್ಶನ ಮಾಡಬೇಕು ತಾವು.

ಶ್ರೀ ಹೆಚ್. ಏಕಾಂತಯ್ಯ: ನಾಳೆ ಎಲ್ಲಾ ಚರ್ಚೆ ಮಾಡಿ ಸೋಮವಾರ ಬೆಳಿಗ್ಗೆ ಉತ್ತರ ಕೊಡಬಹುದು. ಏಕೆಂದರೆ ಈಗ ಕೇವಲ ಇಬ್ಬರು ಮಾತ್ರ ಮಾತನಾಡಿದ್ದಾರೆ. ಮಾನ್ಯ ಘೋರ್ಪಡೆ ಅವರು ಮತ್ತು ಮಾನ್ಯ ವಿರೋಧಪಕ್ಷದ ನಾಯಕರು ಮಾತ್ರ ಮಾತನಾಡಿದ್ದಾರೆ. ಶನಿವಾರವೂ ಕುಳಿತುಕೊಳ್ಳುವುದಕ್ಕೆ ನಾವು ತಯಾರಾಗಿದ್ದೇವೆ.

ಶ್ರೀ ಎಸ್. ಬಂಗಾರಪ್ಪ: ಬಜೆಟ್ ವಿಚಾರದಲ್ಲಿ ಇಷ್ಟಕ್ಕೇ ಚರ್ಚೆ ಮುಕ್ತಾಯ ಆದರೆ ಒಳ್ಳೆಯದಲ್ಲ ಎಂಬುದನ್ನು ನಾನೂ ಒಪ್ಪುತ್ತೇನೆ. ಆ ವಿಚಾರದಲ್ಲಿ ಬಿಚ್ಚು ಮನಸ್ಸಿನಿಂದ ಇರೋಣ. ಸುಮ್ಮಸುಮ್ಮನೆ ಚರ್ಚೆ ಪ್ರಾರಂಭ ಮಾಡಿ ಮುಕ್ತಾಯ ಮಾಡುವುದು ಒಳ್ಳೆಯದಲ್ಲ. ನಾನು ಪಟ್ಟಿಯನ್ನು ಕೂಡ ನೋಡಿದೆ. ಆದರೆ ಎಲ್ಲರಿಗೂ ಅವಕಾಶ ಸಿಗುವುದು, ಬಿಡುವುದು ತಮಗೆ ಬಿಟ್ಟಿರತಕ್ಕ ವಿಚಾರ. ಅದನ್ನು ತಮಗೇ ಬಿಡುತ್ತೇನೆ. ಇನ್ನೂ ಸ್ವಲ್ಪ ಚರ್ಚೆ ಆಗುವುದು ಒಳ್ಳೆಯದು ಎಂದು ನನ್ನ ಭಾವನೆ. ಬೇರೆ ಮಾನ್ಯ ಸದಸ್ಯರು ಕೂಡ ಈ ಕಡೆ ಮತ್ತು ಆ ಕಡೆ ಕುಳಿತಿರತಕ್ಕವರು ಭಾಗವಹಿಸಲಿ. ಹಲವಾರು ಅವರ ಅಭಿಪ್ರಾಯಗಳನ್ನು ನಮ್ಮ ಸರ್ಕಾರಕ್ಕೆ ಉಪಯೋಗವಾಗುತ್ತದೆ ಎಂಬ ಭಾವನೆಯಿಂದ ನಾನು ಮಾತನಾಡಿದ್ದೇನೆ. ಆದರೆ ಎಷ್ಟು ಹೊತ್ತಿನವರೆಗೂ ಕುಳಿತುಕೊಳ್ಳಬೇಕು ಎಂಬುದು ತಮಗೆ ಬಿಟ್ಟಿರತಕ್ಕದ್ದು. ಸೋಮವಾರದ ದಿವಸ ಅಲ್ಲಿ ವಿಧಾನ ಪರಿಷತ್ತಿನಲ್ಲಿ ಉತ್ತರ ನೀಡಬೇಕೆಂದು ಇವತ್ತಿನ ಬಿಸಿನೆಸ್ ಅಡ್ವೈಸರಿ ಕಮಿಟಿಲ್ಲಿ ಕಾರ್ಯಕ್ರಮ ನಿಗದಿಯಾಗಿದೆ. ಅದ್ದರಿಂದ ಸೋಮವಾರ ಇಲ್ಲಿ ಆಗುವುದಿಲ್ಲ, ಇದು ಇರುವ ಕಷ್ಟ. ಅದಕ್ಕೆ ನಾನು ಏನು ಹೇಳುತ್ತೇನೆ ಅಂದರೆ ನಾಳೆ ಚರ್ಚೆ ಮಾಡಿ. ನಾಳೆ ಲೇಟಾದರೂ ಚಿಂತೆಯಿಲ್ಲ ನಾಳೆ ಲೇಟಾಗಿ ಉತ್ತರವನ್ನು ಪ್ರಾರಂಭ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹೋದವಾರವೂ ಶುಕ್ರವಾರ ನಾನ್ ಅಫಿಷಿಯಲ್ ಡೇ ಕ್ಯಾನ್ಸಲ್ ಆಯಿತು. ಏನು ಮಾಡುವುದಕ್ಕಾಗಲಿಲ್ಲ, ನಾಳೆಯೂ ನಾನ್ ಅಫಿಷಿಯಲ್ ಡೇ ಇದೆ. ಬೇಕಾದಷ್ಟು ರೆಸೆಲ್ಯೂಷನ್ಸ್ ಚರ್ಚೆ ಮಾಡತಕ್ಕದ್ದು ಕ್ಯಾನ್ಸಲ್ ಆಗುತ್ತದೆ. ಅದ್ದರಿಂದ....

ಶ್ರೀ ಎಸ್. ಬಂಗಾರಪ್ಪ : ಖಾಸಗಿ ಸದಸ್ಯರ ಕಾರ್ಯಕಲಾಪವನ್ನು ಮೊಟಕು ಮಾಡಬೇಕು ಎಂಬ ಉದ್ದೇಶದಿಂದ ನಾನು ಮಾತನಾಡುತ್ತಿಲ್ಲ, ಆದರೆ ಬಜೆಟ್ ವಿಚಾರ ಬಂದಾಗ ತಮಗೇ ಗೊತ್ತಾಗುತ್ತದೆ. ಪ್ರಾಮುಖ್ಯತೆ ಹೇಗೆ ಎಂದು. ಆ ದೃಷ್ಟಿಯಿಂದ ನಾನು ಹೇಳಿದೆ. ನಾಳೆ ಬೇಕಾದರೆ ಸ್ವಲ್ಪ ಮುಂಚೆಯೇ ಕುಳಿತುಕೊಂಡು, ನಾಳೆ ಕ್ವೆಶ್ಚನ್ ಅವರ್ ಇಲ್ಲ ಎಂದು ಕಾಣುತ್ತಿದೆ. ನಾಳೆ ಸ್ವಲ್ಪ ಮುಂಚಿತವಾಗಿ ಕುಳಿತುಕೊಂಡು, ನೇರವಾಗಿ ಚರ್ಚೆ ಪ್ರಾರಂಭ ಮಾಡಿದರೆ ನಾಳೆ ಸ್ವಲ್ಪ ಲೇಟಾಗಿ

ಕುಳಿತುಕೊಂಡು ಉತ್ತರ ಪ್ರಾರಂಭ ಮಾಡುತ್ತೇನೆ. ಸೋಮವಾರ ವಿಧಾನ ಪರಿಷತ್ತಿನಲ್ಲಿ ಉತ್ತರ ಕೊಡಲು ಆಗಲೇ ಟೈಮ್ ಫಿಕ್ಸ್ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ಸೋಮವಾರ ಬೆಳಿಗ್ಗೆ 9.30ಕ್ಕೆ ಇಲ್ಲಿ ಉತ್ತರ ಕೊಟ್ಟು 11 ಗಂಟೆ ಮೇಲೆ ವಿಧಾನಪರಿಷತ್ತಿನಲ್ಲಿ ತಾವು ಉತ್ತರ ಕೊಡಬಹುದಲ್ಲವೇ?

ಶ್ರೀ ಎಸ್. ಬಂಗಾರಪ್ಪ : ನೀವಂತೂ ಬೆಂಗಳೂರಿನಲ್ಲಿದ್ದೀರಿ. ಬೇರೆಯವರು ತಮ್ಮ ಕ್ಷೇತ್ರಗಳಿಂದ ಅಷ್ಟು ಬೇಗ ಬರಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಮಿಕ್ಕವರು ಲಂಡನ್‌ನಿಂದ ಬರುತ್ತಾರೆಂದು ತಿಳಿದುಕೊಂಡಿದ್ದೀರಾ? ಎಲ್ಲರೂ ಬರೋದು ಶಾಸಕರ ಬವನದಿಂದಲೇ.

ಶ್ರೀ ಎಸ್ ಬಂಗಾರಪ್ಪ : ಎಲ್ಲರೂ ಊರಿಂದ ಬರಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜು : ಇಲ್ಲಾ ಸರ್. ಊರಿಗೆ ಯಾರು ಹೋಗುವುದಿಲ್ಲ. ಎಲ್ಲಾ ಶಾಸಕರ ಭವನದಲ್ಲೇ ಇರುವುದನ್ನು ತಾವು ಬೇಕಾದರೆ ಬಂದು ಒಂದು ಸಾರಿ ನೋಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ವಾಟಾಳ್ ನಾಗರಾಜ್ ಅವರೇನೋ ಬೆಂಗಳೂರಿನಲ್ಲೇ ಇರುತ್ತಾರೆ. ಅವರಿಗೆ ಗೊತ್ತಾಗುವುದಿಲ್ಲ. ನಾವು ಊರಿನಿಂದ ಬರುವವರು ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಾನು ನನ್ನ ಕ್ಷೇತ್ರದಲ್ಲಿ ಇರುತ್ತೇನೆ. ಸುಮ್ಮನೆ ಹೀಗೆ ಬಾಯಿ ಬಿಡಿದುಕೊಳ್ಳುವುದು ಬೇಡ. ಶನಿವಾರ ಭಾನುವಾರಗಳಂದು ನಾನು ನನ್ನ ಕ್ಷೇತ್ರದಲ್ಲಿ ನೋಡಲು ಸಿಗುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನನಗೆ ಒಂದು ಆಶ್ಚರ್ಯ ಏನೆಂದರೆ, ವಾಟಾಳ್ ನಾಗರಾಜ್ ಹಾಗೂ ಶಿವರಾಮೇಗೌಡರಿಬ್ಬರೂ ಇಷ್ಟು ಹೊತ್ತು ಅತ್ಮೀಯತೆಯಿಂದ ಕೂತು ಮಾತನಾಡುತ್ತಿದ್ದರು. ಘೋರ್ಪಡೆಯವರು ಭಾಷಣ ಮಾಡುತ್ತಿದ್ದ ಕಾಲದಲ್ಲಿ ಅಕ್ಕಪಕ್ಕದಲ್ಲಿ ಕುಳಿತು ಮಾತನಾಡುತ್ತಿದ್ದರು. ಈಗ ಮತ್ತೆ ಒಬ್ಬರಮೇಲೊಬ್ಬರು ಮಾತನಾಡಲು ಪ್ರಾರಂಭ ಮಾಡಿದರು. ಹೀಗೆ ಇವರು ಎಲ್ಲವನ್ನೂ ಕನ್‌ಫ್ಯೂಷನಲ್ಲಿ ಇರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಶಿವರಾಮೇಗೌಡರು ಬೆಳಿಗ್ಗೆಯಿಂದ ಸದನದಲ್ಲಿ ಇರಲಿಲ್ಲ. ಈಗತಾನೇ ಅವರು ಬಂದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ವಾಟಾಳ್ ನಾಗರಾಜು ಅವರು ಹೇಳಿದಹಾಗೆ ಸೋಮವಾರ ಬೆಳಿಗ್ಗೆ ಇಲ್ಲಿ ಉತ್ತರ ಇಟ್ಟುಕೊಳ್ಳೋಣ. ಸೋಮವಾರ ಬೆಳಿಗ್ಗೆ ಎಷ್ಟುಹೊತ್ತಿಗೆ ಉತ್ತರ ಎಂದು ಹೇಳಿದರೆ ನನಗೆ ಅನುಕೂಲವಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸೋಮವಾರ ಉತ್ತರ ಕೊಡುವುದಾದರೆ, ಬೆಳಿಗ್ಗೆ 9 ಗಂಟೆಗೆ ನಾವು ನಮ್ಮ ಕ್ಷೇತ್ರದಿಂದ ಬರುವುದಕ್ಕಾಗುವುದಿಲ್ಲ. 11 ಗಂಟೆಗೆ ಉತ್ತರ ಕೊಟ್ಟರೆ ಉತ್ತಮ. ಮುಖ್ಯಮಂತಿಗಳ ಉತ್ತರದ ಸಮಯದಲ್ಲಿ ಎಲ್ಲರೂ ಇದ್ದರೆ ಚೆನ್ನಾಗಿರುತ್ತದೆ.

ಶ್ರೀ ಸಿ. ಬೈರೇಗೌಡ : ಒಬ್ಬೊಬ್ಬರಿಗೆ ಒದೊಂದು ತಾಪತ್ರೆಯ ಇರುತ್ತದೆ. ಎಲ್ಲರನ್ನೂ ಅನುಸರಿಸಿಕೊಂಡು ಹೋಗುವುದಕ್ಕಾಗುವುದಿಲ್ಲ. ಯಾರು ಕೇಳಬೇಕೆನ್ನುವವರು ಮಾತನಾಡಬೇಕೆನ್ನುವವರು ಇದ್ದಾರೆ ಅವರು ಸೋಮವಾರ ಬೆಳಿಗ್ಗೆ ಬರಲಿ.

ಶ್ರೀ ಎಸ್. ಬಂಗಾರಪ್ಪ : ರಿಪ್ಲೈ ಆದ ತಕ್ಷಣ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಇತ್ಯಾದಿಗಳು ಜೊತೆಜೊತೆಗೇ ಹೋಗುತ್ತವೆ. ಅದಕ್ಕೆ ಐದೈದು ನಿಮಿಷ ಸಾಕು.

ಇದರ ಮೇಲೆಯೇ ಎಲ್ಲರೂ ಚರ್ಚೆ ಮಾಡಿರುತ್ತಾರೆ. ಮೇಲ್ಮನೆಯಲ್ಲೂ ಕೂಡಾ ಅದೇ ಅಭಿಪ್ರಾಯ ಕೊಟ್ಟಿದ್ದಾರೆ ಅಲ್ಲೂ ಒಟ್ಟಿಗೇ ಪಾಸ್ ಮಾಡಿಕೊಡುತ್ತೇವೆಂದು ಹೇಳಿರುವುದರಿಂದ ಒಟ್ಟಿಗೇ ಚರ್ಚೆಗೆ ಹಾಕಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾಳೆ ನಾವು ಚರ್ಚೆ ಮಾಡುತ್ತೇವೆ. ಸೋಮವಾರ ಬೆಳಿಗ್ಗೆ 10 ಗಂಟೆಗೆ ಮುಖ್ಯಮಂತ್ರಿಗಳು ಉತ್ತರ ಕೊಡಲಿ. ಆದರೆ ನಾಳೆ ಖಾಸಗೀ ಕಲಾಪಗಳನ್ನು ನಿಲ್ಲಸಬಾರದು ಎಂದು ಹೇಳುತ್ತೇನೆ.

ಅಧ್ಯಕ್ಷರು : ನಾಳೆ 3 ಗಂಟೆ ಮೇಲೆ ಸ್ವಲ್ಪ ಹೊತ್ತು ಖಾಸಗೀ ಕಾರ್ಯಕಲಾಪವನ್ನು ಕೈಗೆತ್ತಿಕೊಳ್ಳೋಣ. ನಾಳೆಯ ಗಮನ ಸೆಳೆಯ ಸೂಚನೆಗಳನ್ನು ಬದಿಗೊತ್ತೋಣವೇ?

ಶ್ರೀ ಎಸ್. ಬಂಗಾರಪ್ಪ : ಖಾಸಗೀ ಕಲಾಪಗಳ ಚರ್ಚೆ ಬೇಡ ಎಂದು ನಾವು ಹೇಳುವುದಿಲ್ಲ ಆದರೆ ಒಂದು ವಿಚಾರ ಈ ಪಟ್ಟಿ ನೋಡಿದರೆ ಬಹಳ ಜನರು ಇದ್ದಾರೆ. ಈಗ ನಡೆಯುತ್ತಿರುವುದು ಎಕ್ಸ್‌ಟೆಂಡೆಡ್ ಸೆಷನ್. ಮೊನ್ನೆಯೇ ಸದನ ಕೊನೆಗೊಳ್ಳಬೇಕಾಗಿತ್ತು. ಚರ್ಚೆ ಮುಗಿಯದೇ ಖಾಸಗೀ ಕಲಾಪಗಳನ್ನು ತೆಗೆದುಕೊಂಡರೆ ನಾಳೆ ನಿಮ್ಮ ಭಾಷಣಕ್ಕೆ ತೊಂದರೆಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಕಾಲಾವಕಾಶ ಇದ್ದರೆ ಖಾಸಗೀ ಕಲಾಪ ತೆಗೆದುಕೊಳ್ಳೋಣ.

MR. SPEAKER : We will keep it alive.

ಶ್ರೀ ಎಸ್. ಬಂಗಾರಪ್ಪ : But, Let me be plain. ಚರ್ಚೆ ಸೋಮವಾರ ಉಳಿಯಬಾರದು. ಉತ್ತರ ಮತ್ತು ಅಪ್ರೋಪ್ರಿಯೇಷನ್ ಬಿಲ್ಸ್ ಪಾಸಾಗತಕ್ಕಂತಹ ವಿಚಾರ ಇರುತ್ತದೆ. ಬಜೆಟ್ ಮೇಲಿನ ಚರ್ಚೆ ನಾಳೆ ಎಷ್ಟೇ ಹೊತ್ತಾದರೂ ಮುಗಿಯಬೇಕು. ಸೋಮವಾರ ಉತ್ತರ ಮಾತ್ರ ಇಟ್ಟುಕೊಳ್ಳೋಣ.

ಅಧ್ಯಕ್ಷರು : 6 ಗಂಟೆಯಾಗಿದೆ ಇನ್ನು ಅರ್ದ ಗಂಟೆ ಕೊಡಬೇಕೆಂದು ಹೇಳಿದರೆ ಕೂರೋಣ ನಾನು ಸಿದ್ಧನಿದ್ದೇನೆ. ಶ್ರೀ ಹೆಚ್. ವಿಶ್ವನಾತ್‌ರವರೇ ತಾವು ಮಾತನಾಡಿ.

ಶ್ರೀ ಹೆಚ್. ವಿಶ್ವನಾಥ್ : 6 ಗಂಟೆಯಾಗುತ್ತಿದೆ ನಾಳೆ ಮಾತನಾಡೋಣ.

ಶ್ರೀ ಬಿ.ಎ. ಇದಿನಬ್ಬ : ಇವತ್ತು ಸ್ವಲ್ಪ ಮುಂದುವರಿಸಿ ನಾಳೆಯೇ ಎಂದರೆ ಕಷ್ಟವಾಗುತ್ತದೆ.

ಅಧ್ಯಕ್ಷರು : ಇವತ್ತು ಸಭೆ ಮುಕ್ತಾಯವಾಗಿ ನಾಳೆ ಬೆಳಿಗ್ಗೆ 9-30ಕ್ಕೆ ಸಮಾವೇಶವಾಗುತ್ತದೆ.

ಸದನವು 6-07 ಕ್ಕೆ ಮುಕ್ತಾಯವಾಗಿ ಪುನಃ 22ನೇ ಮಾರ್ಚಿ 1991 ರ 9-30 ಕ್ಕೆ ಸೇರುವುದೆಂದು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)